ಕರ್ನಾಟಕ ವಿಧಾನಸಭೆ

ಮಂಗಳವಾರ 20ನೇ ಸೆಪ್ಟೆಂಬರ್ 1994 ಸದನವು ವಿದಾನಸೌಧದಲ್ಲಿರುವ ವಿಧಾನಸಭೆಯು ಸಭಾಂಗಣದಲ್ಲಿ ಬೆಳಗ್ಗೆ 11.45 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ. ವಿ.ಎಸ್. ಕೌಜಲಗಿ ಅವರು ಪೀಠವನ್ನು ಅಲಂಕರಿಸಿದ್ದರು.

ಶ್ರೀ ಆರ್. ದಯಾನಂದರಾವ್:– ಸನ್ಮಾನ್ಯ ಅಧ್ಯಕ್ಷರೇ, ನನಗೆ ಒಂದು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು:– ಏನು ಸ್ವಾಮಿ ?

ಶ್ರೀ ಆರ್. ದಯಾನಂದರಾವ್:– ಇವತ್ತಿನ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ನಿನ್ನೆ ಶ್ರೀಮಾನ್ ಬಂಗಾರಪ್ಪನವರು ಬಾಯ್ಕಾಟ್ ಮಾಡಿದರು. ಅವರ ಜೊತೆ ನನ್ನ ಹೆಸರನ್ನೂ ಸೇರಿಸಿದ್ದಾರೆ. ''ಇಂಕ್ಲೂಡಿಂಗ್ ದಯಾನಂದರಾವ್ ಅಂತ ಇದೆ. ಇದು ರೆಕಾರ್ಡಿನಲ್ಲಿ ಏನಾದರೂ ಬಂದಿದೆಯೋ ? ಇದನ್ನು ತಾವು ನೋಟ್ ಮಾಡಬೇಕು.

† ಅಧ್ಯಕ್ಷರು:– ಇದನ್ನು ನಾನು ನೋಡುತ್ತೇನೆ.

ಶ್ರೀ ಆರ್. ದಯಾನಂದಗಾವ್:– ಈ ಒಂದು ವಿಚಾರದಲ್ಲಿ ನಮಗೂ ಮತ್ತು ಬಂಗಾರಪ್ಪನವರಿಗೂ ಯಾವುದೂ ಸಂಬಂಧ ಇಲ್ಲ. ನಮ್ಮ ಪಾರ್ಟಿಯೇ ಬೇರೆ ಅವರ ಪಾರ್ಟಿಯೇ ಬೇರೆ. This is a very serious matter. This has gone to the records. So I request the hon'ble Speaker to take out that name.

ಅಧ್ಯಕ್ಷರು:– ಇದನ್ನು ನಾನು ನೋಡುತ್ತೇನೆ ಬಿಡಿ.

ಶ್ರೀ ಆರ್. ದಯಾನಂದರಾವ್:– ಮತ್ತೊಂದು, ತಾವು ಪ್ರೆಸ್‌ನವರಿಗೆ ಈ ಬಗ್ಗೆ ಅವರು ಪುನರ್ ಪ್ರಕಟಣೆ ಮಾಡಬೇಕು ಎಂದು ಹೇಳಬೇಕು.

ಅಧ್ಯಕ್ಷರು:– ನಾನು ತೆಗೆದು ನೋಡುತ್ತೇನೆ.

ಸಭೆಯ ಮುಂದೆ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಸಿ.ಆರ್. ಸಗೀರ್ ಅಹಮದ್ (ನಗರಾಭಿವೃದ್ಧಿ ಸಚಿವರು):– ಮಾನ್ಯ ಅಧ್ಯಕ್ಷರೇ, 1987ನೇ ಸಾಲಿನ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5)ನೇ ಕಲಮಿನ ಮೇರಗೆ:

'1988ರಿಂದ 1990 ಹಾಗೂ 1992–93ನೇ ಸಾಲುಗಳ ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕ ತಪಾಸಣಾ ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು:– ವರದಿಗಳನ್ನು ಮಂಡಿಸಲಾಯಿತು.

ಶಾಸನ ರಚನಾ ಕಾರ್ಯಕಲಾಪಗಳು ಪರ್ಯಾಲೋಚನಾ ಪ್ರಸ್ತಾಪ (ಮುಂದುವರೆದ ಚರ್ಚೆ)

1) ಕರ್ನಾಟಕ ಅನುಸೂಚಿತ ಜಾತಿ. ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ

ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ, 1994

† ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ ಕ್ಷೇತ್ರ):– ಮಾನ್ಯ ಅಧ್ಯಕ್ಷರೇ, ಇದೇ ಸಂದರ್ಭದಲ್ಲಿ ನಾನು ಈ ಸದನದ ಪರವಾಗಿ ಮಾನ್ಯ ಖುರ್ಷಿದ್ ಆಲಂಖಾನ್ ಅವರನ್ನು ಎರಡನೇ ಬಾರಿಗೆ ರಾಜ್ಯಪಾಲರಾಗಿ ನೇಮಕ ಮಾಡಿರತಕ್ಕಂಥಾದ್ದನ್ನು ವೈಯಕ್ತಿಕವಾಗಿ ಸ್ವಾಗತಿಸುತ್ತೇನೆ. ಈ ಸಂದರ್ಭದಲ್ಲಿ ಅನೇಕ ಸಾರಿ ವ್ಯವಸ್ಥೆ ಬಗ್ಗೆ ಇಲ್ಲಿ ತಕರಾರು ಮತ್ತು ಜಿಜ್ಞಾಸೆಗಳನ್ನು ಮಾಡಿರತಕ್ಕಂಥಾದ್ದು ಉಂಟು. ಆದರೂ ಕೂಡ ಈ ಸಂದರ್ಭದಲ್ಲಿ ನಾನು ಅವರನ್ನು ಅಭಿನಂದಿಸಿ, ತಾವು ಕೂಡ ಅಭಿನಂದನೆ ಮಾಡಬೇಕೆಂದು ತಮ್ಮನ್ನು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ಮನವಿಯನ್ನು ಮಾಡಿ, ನಾನು ಈ ಒಂದು ಮೀಸಲಾತಿಗೆ ಸಂಬಂಧಪಟ್ಟಂಥ ಮಸೂದೆಗೆ ಸಂಬಂಧಪಟ್ಟಂಥ ಕೆಲವು ವಿಚಾರಗಳನ್ನು ಈ ಸದನದಲ್ಲಿ ತಮ್ಮ ಮೂಲಕ ಮಾನ್ಯ ಸರ್ಕಾರಕ್ಕೆ ತಿಳಿಸಬೇಕೆಂದು ಅಂದುಕೊಂಡಿದ್ದೇನೆ.

ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ಈ ಒಂದು ವಿಶೇಷವಾದಂಥ ಅಧಿವೇಶನ ಸೇರುವ ಸೂಚನೆಗಳು ನಮಗೆ ಯಾವುದೂ ಇರಲಿಲ್ಲ. ಈ ಅಧಿವೇಶನವನ್ನು ಕರೆಯತಕ್ಕಂಥ ಸೂಚನೆ ಅಥವಾ ಇಂಗಿತವನ್ನು ಮಾನ್ಯ ಮುಖ್ಯಮಂತ್ರಿಗಳು ನಮಗೆ ಯಾವುದನ್ನೂ ಕೊಟ್ಟಿರಲಿಲ್ಲ. ಮತ್ತು ಈ ಒಂದು ಮಸೂದೆ ಸದನದಲ್ಲಿ ಮಂಡನೆಯಾದಾಗ, ಆ ಮುನ್ಸೂಚನೆ ಸಹ ನಮಗೆ ಕಂಡಿರಲಿಲ್ಲ. ಆಗಲೂ ಸಹ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದೆರಡು ದಿವಸ ಸದನವನ್ನು ತಾವು ನಡೆಸತಕ್ಕದ್ದು ಒಳ್ಳೆಯದು, ಇದರ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕಾಗುತ್ತದೆ ಎಂದು ಹೇಳಿದೆ. ಆದರೆ ಅವರು ಚರ್ಚೆಗೆ ತಯಾರಾಗಿರಲಿಲ್ಲ ಮತ್ತು ಈ ಮಸೂದೆ ಬಗ್ಗೆ ಅಷ್ಟೊಂದು ತೀವ್ರತೆ ಮತ್ತು ಕಾಳಜಿ ಈ ಮಸೂದೆಯನ್ನು ಮಂಡಿಸಿದಾಗ ಕೂಡ ಅವರಿಗೂ ಇರಲಿಲ್ಲ. ಇವತ್ತು ಇದ್ದಕ್ಕಿದ್ದ ಹಾಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದನಂತರ ತರಾತುರಿಯಲ್ಲಿ ಅವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರವಾಸದಲ್ಲಿದ್ದಾಗ, ನಾವು 19, 20ರಂದು ಸದನವನ್ನು ಕರೆಯುತ್ತೇವೆ ಎಂದು ಹೇಳಿದರು. ಮತ್ತೆ ಅವರು ಸದನವನ್ನು ಯಾವಾಗ ಕರೆಯುತ್ತಾರೆ ಮತ್ತು ಯಾವಾಗ ಮುಂದೂಡುತ್ತಾರೆ ಎನ್ನತಕ್ಕ ಮುನ್ಸೂಚನೆ ನಮಗಂತೂ ಇದುವರೆಗೂ ಕಾಣುತ್ತಾ ಇಲ್ಲ. ಇದು ಇದೇ ಮೊದಲಲ್ಲ. ಅನೇಕ ಬಾರಿ, ಹೀಗೆ ನಡೆದಿದೆ. ಸ್ವಲ್ಪ ಹೆಚ್ಚು ಕಡಿಮೆ, ಮಾನ್ಯ ಅಧ್ಯಕ್ಷರಿಗೂ ಕೂಡ ಇದರ ಇಂಗಿತ ಗೊತ್ತಾಗುವುದಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ತಾವು ಮತ್ತು ಉಪಾಧ್ಯಕ್ಷರಿಬ್ಬರೂ ತಮಗೆ ಯಾವುದಾದರೂ ವಿದೇಶದಿಂದ ಆಹ್ವಾನ ಬಂದು ತಾವಿಬ್ಬರೂ ಹೊರಟರೆ, ತಕ್ಷಣ ಅದಕ್ಕೊಂದು ದೊಡ್ಡ ಸರ್ಕಸ್ಸೇ ಆಗಬೇಕಾಗುತ್ತದೆ. ತಾವು ಅಲ್ಲಿಂದ ಹಿಂದುರುಗಿ ಬರುವ ಹಾಗೆ ಮಾಡಬೇಕು ಅಥವಾ ಬೇರೆ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕಾಗುತ್ತದೆ. ನಮ್ಮ ಸರ್ಕಾರದ ನಿರ್ಧಾರಗಳು, ನೀತಿಗಳನ್ನು ನೋಡಿದರೆ, ಯಾವ ಗಳಿಗೆಯಲ್ಲಿ ರಾತ್ರೋರಾತ್ರಿ ಬೇಕಾದರೆ ಸದನವನ್ನು ಕರೆದುಬಿಡುತ್ತಾರೆ. ಬೆಳಿಗ್ಗೆ ಬೇಕಾದರೆ ಕರೆಯುತ್ತಾರೆ. ಈ ಸದನವನ್ನು ಅವರು ಯಾವ ರೀತಿಯಲ್ಲಿ ಇಟ್ಟುಕೊಂಡಿದ್ದಾರೆ ಎಂದರೆ, ಬಹಳ ಅತ್ಯಂತ ಲಘುವಾಗಿ, ತಮ್ಮ ಇಚ್ಛೆ ಬಂದ ಹಾಗೆ ಈ ಸದನವನ್ನು ನಡೆಸಿಕೊಂಡು ಹೋಗಬಹುದು ಎಂದು ತಿಳಿದಿದ್ದಾರೆ. ಅವರ ದೃಷ್ಟಿಯಲ್ಲಿ, ಈ ಸದನದ ಗಾಂಭೀರ್ಯತೆ, ಈ ಸದನದ ಗೌರವ, ಈ ಸದನವನ್ನು ಯಾವ ರೀತಿ ನಾವು ಕಾಣಬೇಕು ಎನ್ನತಕ್ಕ ನಿರ್ಧಾರ ಸರ್ಕಾರಕ್ಕೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಏಕೆಂದರೆ ಅವರು ಇದನ್ನು ಸಚಿವ ಸಂಪುಟದ ತರಹ ಎಂದು ತಿಳಿದುಕೊಂಡುಬಿಟ್ಟಿದ್ದಾರೆ. ಯಾವಾಗ ಬೇಕಾದರೂ ಸಚಿವ ಸಂಪುಟವನ್ನು ಕರೆಯುವುದು, ಯಾವಾಗ ಬೇಕಾದರೂ ಅವರ ಪಕ್ಷದ ಸಭೆಯನ್ನು ಕರೆಯುವುದು, ಆ ರೀತಿ ಈ ಸದನವನ್ನು ತಿಳಿದುಕೊಂಡರೆ, ಈ ಸದನಕ್ಕೆ ಇರತಕ್ಕಂಥ ಮಹತ್ವ ಮತ್ತು ಈ ಸದನಕ್ಕೆ ಇರತಕ್ಕಂಥ ಗೌರವವನ್ನು ಈ ಸರ್ಕಾರವೇ

ಅದನ್ನು ಕಳಾಹೀನವನ್ನಾಗಿ ಮಾಡುವುದಕ್ಕೆ ಹೊರಟಿದೆ. 19 ಮತ್ತು 20ರಂದು ಈ ಸದನವನ್ನು ಕರೆದಿದ್ದಾರೆ. ನಾನು ಯಾರ ಮೇಲೆ ಮುನಿಸಿಕೊಳ್ಳಬೇಕು ? ನಮಗೆ ಸರ್ಕಾರದ ಮೇಲೂ ಆಗುವುದಿಲ್ಲ, ಈ ಸದನದ ಮೇಲೆ ಮುನಿಸಿಕೊಳ್ಳಲಿಕ್ಕೆ ನಾನಂತೂ ತಯಾರಿಲ್ಲ. ನನಗಂತೂ ಈ ಸದನದ ಬಗ್ಗೆ ಅಪಾರವಾದಂಥ ಗೌರವ ಇದೆ; ಅಪಾರವಾದಂಥ ವಿಶ್ವಾಸ ಇದೆ. ಈ ಸದನ ಬಹಳ ಶಕ್ತಿಯುತವಾಗಿ, ನಮ್ಮ ಪ್ರಜಾಪ್ರಭುತ್ವದಲ್ಲಿ ಇರಬೇಕೆಂದು ಹೇಳುವ ಮನುಷ್ಯ ನಾನು. ಅಂಥಾದ್ದರಲ್ಲಿ ನನಗೆ ಸದನಕ್ಕೆ ಬರತಕ್ಕಂಥದ್ದಕ್ಕೆ ಅಥವಾ ಬಹಿಷ್ಕಾರ ಹಾಕತಕ್ಕಂಥ ನೀತಿ ನನಗೆ ಇಲ್ಲ. ಆದರೆ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷಗಳ ಸಭೆಯನ್ನು ಏನು ಕರೆದಿದ್ದರು, ಅದು ಒಂದು ರೀತಿಯಲ್ಲಿ ನಾಟಕೀಯ ಅದನ್ನು ಅವರ ಇಚ್ಛೆ ಬಂದ ಹಾಗೆ ಯಾವಾಗ ಬೇಕಾದರೂ ಕರೆದುಬಿಡುತ್ತಾರೆ. ಎಲ್ಲಾ ವಿರೋಧ ಪಕ್ಷಗಳ ಸಭೆಯನ್ನು ಇಂತಹ ತಾರೀಖು ನಾವು ಕರೆದಿದ್ದೇವೆ ಎಂದು ಹೇಳಿ ದಕ್ಷಿಣ ಕನ್ನಡ ಜಿಲ್ಲೆಯ ಯಾವುದೋ ಒಂದು ತಾಲ್ಲೂಕಿನಲ್ಲಿ ಹೇಳಿಬಿಡುತ್ತಾರೆ. ನಾವು ರೆಡಿಯಿರಬೇಕು. ಮುಖ್ಯಮಂತ್ರಿಗಳು ಸಭೆಯನ್ನು ಕರೆದಿದ್ದಾರೆ, ನಾವು ಎಲ್ಲಿಯೂ ಹೋಗುವುದು ಬೇಡ, ನಾವು ಸಿದ್ಧವಾಗಿರಬೇಕು. ಮೂರನೆಯ ಮಹಡಿ, 126ನೇ ನಂಬರಿನಲ್ಲಿ ವಿರೋಧ ಪಕ್ಷಗಳ ಸಭೆಯನ್ನು ಕರೆದಿದ್ದೇವೆ. ಅವರ ಕಾರ್ಯದರ್ಶಿಗಳು ನಮಗೊಂದು ಪತ್ರವನ್ನು ಬರೆಯುತ್ತಾರೆ. 'ನಿಮ್ಮನ್ನೆಲ್ಲ ಕರೆದಿದ್ದೇವೆ, ನೀವು ಬರಬೇಕು' ಎಂದು. ನಾವು ಕಾದೇ ಇರಬೇಕು ನೋಡಿ. ಯಾವ ಗಳಿಗೆಯಲ್ಲಿ ಮುಖ್ಯಮಂತ್ರಿಗಳು ಅಪ್ಪಣೆ ಕೊಡಿಸುತ್ತಾರೋ, ಯಾವ ಗಳಿಗೆಯಲ್ಲಿ ಆದೇಶ ಕೊಡಿಸುತ್ತಾರೋ, ನಾವಂತೂ ಕಾದಿರಬೇಕು.

ಮಾನ್ಯ ತಿಮ್ಮಪ್ಪನವರೇ ತಮಗೆ ಗೊತ್ತಿದೆ. ಎಲ್ಲದಕ್ಕೂ ನಾವು ತಯಾರಾಗಿ ನಿಂತಿರಬೇಕು. ವಿರೋಧ ಪಕ್ಷಗಳು ಎಂದು ಹೇಳಿದರೆ ಆ ಪರಿಸ್ಥಿತಿ. ಸಭೆಯೆಂದರೆ ಈ ಪರಿಸ್ಥಿತಿ. ಸಭೆಯ ಹಣೆಬರಹವನ್ನೂ ಹಾಗೆ ಮಾಡಿದ್ದೀರಿ, ವಿರೋಧ ಪಕ್ಷಗಳ ಸಭೆ ಕರೆಯುವುದಕ್ಕೂ ಈ ಪರಿಸ್ಥಿತಿಯನ್ನು ಮಾಡಿದ್ದೀರಿ. ವಿರೋಧ ಪಕ್ಷದ ಸಭೆಯನ್ನು ಕರೆಯಿರಿ. ಆದರೆ ನೀವು ವಿರೋಧ ಪಕ್ಷಗಳ ಸಭೆಯನ್ನು ಯಾವಾಗ ಕರೆದಿರಿ ? ನಿಮ್ಮ ಈ ಚಿನ್ನಪ್ಪರೆಡ್ಡಿಯವರ ವರದಿಯನ್ನು ನೀವು ಕಾಲಕಾಲಕ್ಕೆ ಏನು ಬದಲಾವಣೆಯನ್ನು ಮಾಡಿಕೊಂಡು ಬಂದಿರಿ, ಯಾವಾಗಲಾದರೂ ಒಂದು ಸಾರಿ ಈ ವರದಿಯನ್ನು ನಾವು ತರಬೇಕೆಂದು ಮಾಡಿದ್ದೇವೆ, ಈ ವರದಿಯ ಬಗ್ಗೆ ನಿಮ್ಮ ಸಲಹೆಗಳು ಏನು ? ಎಂದು ಏನಾದರೂ ನಮ್ಮನ್ನು ಕೇಳಿದ್ದೀರಾ ? ಇನ್ನೂ ನಾವು ಸಚಿವ ಸಂಪುಟಕ್ಕೂ ತಂದಿಲ್ಲ, ಎಲ್ಲೂ ಮಾತನಾಡಿಲ್ಲ,' ಮೊದಲು ವಿರೋಧ ಪಕ್ಷಗಳ ಸಭೆಯಲ್ಲಿ ನಿಮ್ಮ ಜತೆ ಮಾತುಕತೆ ಆದ ಮೇಲೆ ನಾವು ಇದರ ಬಗ್ಗೆ ಒಂದು ನಿರ್ಧಾರಕ್ಕೆ ಬರೋಣ ಎಂದು ಸಭೆ ಕರೆದಿದ್ದೀರಾ ? ತಾವು ತಾಲ್ಲೂಕು ಪಂಚಾಯಿತಿ, ಸಮಿತಿಯನ್ನು ಮುಂದೂಡತಕ್ಕಂಥ ಸಂದರ್ಭದಲ್ಲಿ ಇದನ್ನು ನೀವು ಏನು ತಂದಿರಿ, ಆವಾಗ ನಮ್ಮನ್ನು ನೀವು ಕರೆಯಬಹುದಾಗಿತ್ತು. ನಾವು ಇದನ್ನು ತರಬೇಕೆಂದು ಮಾಡಿದ್ದೇವೆ, ತಾವು ಬನ್ನಿ ಕುಳಿತು ಮಾತನಾಡೋಣ, ಬಹಳ ದಿವಸಗಳಿಂದ ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿ ಮಾಡಬೇಕು ಎಂದು ನಿಮ್ಮ ಒತ್ತಾಯವೂ ಇದೆ, ನಮ್ಮ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲೂ ಇದೆ ಎಂದು ಕರೆದಿದ್ದೀರಾ ? ಇಲ್ಲ. ಪ್ರಣಾಳಿಕೆಯಲ್ಲಿ ಬಂದನಂತರ ಇಬ್ಬರು ಮುಖ್ಯಮಂತ್ರಿಗಳು ಚಿನ್ನಪ್ಪ ರೆಡ್ಡಿ ವರದಿಯನ್ನು ಕಾರ್ಯಗತ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಅದನ್ನು ಕಾರ್ಯಗತ ಮಾಡಲಿಲ್ಲ. ನಾನು ಮಾಡುತ್ತಿದ್ದೇನೆ, ನೀವು ನನಗೆ ಸಹಕಾರ ಕೊಡಬೇಕು ಎಂದು ಹೇಳಿ ನೀವೇನಾದರೂ ಸಭೆಯನ್ನು ಕರೆದಿದ್ದರೆ, ನಾವು ಖಂಡಿತವಾಗಿಯೂ ಚಾಚೂತಪ್ಪದೆ ಬರುತ್ತಿದ್ದೆವು ಸ್ವಾಮಿ. ಆದರೆ ಚಿನ್ನಪ್ಪ ರೆಡ್ಡಿ ವರದಿಯನ್ನು ಹೆಜ್ಜೆಹೆಜ್ಜೆಗೂ ವಿಕೃತ ಮಾಡಿ, ಪುಟಪುಟಗಳನ್ನೂ ಬದಲಾವಣೆ ಮಾಡಿ, ಅಕ್ಷರಗಳನ್ನು ಸಹ ಬದಲಾವಣೆ ಮಾಡಿ, ಹೆಸರಿಗೆ ಮಾತ್ರ ಮೇಲ್ಗಡೆ 'ಚಿನ್ನಪ್ಪ ರೆಡ್ಡಿ ವರದಿ ಅಂತ ಹಾಕಿಕೊಂಡು, ಒಂದು ಕಡೆ ಕುದೂರು ಆಯೋಗವನ್ನು ನೇಮಕ ಮಾಡಿ, ಮತ್ತೊಂದು ಕಡೆ ಚಿನ್ನಪ್ಪ ರೆಡ್ಡಿ ಆಯೋಗದ

ವರದಿಯನ್ನು ನಿಮ್ಮ ಇಚ್ಛೆಗೆ ಬಂದ ಹಾಗೆ, ಯಾವ್ಯಾವ ಗಳಿಗೆಯಲ್ಲಿ ಇದನ್ನು ಉಪಯೋಗಿಸಿಕೊಳ್ಳಬೇಕೋ, ಆ ರೀತಿ, ಉಪಯೋಗಿಸಿಕೊಂಡು, ಗಳಿಗೆಯಲ್ಲಿ ನೀವು ಮುಳುಗುವಾಗ, ಪಾತಾಳದಲ್ಲಿ ಬಿದ್ದಾಗ, ನಮ್ಮನ್ನು ಪಾತಾಳ ಗರಡಿ ರೀತಿಯಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಇದೊಂದು ನಾಟಕ. ವಿರೋಧ ಪಕ್ಷದವರನ್ನೂ ಕರೆದಿದ್ದೇವೆ, ಸಭೆಯನ್ನೂ ಕರೆದಿದ್ದೇವೆ. ಚರ್ಚೆಯನ್ನೂ ಮಾಡಿದ್ದೇವೆ, ನಾವೆಲ್ಲ ಒಗ್ಗಟ್ಟಾಗಿ ತಂದು ಈ ಮಸೂದೆಯನ್ನು ಮಂಡಿಸುತ್ತಾ ಇದ್ದೇವೆ ಎಂದು ಹೇಳಿ ಜನರಿಗೆ ತೋರಿಸತಕ್ಕಂಥ ಒಂದು ನಾಟಕೀಯತೆ ಇದೆಯಲ್ಲ, ಇದು ಸರಿಯಲ್ಲ.

ಇದು ಹೃದಯ ವಸ್ತು ಸ್ಥಿತಿ ಮಾನ್ಯ ಕಾಗೋಡು ತಿಮ್ಮಪ್ಪನವರು ನನ್ನ ಅತ್ಯಂತ ಆತ್ಮೀಯ ಸ್ನೇಹಿತರು. ಈ ಸಭೆಯಲ್ಲಿ ನೀವು ವಸ್ತುಸ್ಥಿತಿ ಏನು ಎನ್ನುವುದನ್ನು ಹೇಳಿ. ತಪ್ಪಾಗಿ ಎಂದು ಕ್ಷಮಾಪಣೆ ಕೇಳಿ ಏನಾಗುತ್ತದೆ. ಏನಾದರೂ ನಿಮ್ಮ ಬಿರುದು ಬಾವಲಿಗಳು ಇವೆಯಲ್ಲ ಅವು ಹೊರಟು ಹೋಗುತ್ತವೆಯೇ ? ಎಲ್ಲೂ ಹೋಗುವುದಿಲ್ಲ ವಸ್ತುಸ್ಥಿತಿ ಏನು ಎನ್ನತಕ್ಕಂಥಾದ್ದನ್ನು ನೀವು ಜನರ ಮುಂದೆ ಇಡಿ, ನಾವು ಹಿಂದುಳಿದ ವರ್ಗದವರ ಹೆಸರಿನಲ್ಲಿ ಸಾಮಾಜಿಕ ನ್ಯಾಯವನ್ನು ಪಡೆಯದೇ ವಂಚಿತರಾಗಿರುವವರ ಹೆಸರಿನಲ್ಲಿ ನಾವು ಚೆಲ್ಲಾಟ ಆಡತಕ್ಕ ವಿಚಾರ ಬೇಡ. ಪ್ರಾಮಾಣಿಕತೆಯಿಂದ ಹೇಳಿ ಇದರಲ್ಲಿ ಏನಿದೆ ? ನಾವು ಹೇಗಿದ್ದೇವೆಂದು ನಿಮ್ಮ ಹೃದಯವನ್ನು ಮನಸ್ಸು ಬಿಚ್ಚಿ ಪ್ರಾಮಾಣಿಕವಾಗಿ ಜನರ ಮುಂದೆ ಹೇಳಿ. ಅದರಲ್ಲಿ ಏನು ? ಯಾರು ಸಾಮಾಜಿಕ ನ್ಯಾಯಕ್ಕೆ ವಂಚಿತರಾಗಿದ್ದಾರೆ. ಅವರಿಗೆ ಸಮಗ್ರವಾಗಿ ಸಾಮಾಜಿಕ ನ್ಯಾಯ ದೊರಕಬೇಕು ಎನ್ನತಕ್ಕಂಥಾದ್ದರಲ್ಲಿ ನಮ್ಮದು ಯಾರದು ಅಭ್ಯಂತರ ಇಲ್ಲ. ಪ್ರಾಮಾಣಿಕವಾಗಿ ನಿಮ್ಮ ಜೊತೆಯಲ್ಲಿ ನಿಲ್ಲುತ್ತೇವೆ ಇದರಲ್ಲಿ ಏನೂ ಹಿಂದೆ ಮುಂದೆ ಹೋಗತಕ್ಕಂಥವರು ಇಲ್ಲ. ಅದರಲ್ಲೂ ಯಾರಿಗೆ ಸಾಮಾಜಿಕ ನ್ಯಾಯ ದೊರಕಬೇಕು. ಆ ಜನಾಂಗಕ್ಕೆ ಪ್ರಾಮಾಣಿಕವಾಗಿ ಸಾಮಾಜಿಕ ನ್ಯಾಯ ದೊರಕಬೇಕು ಎನ್ನುವುದರಲ್ಲಿ ನಮ್ಮದು ಎರಡನೇ ಅಭಿಪ್ರಾಯ ಇಲ್ಲ. ಆದರೆ ನೀವು ಮಾಡುವಾಗ ಈ ವರದಿಯನ್ನು ನಾವು ತೆಗೆದುಕೊಳ್ಳುತ್ತೇವೆ. ನಮ್ಮ ಸರ್ಕಾರ ಮಾಡುತ್ತದೆ ಎನ್ನುವಾಗ ಯಾವತ್ತೂ ಸಹ ನಮ್ಮ ವಿರೋಧ ಪಕ್ಷದವರನ್ನು ಕರೆದಿಲ್ಲ. ನಿಮ್ಮ ಮೇಲೆ ವೈಯುಕ್ತಿಕವಾಗಿ ದ್ವೇಷ ಏನೂ ನನಗೆ ಇಲ್ಲ. ಸರ್ಕಾರದ ಮೇಲಾಗಲಿ ಮುಖ್ಯಮಂತ್ರಿಗಳ ಮೇಲಾಗಲಿ ನಮಗೇನೂ ದ್ವೇಷ ಇಲ್ಲ. ಪ್ರತಿ ಸಾರಿ ಕಾವೇರಿ ಬಗ್ಗೆ ಸಭೆ ಕರೆದಾಗ ಬಂದಿದ್ದೇವೆ ಎಲ್ಲಾ ಸಂದರ್ಭದಲ್ಲೂ ಬಂದಿದ್ದೇವೆ. ಚಿನ್ನಪ್ಪ ರೆಡ್ಡಿ ವರದಿಯನ್ನು ನೀವು ಹೆಜ್ಜೆಹೆಜ್ಜೆಗೂ ಬದಲಾವಣೆ ಮಾಡುವಾಗ ನಮ್ಮನ್ನು ಏನಾದರೂ ಒಂದು ಮಾತನ್ನು ಕೇಳಿದ್ದೀರಾ ? ಖಂಡಿತವಾಗಿ ಕೇಳಲಿಲ್ಲ. ಮೊನ್ನೆ ವಿಧಾನಸಭೆಯಲ್ಲಿ ಮಂಡಿಸುವಾಗ ಅದಕ್ಕಿಂತ ಮುಂಚೆ ಈ ಮಸೂದೆಯನ್ನು ಮಂಡಿಸಿದರಲ್ಲ ಸ್ವಾಮಿ ಅಧ್ಯಕ್ಷರೇ ಅವತ್ತೂ ಸಹ ನಮ್ಮನ್ನು ಕೇಳಲಿಲ್ಲ. ಮುಂಚಿತವಾಗಿ ಕರೆದು ಈ ತರಹ ಸಭೆಯ ತೆರೆಮರೆಯಲ್ಲಿ ಈ ತರಹ ಮಸೂದೆ ಮಂಡಿಸುತ್ತಿದ್ದೇವೆ ನಮ್ಮ ನೀತಿ ಇಷ್ಟು ಇದೆ, ನಾವು ಶೇಕಡಾವಾರು ಇಷ್ಟು ಇರಬೇಕೆಂದು ಮಾಡಿದ್ದೇವೆ ನಿಮ್ಮ ನಿರ್ಧಾರಗಳು ಏನು ಎನ್ನುವುದಾದರೂ ಕೇಳಬೇಕೇ ? ಅದನ್ನು ಕೇಳಲಿಲ್ಲ. ಇವತ್ತು ನಿಮಗೆ ಇದ್ದಕ್ಕಿದ್ದ ಹಾಗೆ ವಿರೋಧ ಪಕ್ಷಗಳು ಗಮನಕ್ಕೆ ಬಂತು, ಸುಪ್ರೀಂ ಕೋರ್ಟ 50ರ ಮೇಲೆ ಮೀರಕೂಡದು ಅಂತ ಹೇಳಿದ ತಕ್ಷಣ ನೀವು ನಮ್ಮನ್ನು ಒಂದು ಕಡೆ ಕರೆದಿದ್ದೀರಿ. ಉನ್ನತ ಶಿಕ್ಷಣ ಸಚಿವರು ಮತ್ತು ಮುಖ್ಯಮಂತ್ರಿಗಳು ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಚಾಚುತಪ್ಪದೇ ಪಾಲಿಸುತ್ತೇವೆಂದು ಒಂದು ಕಡೆ ಹೇಳುತ್ತೀರಿ. ಮತ್ತೊಂದು ಕಡೆ ಹೇಳುತ್ತೀರಿ ವಿರೋಧ ಪಕ್ಷದವರ ಜೊತೆ ಮಾತುಕತೆ ಆಡಬೇಕೆಂದು ಇನ್ನೊಂದು ಕಡೆ ಹೇಳುತ್ತೀರಿ ಸಭೆಯನ್ನು 19–20 ಕರೆದಿದ್ದೇವೆಂದು ಹೇಳುತ್ತೀರಿ. ಒಂದಕ್ಕೊಂದು ಗೊಂದಲ ಮಾಡಿದ್ದೀರಿ. ಆಯಿತು ಸ್ವಾಮಿ ಗೊಂದಲವನ್ನು ಮಾಡಿ, ಆದರೆ ಎಷ್ಟು ಸಾರಿ ನೀವು ಗೊಂದಲ ಮಾಡಬೇಕು, ಗೊಂದಲ ಮಾಡುವುದಾದರೆ ಒಂದು ತೀರ್ಮಾನಕ್ಕೆ ಬನ್ನಿ

ನೀವು 73 ಇರಬೇಕೇ 80 ಇರಬೇಕೇ ಎಷ್ಟು ಇರಬೇಕು ಎನ್ನುವ ಒಂದು ನಿರ್ಧಾರ ಬೇಕಲ್ಲ. ಬೆಳಗ್ಗೆ ಒಂದು ತೀರ್ಮಾನ, ಮಧ್ಯಾಹ್ನ ಒಂದು ತಿರ್ಮಾನ, ನಿಮ್ಮ ನಿರ್ಧಾರಗಳು ಯಾವುದರ ಮೇಲೆ ತೀರ್ಮಾನ ಆಗುತ್ತಿವೆ. ಒತ್ತಡಗಳ ಮೇಲೋ ಯಾವುದರ ಮೇಲೆ ತೀರ್ಮಾನ ಆಗುತ್ತಿವೆ ನಿಮ್ಮ ನಿರ್ಧಾರಗಳು. ನಿರ್ಧಾರಗಳನ್ನು ಮಾಡುವಾಗ ನಾನೇನು ತಮಗೆ ಹೇಳುತ್ತಿದ್ದೇನೆಂದರೆ ಒಂದು ಸಾರಿ ಸಾಮಾಜಿಕ ನ್ಯಾಯ ಯಾರ್ಯಾಗೆ ಅನ್ಯಾಯವಾಗಿದೆ ಎನ್ನತಕ್ಕಂಥ ಮಾತನ್ನು ತಾವು ಏನು ಹೇಳುತ್ತಿದ್ದೀರಿ ಒಂದು ತೀರ್ಮಾನಕ್ಕೆ ಬನ್ನಿ. ಇದು ನಮ್ಮ ನಿರ್ಧಾರ. ಈ ನಿರ್ಧಾರ ಬಿಟ್ಟು ನಾವು ಅತ್ತ ಇತ್ತ ಹೋಗುವುದಿಲ್ಲ ಎನ್ನುವ ಒಂದು ತೀರ್ಮಾನಕ್ಕೆ ತಾವು ಬರುವುದಾದರೆ ನಮ್ಮದೇನೂ ಅಭ್ಯಂತರ ಇಲ್ಲ. ಈ ಸಂದರ್ಭದಲ್ಲಿ ನಾನು ಏಕೆ ಈ ಮಾತನ್ನು ಹೇಳಿದೆ. ಆ ದೃಷ್ಟಿಯಿಂದ ನಾವ್ಯಾರು ವಿರೋಧ ಪಕ್ಷದವರು ಮುಖ್ಯಮಂತ್ರಿಗಳು ಕರೆದ ಸಭೆಗೆ ಹೋಗಲಿಲ್ಲ ಇದು ಒಂದು. ಸರ್ಕಾರಕ್ಕೆ ಸಭೆ ಆದ ನಂತರ ನಾವೆಲ್ಲ ಬರುವುದಿಲ್ಲ ಎಂದು ಹೇಳಿದ್ದೇವೆ. ಮತ್ತೆ ಮುಖ್ಯಮಂತ್ರಿಗಳು ಪತ್ರಕರ್ತರಿಗೆ ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರು ನಮಗೆ ಪತ್ರ ಬರೆದಿದ್ದಾರೆ. ಇನ್ನು ಎರಡು ದಿವಸ ಬಿಟ್ಟು ಬರುತ್ತಿದ್ದೇನೆ ಎಂದು ಅವರ ಕಾರ್ಯಾಲಯದಿಂದ ಪತ್ರ ಬಂದಿದೆ, ಅವರಿಂದಲ್ಲ. ಅವರ ಕಾರ್ಯಾಲಯದಿಂದ ಪತ್ರ ಇವರೇ ಬರೆಯಿಸಿಕೊಂಡರೋ ಅವರೇ ಕೊಟ್ಟರೋ ಹೇಗೆ ಬಂತೋ ಗೊತ್ತಿಲ್ಲ. ಪತ್ರ ಬರುತ್ತಿದೆ ಅದಕ್ಕೆ ಇನ್ನು ಎರಡು ದಿವಸ ಮುಂದಕ್ಕೆ ಹಾಕಿದ್ದೇವೆ. ಏತಕ್ಕೆ ಬೇಕಾಗಿತ್ತು? ಅವರ ಪತ್ರ ಬರುತ್ತದೆ ಮುಂದಕ್ಕೆ ಹಾಕಿದ್ದೇವೆ. ನಂಬಿಕೆ ಏನು ಅವರು, ನಾವು ಬರುವುದಿಲ್ಲ ಅಂತ ಹೇಳುತ್ತಾರೆ. ಪತ್ರ ನೀವು ನಂಬಿಕೊಂಡಿದ್ದೀರಿ, ದೇಶಪಾಂಡೆಯವರ ಬರುವುದಿಲ್ಲ ಎಂದು ಹೇಳುತ್ತಾರೆ. ನೀವು ಪತ್ರ ನಂಬುತ್ತೀರೋ ದೇಶಪಾಂಡೆಯವರನ್ನು ನಂಬುತ್ತೀರೋ. ಎಲ್ಲರೂ ಇದನ್ನು ವಿರೋಧ ಮಾಡಬೇಕು, ನಾವೂ ಸಹ ಮುಖ್ಯಮಂತ್ರಿಗಳು ಕರೆದ ಸಭೆಯನ್ನು ವೈಯಕ್ತಿಕ ದ್ವೇಷದಿಂದ ವಿರೋಧ ಮಾಡಿದ್ದುದು ಅಲ್ಲ. ಅವರ ನೀತಿ ನಿರ್ಧಾರ ಈ ಬಗ್ಗೆ ಏನು ತೆಗೆದುಕೊಂಡರು ಆದ್ದರಿಂದ ನಾವು ಹೋಗಲಿಲ್ಲ. ಬೇರೆ ಸಭೆಗಳಿಗೆ ಕರೆದಾಗಲೆಲ್ಲ ಹೋಗಿದ್ದೇವೆ. ಅವರಿಗೆ ಸಂಪೂರ್ಣವಾಗಿ ಈ ರಾಜ್ಯದ ಸಮಸ್ಯೆಗಳು ಬಂದಾಗ ಈ ರಾಜ್ಯದಲ್ಲಿ ಮಳೆ ಹಾನಿ ಬಂದಾಗ, ಕಾವೇರಿ ಸಂಬಂಧ ಬಂದಾಗ ಕೃಷ್ಣಾ ಸಂಬಂಧ ಬಂದಾಗ, ಸರ್ಕಾರದ ಜೊತೆಯಲ್ಲಿ ರಾಜ್ಯದ ಹಿತದೃಷ್ಟಿಯಿಂದ ನಾವು ಅವರ ಜೊತೆ ನಿಂತಿದ್ದೇವೆ.

ಸರ್ಕಾರಕ್ಕೆ ಭುಜಕ್ಕೆ ಭುಜ ಕೊಟ್ಟು ರಾಜ್ಯದ ಹಿತದೃಷ್ಟಿಯಿಂದ ನಾವು ನಿಂತಿದ್ದೇವೆ. ಇದರಲ್ಲಿ ನೀವು ದ್ವಂದ್ವ ನೀತಿಯನ್ನು ಅನುಸರಿಸಿ ಕೊನೆಯ ಗಳಿಗೆಯಲ್ಲಿ ನೀವು ಮಾಡಿದಂತಹ ತಪ್ಪನ್ನು, ನೀವು ಮಾಡಿದಂತಹ ಗೊಂದಲವನ್ನು ಯಾರದೋ ಮುಖಕ್ಕೆ ಮಸಿ ಬಳಿಯತಕ್ಕಂಥ ವ್ಯವಸ್ಥೆ ಏನು ನಡೆದಿತ್ತು ಅದಕ್ಕಾಗಿ ನಿಮ್ಮ ಸರ್ಕಾರದಲ್ಲಿ ಈ ವ್ಯವಸ್ಥೆಯ ದೃಷ್ಟಿಯಿಂದ ನಮಗೆ ಮುನುಸು, ಕೋಪ ಮತ್ತು ವಿರೋಧದಿಂದ ನಾರು ನಿಮ್ಮ ಸಭೆಗೆ ಬರುವುದಕ್ಕೆ ತಯಾರಾಗಿರಲಿಲ್ಲ. ಆದರೆ ಈ ಸಭೆಗೆ ನಮ್ಮ ಮುನುಸ್ಸು ಇಲ್ಲ ಎಂದು ನಾನು ಸ್ಪಷ್ಟಪಡಿಸುತ್ತೇನೆ. ಇದು ಒಂದು ಸರ್ವೋಚ್ಚ ಸದನ. ಈ ಸದನದಲ್ಲಿ ನಾವು ಏನು ಹೊರಗಡೆ ಬಹಿಷ್ಕಾರ ಹಾಕಿದ್ದೇವೆಂದು ಮೊಗಸಾಲೆಯಲ್ಲಿ ನಮ್ಮ ಜನತಾದಳದ ಸ್ನೇಹಿತರಾಗಲಿ ಬಿ.ಜೆ.ಪಿ. ಸ್ನೇಹಿತರಾಗಲಿ ಹೇಳುತ್ತಾರೆ. ಅವರನ್ನು ನಾನು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಹೊರಗೆ ಮೊಗಸಾಲೆಯಲ್ಲಿ ನಿಂತು ಹೇಳುವುದನ್ನು ಇಲ್ಲೇ ನಿಂತು ಈ ಸದನ ಸರಿ ಇಲ್ಲ ಎಂದು ಹೇಳಬಹುದು. ಮತ್ತು ಇದರ ಹಿಂದೆ ಏನೋ ದುರುದ್ದೇಶ ಇದೆ. ಆ ದುರುದ್ದೇಶದ ಕಾರಣ ನಾವು ಬಹಿಷ್ಕಾರ ಹಾಕಿದ್ದೇವೆ, ಮೀಸಲಾತಿ ಮಾಡಲು ಇದು ಸಕಾಲವಲ್ಲ ಎಂದು ಹೇಳಿ. ನಾವು ಏನೇನು ಹೇಳಬೇಕೆಂದು ಇದ್ದೇವೆ ಇದನ್ನೆಲ್ಲಾ ನಾವು ಈ ಸದನದಲ್ಲಿ ಹೇಳತಕ್ಕಂಥಾದ್ದು ನಮ್ಮ ಕರ್ತವ್ಯ. ಅದನ್ನು ಮಾಡಬೇಕಾಗಿತ್ತು ಮತ್ತೊಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ ತಾವು ಅಧ್ಯಕ್ಷರಾದವರು ವಿರೋಧ ಪಕ್ಷಗಳು ಬರಲಿಲ್ಲ, ದಳದವರು ಬರಲಿಲ್ಲ, ಬಿ.ಜೆ.ಪಿ. ಯವರು

ಬರಲಿಲ್ಲ. ಯಾರು ಬರಲಿಲ್ಲವೋ ಅವರನ್ನು ಒಂದು ಸಾರಿ ತಾವು ಕರೆಸಿ ಮಾತನಾಡಬೇಕು. ಏಕೆಂದರೆ ತಾವು ಈ ಸದನದ ಮುಖ್ಯಸ್ಥರು ಈ ಸದನದ ಪೀಠದ ಅಧಿಕಾರಸ್ಥರು. ಲೋಕಸಭೆಯಲ್ಲಿ ವಿರೋಧ ಪಕ್ಷಗಳು ಬಹಿಷ್ಕಾರ ಹಾಕಿದಾಗ ಲೋಕ ಸಭಾಧ್ಯಕ್ಷರು ಅನೇಕ ಸಾರಿ ಬರುತ್ತಾರೆ. ಸದನವನ್ನು ಕರೆದು ಕರೆದು ಕರೆದು ವಿರೋಧ ಪಕ್ಷಗಳನ್ನು ಕರೆದು ಮಾತುಕತೆ ಆಡಿ ಒಂದು ತೀರ್ಮಾನಕ್ಕೆ ಬರುತ್ತಾರೆ. ಆ ತೀರ್ಮಾನಕ್ಕೆ ತಾವು ಬಂದಿದ್ದರೆ ಚೆನ್ನಾಗಿರ್ತ್ತೇನೋ ಎಂದು ಅನ್ನಿಸುತ್ತದೆ. ತಮ್ಮಲ್ಲಿ ಮನವಿ, ನಾನು ತಮ್ಮ ಕರ್ತವ್ಯದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು:– ನನ್ನ ಪ್ರಯತ್ನ ವಿಫಲವಾಗಿದೆ.

ಶ್ರೀ ವಾಟಾಳ್ ನಾಗರಾಜ್:– ಅದರ ಬಗ್ಗೆ ತಾವು ಪ್ರಯತ್ನ ಮಾಡಿದ್ದರೆ ಬಹಳ ಸಂತೋಷ. ನಾನು ಈಗಲೂ ಕೂಡ ಈ ಮಸೂದೆಯನ್ನು ವಿರೋಧ ಮಾಡುವುದು ಸರ್ಕಾರದ ನೀತಿ ರೀತಿಗಳನ್ನು ಬಯಲಿಗೆ ಎಳೆಯುವುದು ಈ ವ್ಯವಸ್ಥೆ ಸರಿ ಇಲ್ಲ ಎಂದು ಹೇಳುವುದು ಈ ಸದನದಲ್ಲೇ ಕುಳಿತು ಇಂಥ ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕಲ್ಪಿಸುವುದಕ್ಕೆ ಇನ್ನೊಂದು ಸಾರಿ ತಾವು ಪ್ರಯತ್ನಪಟ್ಟರೆ ನನಗೆ ಬಹಳ ಸಂತೋಷ ಎಂದು ನಾನು ಹೇಳುತ್ತೇನೆ. ನಿಮ್ಮ ಮಾತಿಗೆ ಬಹುಶಃ ನಮ್ಮ ಸ್ನೇಹಿತರು ಬೆಲೆ ಕೊಡಬಹುದು ಎಂದು ನಾನು ಅಂದುಕೊಂಡಿದ್ದೇನೆ. ಈ ಸದನ ಮುಂದಕ್ಕೆ ಹೋಗುತ್ತದೆಯೋ ಏನೋ ನನಗೆ ಗೊತ್ತಿಲ್ಲ. ತಾವು ಯಾವಾಗ ಕರೆಯುತ್ತೀರೋ, ಯಾವಾಗ ಮುಂದೂಡುತ್ತೀರೋ ಅದು ನನಗೆ ಗೊತ್ತಿಲ್ಲ. ತಮಗೂ ಗೊತ್ತಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ನಮಗಂತೂ ಸ್ವಲ್ಪ ಅನುಮಾನ ಇದೆ. ಇದ್ದಕ್ಕಿದ್ದ ಹಾಗೆ ಸಭೆ ಮುಂದೂಡಿದ್ದೇವೆ ಎಂದರೆ ನಮ್ಮ ಪರಿಸ್ಥಿತಿ ಏನು ? ಇದಕ್ಕೆ ತಾವು ಏನಾದರೂ ಒಂದು ಪ್ರಯತ್ನವನ್ನು ಮಾಡಿದರೆ ಸಂತೋಷ. ಏಕೆಂದರೆ ಇಂತಹ ಸಂದರ್ಭದಲ್ಲಿ ನಮ್ಮ ಅಭಿಪ್ರಾಯವನ್ನು ನಾವು ಹೇಳೋಣ. ಸರ್ಕಾರ ಏನು ಮಾಡಿದೆ ಎಂದು ನಮ್ಮ ಅಭಿಪ್ರಾಯವನ್ನು ಹೇಳತಕ್ಕಂಥ ಒಂದು ವ್ಯವಸ್ಥೆ ಬೇಕಾಗುತ್ತದೆ. ಇದು ಬಹಳ ಅತಿ ಮುಖ್ಯವಾದಂತಹ ವ್ಯವಸ್ಥೆ. ಈ ವ್ಯವಸ್ಥೆಗಿಂತ ಇನ್ನೊಂದು ವ್ಯವಸ್ಥೆ ನಮ್ಮ ರಾಜ್ಯದಲ್ಲಿ ಇಲ್ಲ. ಈ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳಬೇಕಾದುದು ನಮ್ಮ ಕರ್ತವ್ಯ ಎನ್ನತಕ್ಕಂಥ ಮಾತನ್ನು ನಾನು ತಮ್ಮ ಮೂಲಕ ಹೇಳುತ್ತಿದ್ದೇನೆ. ಈ ಆಯೋಗಗಳ ರಚನೆ. ಹಾವನೂರು ಆಯೋಗ ರಚನೆ ಆಯಿತು. ಶ್ರೀಮಾನ್ ನ್ಯಾಯಮೂರ್ತಿ ವೆಂಕಟಸ್ವಾಮಿ ಆಯೋಗ ರಚನೆ ಆಯಿತು. ಚಿನ್ನಪ್ಪ ರೆಡ್ಡಿಯವರ ಆಯೋಗ ರಚನೆ ಆಯಿತು.

ಶ್ರೀ ಎನ್.ಜಿ. ನಾಯಕ್:– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ವಾಟಳ್ ನಾಗರಾಜ್‌ರವರು ಹೇಳುತ್ತಿದ್ದಾರೆ ಎಸ್.ಸಿ. ಎಸ್.ಟಿ. ಬ್ಯಾಕ್ವರ್ಡ್ ಅಲ್ಲ ಅವರು ಫಾರ್‌ವರ್ಡ್ ಎಂದು. ಅವರಿಗೆ ಕಾಳಜಿ ಇಲ್ಲ, ಅದಕ್ಕೋಸ್ಕರ ಸುಮ್ಮನೆ ಮಾತನಾಡುತ್ತಿದ್ದಾರೆ. ನಮ್ಮ ಗೌರ್ನಮೆಂಟ್ ಬ್ಯಾಕ್ವರ್ಡ್ ಕ್ಲಾಸ್. ಎಸ್.ಸಿ. ಎಸ್.ಟಿ.ಗೆ ಒಳ್ಳೆಯದು ಆಗಲಿ ಅಂತ ಮಾಡಿದ್ದಾರೆ. ಅವರು ಯಾವಾಗಲೂ ಅದಕ್ಕೆ ವಿರುದ್ಧವೇ. ಅದಕ್ಕೆ ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಳ್ಳಿ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್:– ನಾನು ಹೇಳಿದ್ದರೆ ತೆಗೆದುಕೊಳ್ಳುತ್ತೇನೆ ನಾನು ಆ ಮಾತನ್ನೇ ಹೇಳಲಿಲ್ಲ. ಅವರು ಅಲ್ಲಿ ಪಕ್ಕದಲ್ಲಿ ಕುಳಿತಿರುವವರ ಮಾತು ಕೇಳಿಕೊಂಡು ಹೇಳಿರಬೇಕು ಎಂದು ಕಾಣುತ್ತದೆ.

ಶ್ರೀ ಎನ್.ಜಿ. ನಾಯಕ್:– ಯಾರೂ ಹೇಳಿಕೊಟ್ಟಿಲ್ಲ, ನಾನೇ ಸ್ವತಃ ಮಾತನಾಡಿದ್ದುದು.

ಶ್ರೀ ವಾಟಾಳ್ ನಾಗರಾಜ್:– ತಾವು ನಾಲ್ಕು ಮಾತು ಹೇಳಿದರೂ ಈ ಸಭೆಯಲ್ಲಿ ತಾವು ಮಾತನಾಡಬೇಕು ಎಂದು ಹೇಳುವವನು ನಾನು.

ಶ್ರೀ ಎನ್.ಜಿ. ನಾಯಕ್:- ನಮ್ಮ ಸರ್ಕಾರ ಮೀಸಲಾತಿ ಜಾರಿಗೆ ತಂದರೆ ನಮ್ಮ ಮೊಯಿಲಿಯವರನ್ನು ಎರಡನೆಯ ಅಂಬೇಡ್ಕರ್ ಹೇಳಬಹುದು.

ಶ್ರೀ ವಾಟಾಳ್ ನಾಗರಾಜ್:- ಯಾರನ್ನು? ಆದ್ದರಿಂದ ಮಾನ್ಯ ಅಧ್ಯಕ್ಷರೇ ಆ ಒಂದು ಪ್ರಯತ್ನವನ್ನು ತಾವು ಮಾಡಬೇಕೆಂದು ಹೇಳುತ್ತೇನೆ. ಎಲ್ಲಾ ಕಾಲದಲ್ಲೂ ಆಯೋಗಗಳ ರಚನೆಯನ್ನು ವಸ್ತು ಸ್ಥಿತಿ ಬಗ್ಗೆ ಪ್ರಾಮಾಣಿಕವಾಗಿ ಮಾತನಾಡೋಣ. ನಮ್ಮ ರಾಜಕೀಯಕ್ಕೆ ತಕ್ಕಂಥೆ, ಒತ್ತಡಗಳಿಗೆ ತಕ್ಕಂತೆ, ನಾನಾ ಕಾರಣಗಳಿಗೆ ಮಾಡಿದ್ದೇವೆ. ಒಂದು ಆಯೋಗವನ್ನು ರಚನೆ ಮಾಡಿದಾಗ ನಮಗೆ ಒಂದು ನೀತಿ ಬೇಕು ಮತ್ತು ಒಂದು ಪ್ರಾಮಾಣಿಕತೆ ಬೇಕು. ಯಾವ ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಆಯೋಗಗಳನ್ನು ರಚನೆ ಮಾಡುತ್ತೇವೆ ಆ ಆಯೋಗ ಕೊಟ್ಟಂತಹ ವರದಿಯನ್ನು ನಾವು ಚಾಚೂತಪ್ಪದೆ ಪ್ರಾಮಾಣಿಕವಾಗಿ ಆ ವರದಿಯನ್ನು ಅನುಷ್ಠಾನಕ್ಕೆ ತರತಕ್ಕಂಥಾದ್ದು ನಮ್ಮ ಕರ್ತವ್ಯವಾಗಬೇಕು. ತೀರಾ ಮಿತಿ ಮೀರಿದಾಗ ಎಲ್ಲೋ ಅಲ್ಪಸ್ವಲ್ಪ ಬದಲಾವಣೆ ಮಾಡಬೇಕು. ಸಾಮಾನ್ಯವಾಗಿ ಆಯೋಗಗಳ ಬಗ್ಗೆ ನಾನು ತಿಳಿದುಕೊಂಡಿರತಕ್ಕಂಥ ವಿಚಾರ ಇದು.

ಹಾವನೂರು ಆಯೋಗದ ವರದಿಯು ಬಂದು ಅದರ ಬಗ್ಗೆ ವಾದ-ವಿವಾದಗಳು ನಡೆದುವು. ಆ ವರದಿಯು ಸರಿ ಇಲ್ಲ ಎಂದು ಸುಟ್ಟು ಹಾಕಿದ್ದೂ ಉಂಟು. ಅದರಲ್ಲಿ ಅನೇಕ ಬದಲಾವಣೆಗಳು ಆದುವು. ವೆಂಕಟಸ್ವಾಮಿ ಆಯೋಗ ರಚನೆಯಾಗಿ ಅವರು ಒಂದು ವರದಿ ಕೊಟ್ಟರು. ಅದು ಏನಾಯಿತು? ಅದರ ಬಗ್ಗೆಯೂ ಏನೂ ಆಗಿಲ್ಲ. ಇವೊತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ಬಹಳ ದೊಡ್ಡದಾಗಿ ಮಾತನಾಡಿದರು, ಈಗ ಅವರು ಇಲ್ಲಿ ಇಲ್ಲ, ಇದ್ದಿದ್ದರೆ ನಾನು ಹೇಳುತ್ತಾ ಇದ್ದೆ. ವೆಂಕಟಸ್ವಾಮಿ ವರದಿಯು ಅವರ ಕಾಲದಲ್ಲಿಯೇ ಬಂದರೂ ಏನೂ ಮಾಡಲಿಲ್ಲ. ಗಂಭೀರವಾಗಿ ಅದನ್ನು ಹಾಗೆಯೇ ಇಟ್ಟರು. ಚಿನ್ನಪ್ಪ ರೆಡ್ಡಿ ಆಯೋಗದ ರಚನೆಯಾಗಿ ಅದರ ವರದಿಯೂ ಬಂತು. ಈ ವರದಿಯೂ ಇವರ ಸರಕಾರ ಬಂದಾಗಲೇ ಪ್ರಾರಂಭವಾಯಿತು. ಈ ವರದಿಯನ್ನು ನಾವು ಚಾಚೂತಪ್ಪದೆ ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುತ್ತೇವೆ ಎಂದು ಹೇಳಿದರು.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಒಂದು ಕರೆಕ್ಷನ್ ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮಾತನಾಡುತ್ತಾ ವೆಂಕಟಸ್ವಾಮಿ ವರದಿಯ ಬಗ್ಗೆ ರಾಮಕೃಷ್ಣ ಹೆಗಡೆಯವರ ಸರಕಾರ ಏನೂ ಮಾಡಿಲ್ಲ ಎಂದು ಹೇಳಿದರು. ಅದಕ್ಕೆ ನಾನು ಗೌರವಪೂರ್ವಕವಾಗಿ ಡಿಸ್‌ಅಗ್ರಿ ಆಗುತ್ತೇನೆ, ಅದು ಸರಿಯಲ್ಲ. ಆಗ ಆ ವರದಿಯನ್ನು ತಿರಸ್ಕಾರ ಮಾಡಿ, ಆಡಳಿತಾತ್ಮಕವಾದ ಆಜ್ಞೆಯನ್ನು ತಂದು ಮೀಸಲಾತಿಯನ್ನು ಶೇಕಡ **68**ಕ್ಕೆ ನಿಗದಿ ಮಾಡಿ, ಆಡಳಿತಾತ್ಮಕ ಆಜ್ಞೆಯ ಮುಖಾಂತರ ಕರ್ನಾಟಕದಲ್ಲಿ ಮೀಸಲಾತಿ ಪದ್ಧತಿಯನ್ನು ಜಾರಿಗೊಳಿಸಲಾಯಿತು.

ಶ್ರೀ ವಾಟಾಳ್ ನಾಗರಾಜ್:- ನನಗನ್ನಿಸುವುದೇನೆಂದರೆ ಯಾವ ಉದ್ದೇಶಗಳಿಗೋಸ್ಕರವಾಗಿ ನಾವು ಆಯೋಗಗಳನ್ನು ರಚನೆ ಮಾಡುತ್ತೇವೆ, ಆ ರೀತಿ ರಚನೆ ಮಾಡಿದನಂತರ ಆಯೋಗಗಳಿಗೆ ಗೌರವಾನ್ವಿತ ವ್ಯಕ್ತಿಗಳನ್ನು ನಾವು ನೇಮಕ ಮಾಡುತ್ತೇವೆ, ಅವರು ವರದಿಯನ್ನು ಕೊಡುತ್ತಾರೆ, ಅದನ್ನು ನಾವು ನಮಗೆ ಬೇಕಾದ ಹಾಗೆ ತಿರುಚಿ ಅವ್ಯವಸ್ಥೆ ಮಾಡಿ, ಪ್ರತಿಯೊಂದು ಅಕ್ಷರವನ್ನೂ ಅಕ್ಷರಶಃ ಬದಲಾವಣೆ ಮಾಡಿ ಅದನ್ನು ಮೂಲೆ ಗುಂಪು ಮಾಡುವುದಾದರೆ ಈ ಆಯೋಗಗಳಿಗೆ ಗೌರವ ಏನಾದರೂ ಬರುತ್ತದೆಯೇ? ಹೀಗಾದರೆ ಗೌರವಾನ್ವಿತ ವ್ಯಕ್ತಿಗಳನ್ನು ಸರಕಾರದವರು ಆಯೋಗಕ್ಕೆ ಅಧ್ಯಕ್ಷರಾಗಿ ಎಂದು ಕರೆದರೆ ಅವರು ಬರುವುದಕ್ಕೆ ಸಾಧ್ಯವಿದೆಯೇ? ಈ ರೀತಿಯಾಗಿ ನೀವು ಕೊಟ್ಟಂಥ ವರದಿಗಳನ್ನು ಮೂಲೆಗಂಪು ಮಾಡಿದರೆ ಯಾರೂ ಕೂಡ ಅಧ್ಯಕ್ಷರಾಗಲು ಒಪ್ಪಿಕೊಳ್ಳುವ ಸಾಧ್ಯತೆಗಳು ಇಲ್ಲ. ಈ ರೀತಿಯಾಗಿ ಕೊಟ್ಟಂಥ ವರಿದಯನ್ನು ಪ್ರಾಮಾಣಿಕವಾಗಿ ಚಾಚೂ ತಪ್ಪದೆ ತೀರಾ ಅತಿರೇಕಕ್ಕೆ ಹೋಗದೆ ಸಾಮಾನ್ಯವಾಗಿ, ರಾಜ್ಯದ ಸಂದರ್ಭ, ಇತರ ವ್ಯವಸ್ಥೆಗಳನ್ನು ನೋಡಿ ಜಾರಿ ತರಬೇಕೆಂದು

ಹೇಳತಕ್ಕಂಥಾದ್ದು ನನ್ನ ಅನಿಸಿಕೆ. ಅದನ್ನು ಬಿಟ್ಟು ಆಯೋಗ ಕೊಡತಕ್ಕಂಥ ವರದಿ ಒಂದಾದರೆ ನೀವು ಮಾಡತಕ್ಕಂಥ ಬದಲಾವಣೆಗಳು ಇನ್ನೊಂದು. ಹೀಗೆ ಮಾಡುವುದಾದರೆ ವರದಿಗಳಾದರೂ ಏಕೆ ಬೇಕು ? ಚಿನ್ನಪ್ಪ ರೆಡ್ಡಿ ವರದಿಯನ್ನು ಎಷ್ಟು ಸಾರಿ ಬದಲಾವಣೆ ಮಾಡಿದ್ದೀರಿ ? ಯಾವ್ಯಾವ ರೀತಿಯಲ್ಲಿ ಬದಲಾವಣೆ ಮಾಡಿದ್ದೀರಿ ? ಬದಲಾವಣೆ ಮಾಡತಕ್ಕಂಥ ಅಧಿಕಾರವು ನಿಮಗೆ ಇರಬಹುದು. ಅದನ್ನು ನಾನು ಪ್ರಶ್ನೆ ಮಾಡಲು ಹೋಗುವುದಿಲ್ಲ. ನಾನು ಇಲ್ಲಿ ಸರಕಾರದ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುತ್ತಾ ಇದ್ದೇನೆ. ಈ ಆಯೋಗದ ತೀರ್ಪಿನ ಬಗ್ಗೆ ಎಷ್ಟು ಆಶ್ವಾಸನೆಗಳನ್ನು ಕೊಟ್ಟಿದ್ದೀರಿ ? ಶ್ರೀಮಾನ್ ವೀರೇಂದ್ರ ಪಾಟೀಲ್‌ರವರು ಬಂದರು. ಈ ಆಯೋಗದ ವರದಿಯನ್ನು ನಾವು ಸಂಪೂರ್ಣವಾಗಿ ಜಾರಿಗೆ ತರುತ್ತೇವೆ ಎಂದು ಹೇಳಿದರು. ಅವರು ಬಹಳ ದಿನಗಳ ಕಾಲ ಮುಖ್ಯಮಂತ್ರಿಯಾಗಿ ಇರಲಿಲ್ಲ. ಒಂದು ವೇಳೆ ಇದ್ದಿದ್ದರೆ ಅವರು ಒಪ್ಪಿಕೊಳ್ಳುತ್ತಿದ್ದರೋ ಏನೋ ಎಂದು ನಾನು ಅಂದುಕೊಂಡಿದ್ದೇನೆ. ಆದರೆ ಈಗಲೂ ಕೂಡ ಚಿನ್ನಪ್ಪ ರೆಡ್ಡಿ ವರದಿಯ ವಿಕೃತ ಸ್ವರೂಪವು ಸರಿಯಾಗಿಲ್ಲ ಎಂದು ಅವರು ಅನೇಕ ಸಾರಿ ಹೇಳಿದ್ದಾರೆ. ಹಾಗೆಯೇ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾದರು. ಅವರು ನಿನ್ನೆ ಬಹಳ ದೊಡ್ಡ ಭಾಷಣ ಮಾಡಿದರು. ಅವರು ಚಿನ್ನಪ್ಪ ರೆಡ್ಡಿ ವರದಿಯನ್ನು ಅಕ್ಷರಶಃ ಒಪ್ಪಿ ಕಾರ್ಯಗತ ಮಾಡಿದ್ದರೆ ಯಾರು ಬೇಡ ಎಂದು ಹೇಳುತ್ತಿದ್ದರು ? ಹಾಗೆ ಮಾಡಿದ್ದರೆ ನಾವುಗಳು ಬಹಳ ಸಂತೋಷ ಪಡುತ್ತಿದ್ದೆವು. ಅವರು ಎರಡು ವರ್ಷಗಳ ಮುಖ್ಯಮಂತ್ರಿಯಾಗಿ ಇದ್ದರು. ಆಗ ಅವರು ಜಾರಿಗೆ ಕೊಡಬಹುದಾಗಿತ್ತು. ಏಕೆ ಮಾಡಲಿಲ್ಲ ? ಯಾರು ಅದಕ್ಕೆ ಅಡ್ಡಿ ಬರಲಿಲ್ಲವಲ್ಲ ? ನಾವು ಸದನದಲ್ಲಿ ಮಂಡಿಸಿ ಜಾರಿಗೆ ತರುತ್ತೇವೆ ಎಂದು ಹೇಳಬಹುದಾಗಿತ್ತಲ್ಲ ? ಈಗ ಶ್ರೀಮಾನ್ ವೀರಪ್ಪ ಮೋಯಿಲಿಯವರು ತಾಲ್ಲೂಕು ಪಂಚಾಯತ್ ಚುನಾವಣೆಯ ನೆಪದಲ್ಲಿ ಎಲ್ಲೋ ಧೂಳೂ ಹಿಡಿದಂಥ ಈ ವರದಿಯನ್ನು ತೆಗೆದರು. ಇದು ಎಲ್ಲಿ ಬಿದ್ದಿದೆ ಎಂದು ಗೊತ್ತಿರಲಿಲ್ಲ. ಇದು ಯಾವುದೋ ಒಂದು ಮೂಲೆಯಲ್ಲಿ ಇದ್ದು, ಇದಕ್ಕೆ ಸಂಬಂಧವೇ ಇರಲಿಲ್ಲ. ಇದನ್ನು ತೆಗೆದು ತಮ್ಮದೇ ಸಚಿವ ಸಂಪುಟದಲ್ಲಿ ತನ್ನದೇ ಆದ ವ್ಯಾಖ್ಯಾನಗಳನ್ನು ಸೇರಿಸಿದರು. ನಮ್ಮಲ್ಲಿ ಒಂದು ಖಾಯಂ ಆಯೋಗವೂ ಇದೆ. ಇದನ್ನು ನೀವು ಕುದೂರು ಆಯೋಗದ ಪರಿಶೀಲನೆಗೆ ಕೊಡಬಹುದಾಗಿತ್ತು. ಚಿನ್ನಪ್ಪ ರೆಡ್ಡಿ ವರದಿಯನ್ನು ಸಂಪೂರ್ಣವಾಗಿ ಅವರಿಗೆ ಕೊಟ್ಟು ಈ ರೀತಿಯಲ್ಲಿ ಅನೇಕ ಮನವಿಗಳು ಬಂದಿವೆ, ಅದನ್ನು ತಮಗೆ ಕಳುಹಿಸಿಕೊಡುತ್ತಾ ಇದ್ದೇವೆ, ಯಾವ ರೀತಿಯ ತಿದ್ದುಪಡಿ ತರಬೇಕು, ಏನು ಮಾಡಬೇಕೆಂಬುದರ ಬಗ್ಗೆ ಅವರ ಸಲಹೆಗಳನ್ನು ಪಡೆಯಬಹುದಾಗಿತ್ತು. ಆ ಆಯೋಗಕ್ಕೂ ನೀವು ಗೌರವ ಕೊಟ್ಟಿಲ್ಲ. ಮಾನ್ಯ ಕುದೂರ್‌ರವರ ಬಗ್ಗೆ ನನಗೆ ಅಪಾರ ಗೌರವವಿದೆ. ಅವರು ಇದರ ಬಗ್ಗೆ ರಾಜೀನಾಮೆ ಕೊಟ್ಟರೂ ಕೊಡಬಹುದು. ನೀವು ಈ ರೀತಿಯಲ್ಲಿ ರಾಜ್ಯದಲ್ಲಿ ಒಂದು ಖಾಯಂ ಆಯೋಗ ಇದ್ದರೂ ಅದಕ್ಕೆ ಪರಿಶೀಲಿಸುವ ಅಧಿಕಾರವನ್ನು ಕೊಡದೇ ನಿಮ್ಮ ಸಂಪುಟವೇ ಒಂದು ರೀತಿಯ ಆಯೋಗ ಎಂದು ನೀವು ರಚನೆ ಮಾಡಿಕೊಂಡು ಉಪಸಮಿತಿಯನ್ನು ಮಾಡಿಕೊಂಡು, ಕಾಲಕಾಲಕ್ಕೆ ನಿಮ್ಮ ಇಚ್ಛೆ ಬಂದ ಹಾಗೆ ನೀವು ಮಾಡಿಕೊಂಡು ಹೋಗತಕ್ಕಂಥ ರೀತಿಗೆ ಬೇಸತ್ತು ಅವರು ರಾಜೀನಾಮೆ ಕೊಡುವುದು ಒಳ್ಳೆಯದು ಎಂದು ನನ್ನ ಸಲಹೆ. ಕೊಡುವುದು ಬಿಡುವುದು ಅವರಿಗೆ ಸೇರಿದ್ದುದು. ಒಂದು ಖಾಯಂ ಆಯೋಗದ ಅಧ್ಯಕ್ಷರನ್ನಾಗಿ ನ್ಯಾಯಮೂರ್ತಿಗಳನ್ನು ಮಾಡಿದ್ದೇವೆ. ಅವರು ಈಗ ಪ್ರಾಮಾಣಿಕರಾಗಿ ಇದು ನೀತಿಗೆ ವಿರುದ್ಧವಾಗಿದೆ, ಒಂದು ಕಡೆ ಆಯೋಗವನ್ನು ರಚನೆ ಮಾಡಿ, ಮತ್ತೊಂದು ಕಡೆ ನಿಮ್ಮ ಇಚ್ಛೆ ಬಂದ ಹಾಗೆ ನನ್ನ ಖಾಯಂ ಆಯೋಗಕ್ಕೆ ಪ್ರತಿಯಾದ ರೀತಿಯಲ್ಲಿ ನೀವು ಮಾಡುತ್ತಾ ಇದ್ದೀರಿ ಎಂದು ಹೇಳಿ, ಸರಕಾರದ ನೀತಿಯನ್ನು ಪ್ರತಿಭಟಿಸಿ ರಾಜೀನಾಮೆಯನ್ನು ಕೊಟ್ಟರೆ ಅವರು ಬಹಳ ಎತ್ತರವಾಗಿ, ಗೌರವವಾಗಿ ಮೇಲಕ್ಕೆ ಹೋಗುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಆಯೋಗವನ್ನು ರಚನೆ ಮಾಡಿದಾಗ ಅದಕ್ಕೆ ಒಬ್ಬ ಗೌರವಾನ್ವಿತ ವ್ಯಕ್ತಿಯನ್ನು

ನಾವು ನಾಮಕರಣ ಮಾಡುತ್ತೇವೆ. ಆಯೋಗದವರು ಕೊಟ್ಟ ವರದಿಗಳ ಪರಿಸ್ಥಿತಿಯು ಈ ರೀತಿಯಾದರೆ ನಿಮ್ಮ ಆಯೋಗಗಳಿಗೆ ಗೌರವ ಕೊಡತಕ್ಕಂಥವರು ಯಾರು ? ಆಯೋಗಗಳಿಗೆ ಶಕ್ತಿ ಬರುವುದು ಯಾವಾಗ ? ನಿಮಗೆ ಮನಸ್ಸಿಗೆ ಬಂದ ಹಾಗೆ ಕಾಲಕಾಲಕ್ಕೆ ಆಯೋಗಗಳನ್ನು ಮಾಡುವುದು, ಆಯೋಗದವರು ಕೊಟ್ಟ ವರದಿಯನ್ನು ಬೀದಿಗೆ ಹಾಕತಕ್ಕಂಥಾದ್ದು ಸರಿಯಲ್ಲ. ಒಂದು ಆಯೋಗವನ್ನು ರಚನೆ ಮಾಡಿದ ಮೇಲೆ ನಾವು ಅದಕ್ಕೆ ಕಟ್ಟುಬದ್ಧರಾಗಿರಬೇಕು. ಉದಾಹರಣೆಗೆ ಮಹಾಜನ್ ಕಮಿಶನ್ ಬಂತು. ಅದರಲ್ಲಿ ನಾವು ಏನು ಹೇಳುತ್ತೇವೆ ? ಅದರ ವರದಿಯನ್ನು ಅಕ್ಷರಶಃ ತಪ್ಪದೇ ಚಾಚೂ ತಪ್ಪದೆ ಜಾರಿಗೆ ತರಬೇಕೆಂದು ಇದೇ ಸದನದಲ್ಲಿ ನಾವು ನಿರ್ಣಯ ಮಾಡಿದ್ದೇವೆ. ಹಾಗಾದರೆ ಒಂದು ಆಯೋಗಕ್ಕೆ ಈ ರೀತಿಯಲ್ಲಿ ಹೇಳಿ, ಮತ್ತೊಂದಕ್ಕೆ ಇನ್ನೊಂದು ರೀತಿಯಲ್ಲಿ ಹೇಳುವ ನಿಮ್ಮ ನೀತಿಗಳೇನು ? ಆಯೋಗವನ್ನು ರಚನೆ ಮಾಡಿ ಅದಕ್ಕೆ ಶಕ್ತಿ ಮತ್ತು ಗೌರವ ತರಬೇಕೆಂದಿದ್ದರೆ ನಾವು ಆಯೋಗವನ್ನು ತಿರುಚುವ ಕೆಲಸವನ್ನು ಮಾಡಬಾರದು.

ಶ್ರೀ ಕೆ.ಹೆಚ್. ರಂಗನಾಥ್:- ಈ ಆಯೋಗಕ್ಕೆ ಸಾಮಾಜಿಕ ನ್ಯಾಯವನ್ನು ಪರಿಶೀಲಿಸುವ ಜವಾಬ್ದಾರಿಯನ್ನು ಹೊರಿಸಲಾಗಿತ್ತು. ಸರಕಾರ ಆಯೋಗವನ್ನು ನೇಮಕ ಮಾಡಿ ಅದರ ವರದಿಯನ್ನು ಸಂಪೂರ್ಣವಾಗಿ ಒಪ್ಪಲೇಬೇಕೆಂದೇನೂ ಇರುವುದಿಲ್ಲ. ಸಾರ್ವಜನಿಕರ ಅಭಿಪ್ರಾಯಗಳನ್ನು ಕೂಡ ಸರಕಾರದವರು ಸಂಗ್ರಹಣೆ ಮಾಡಿ, ಆ ಹಿನ್ನಲೆಯಲ್ಲಿ ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕೆಂದು ವಿಚಾರ ಮಾಡಿ, ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಮಾನ್ಯ ಸದಸ್ಯರ ಅಭಿಪ್ರಾಯ ಇರಬಹುದು. ಆದರೆ ಕೆಲವರಿಗೆ ಅದರಿಂದ ಅನ್ಯಾಯವಾಗಿದ್ದರೆ ಸಾರ್ವಜನಿಕರು ಅದರ ಬಗ್ಗೆ ಮನವಿಗಳನ್ನು ಕೊಟ್ಟರೆ, ಆ ಹಿನ್ನಲೆಯಲ್ಲಿ ಅದನ್ನು ಪುನರ್ ಪರಿಶೀಲನೆ ಮಾಡತಕ್ಕಂಥ ಅವಶ್ಯಕತೆಯು ಬೀಳುತ್ತದೆ. ಸರಕಾರವು ಆಯೋಗದ ಪೂರ್ಣ ವರದಿಯನ್ನು ಕೈಬಿಟ್ಟು ತನ್ನ ನಿರ್ಣಯವನ್ನು ಇವೊತ್ತು ತೆಗೆದುಕೊಂಡಿಲ್ಲ. ಮಾನ್ಯ ವೈ.ಕೆ. ರಾಮಯ್ಯನವರು ವೆಂಕಟಸ್ವಾಮಿ ಆಯೋಗದ ವರದಿಯನ್ನು ತಿರಸ್ಕಾರ ಮಾಡಿ 1986ರಲ್ಲಿ ಹೊಸದಾಗಿ ಸರಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ ಎಂದು ಹೇಳಿದರು. 1986ರ ಆದೇಶದಲ್ಲಿ ದಿವಂಗತ ದೇವರಾಜ್ ಅರಸ್‌ರವರು ತಂದ ನೀತಿಗೆ ಹೆಚ್ಚು ಏನೂ ಇಲ್ಲ. ಎಬಿಸಿ ಎಂದು ಮಾಡಿದ್ದೀರೇ ವಿನಹ ಬಾಕಿ ಏನೂ ಇಲ್ಲ. ಎಲ್ಲಾ ಜಾತಿಯ, ವರ್ಗದಲ್ಲಿ, 15 ಸಾವಿರ ರೂ. ವರಮಾನ ಬರತಕ್ಕಂಥ ಎಲ್ಲರನ್ನೂ ಕೂಡ ಸ್ಪೆಶಲ್ ಗ್ರೂಫ್ ಎಂದು ಕೊಟ್ಟು, ಸಾರ್ವಜನಿಕರಾಗಿ ಅದಕ್ಕೆ ಘರ್ಷಣೆ ಬಾರದೇ ಇರತಕ್ಕಂಥ ರೀತಿಯಲ್ಲಿ ದೇವರಾಜ್ ಅರಸ್‌ರವರೇ ಮಾಡಿದ್ದರು. ಅದರ ಪ್ರಕಾರ 60 ಪರ್ಸೆಂಟ್ ಹೋಗುತ್ತಾ ಇತ್ತು. ಆದ್ದರಿಂದ 1986ರ ರಾಮಕೃಷ್ಣ ಹೆಗಡೆಯವರು ಸರಕಾರ ಮಾಡಿದ ಆಜ್ಞೆ ಚೆನ್ನಾಗಿದೆ ಎಂದು ಹೇಳತಕ್ಕಂಥಾದ್ದು ಸರಿಯಲ್ಲ. ಇವೊತ್ತು ಸರಕಾರವು ಪೂರ್ತಿಯಾಗಿ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ನಿರಾಕರಣೆ ಮಾಡಿಲ್ಲ. ಅದನ್ನು ಇಟ್ಟುಕೊಂಡು, ಸಾರ್ವಜನಿಕವಾಗಿ ಬಂದಂಥ ಅಭಿಪ್ರಾಯಗಳನ್ನು ಸಂಗ್ರಹಣೆ ಮಾಡಿಕೊಂಡು, ಅದರ ಹಿನ್ನಲೆಯಲ್ಲಿ ಪುನರ್ ಪರಿಶೀಲನೆ ಮಾಡುತ್ತಾ ಇದ್ದೇವೆ ವಿನಹ ಅದರ ನಿರಾಕರಣೆ ಮಾಡಿಲ್ಲ. ಮಾನ್ಯ ಸಚಿವರು ಹೇಳಿಕೆ ಕೊಡುವಾಗ ಅದನ್ನು ಹೇಳುತ್ತಾರೆ. ಮಹಾಜನ್ ಆಯೋಗಕ್ಕೂ ಇದಕ್ಕೂ ಹೋಲಿಸುವುದು ಸರಿಯಲ್ಲ. ತಮಗೆ ಗೊತ್ತಿದೆ, ಮಹಾಜನ್ ಆಯೋಗದಿಂದ ನಮಗೆ ಅನ್ಯಾಯವಾಗಿದೆ. ಮಹಾಜನ್ ಆಯೋಗದ ವರದಿಯನ್ನು ನಾವು ಒಪ್ಪುವುದರಿಂದ ನಮಗೆ ಕೇಂದ್ರ ಸರಕಾರದಿಂದ ಬರತಕ್ಕಂಥ ಇನ್‌ಕಂಟ್ಯಾಕ್ಸ್ ಇತ್ಯಾದಿಗಳು ಹೋಗುತ್ತವೆ.

1.15 ಪಿ.ಎಂ.

ಮಹಾಜನ ಆಯೋಗದದಿಂದ ನಿಪ್ಪಾಣಿ ಹೊರಗೆ ಹೋಗುತ್ತದೆ. ಮಹಾರಾಷ್ಟ್ರದ ಗಡಿ ಹಿಂದಲಗ ಬಳಿನ ಹತ್ತಿರಕ್ಕೆ ಬರುತ್ತದೆ. ಅನ್ಯಾಯವಾಗುತ್ತದೆ. ಆದರೆ ಕಾಲಕಾಲಕ್ಕೆ ಇದನ್ನೇ ಉಪಯೋಗ

ಮಾಡಿಕೊಂಡು ಮುಂದೆ ಘರ್ಷಣೆ ಬೇಡವೆಂದು ಅಂದು ಒಂದು ತೀರ್ಮಾನ ತೆಗೆದುಕೊಂಡಿರುವುದರಿಂದ ಮತ್ತೆ ಅದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ನಮಗೆ ನಿಪ್ಪಾಣಿ ಇರಬೇಕಾಗುತ್ತದೆ. ನಿಪ್ಪಾಣಿ ಬಾರ್ಡರ್ ಇರಬೇಕಾಗುತ್ತದೆ. ಆಲೂರು, ಅದವಾನಿ ಸೊಲ್ಲಾಪುರ ಬರಬೇಕಾಗುತ್ತದೆ. ಆ ನೀತಿಯನ್ನೇ ಇದಕ್ಕೂ ಅನ್ವಯ ಮಾಡತಕ್ಕಂಥಾದ್ದು ಸರಿಯಲ್ಲ. ಬ್ಯಾಕ್‌ವರ್ಡ್ ಕ್ಲಾಸ್ ನಿರ್ಣಯ ಮಾಡುವಾಗ ಪ್ರೊ|| ನಂಜುಂಡಸ್ವಾಮಿಯವರೂ ಇದ್ದಾರೆ. ರಾಜ್ಯಾಂಗದ ಪ್ರಕಾರ ಎಲ್ಲರೂ ಸಮಾನರೆಂದು ಹೇಳಿ, ಕೆಲವರಿಗೆ ಮೀಸಲಾತಿ ಕೊಡಬೇಕಾಗುತ್ತದೆ. ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಯಾರು ಹಿಂದುಳಿದಿದ್ದಾರೆ ಮತ್ತು ಸಮಾಜದಲ್ಲಿ ಕೆಲವು ವರ್ಗದ ಜನರು ಏನು ಇದ್ದಾರೆ ಅವರ ಜಾತಿಯ ಹೆಸರು ಹೇಳುತ್ತಿದ್ದ ಹಾಗೆ ಅವರ ಶಕ್ತಿ ಎಲ್ಲಾ ಅಡಗಿ ಹೋಗುತ್ತದೆ. ಈಗ ಕರ್ಣನಿಗೆ ಸೂತಪುತ್ರ ಎಂದ ತಕ್ಷಣ ಹೇಗೆ ಅವನ ಶಕ್ತಿ ಎಲ್ಲಾ ಅಡಗಿ ಹೋಗುತ್ತಿತ್ತೋ, ಅಂತಹ ಮಾನಸಿಕ ಸ್ಥಿತಿಗೆ ಅವನು ಒಳಗಾಗುತ್ತಾನೆ. ಅಂತಹ ಜಾತಿಗಳವರಿಗೆ ನಾವು ಅನುಕೂಲ ಮಾಡಿಕೊಡಬೇಕು ಮತ್ತು ವಿದ್ಯೆಯಿಂದ ನಾವು ಸುಮಾರು ಜನರನ್ನು ವಂಚಿತರನ್ನಾಗಿ ಮಾಡಿದ್ದೇವೆ. ನಮ್ಮ ಹಿಂದೂ ಸಮಾಜದ ವ್ಯವಸ್ಥೆಯಲ್ಲಿ, ವರ್ಣಾಶ್ರಮಧರ್ಮದ ವ್ಯವಸ್ಥೆಯಲ್ಲಿ ಬ್ರಾಹ್ಮಣ, ಕ್ಷತ್ರಿ, ವೈಶ್ಯ, ಶೂದ್ರ ಮತ್ತು ಹೆಣ್ಣು ಮಕ್ಕಳು ಎಲ್ಲರೂ ಕೂಡ ವಿದ್ಯೆಯಿಂದ ವಂಚಿತರನ್ನಾಗಿ ಮಾಡಿದರು. ಆದ್ದರಿಂದ ಈ ಒಂದು ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ರಾಜ್ಯಾಂಗವನ್ನು ಮಾಡುವಾಗ ಸಾಮಾಜಿಕವಾಗಿ ಮತ್ತು ವಿದ್ಯೆಯನ್ನು ಗಣನೆಗೆ ತೆಗೆದುಕೊಂಡು ಮಾಡಬೇಕೆಂದು ಮಾಡಿದರು. ಕಾರಣಾಂತರದಿಂದ ಸಾರ್ವಜನಿಕರ ಅಭಿಪ್ರಾಯ ಒತ್ತಡ ಬೇರೆಯಾಗುತ್ತದೆ. ಈ ಹಿನ್ನಲೆಯ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ನಿಮಗೆ ತಿಳಿದ ಹಾಗೆ ಕಾಕಾ ಸಾಹೇಬ್ ಕಾಳೇಕರ್ ವರದಿ ಆಲ್ ಇಂಡಿಯಾ ಮಟ್ಟದಲ್ಲಿ ಬಂತು, ತದನಂತರ ನಾಗನಗೌಡರ ವರದಿ ಬಂತು, ತದನಂತರ ಹಾವನೂರು ವರದಿ ಬಂತು ತದನಂತರ ವೆಂಕಟಸ್ವಾಮಿ ವರದಿ ಬಂತು, ತದನಂತರ ಚಿನ್ನಪ್ಪ ರೆಡ್ಡಿಯವರು ವರದಿ ಬಂದಿದೆ. ಎಲ್ಲವನ್ನೂ ಸಮಗ್ರವಾಗಿ ವಿಚಾರ ಮಾಡುವ ಅವಶ್ಯಕತೆ ಇದೆ. ಕೊಟ್ಟಂತಹ ಆಯೋಗದ ವರದಿಯನ್ನು ಸಂಪೂರ್ಣವಾಗಿ ಒಪ್ಪಬೇಕೆಂದು ಹೇಳುವುದು ಸರಿಯಲ್ಲ. ಸಾರ್ವಜನಿಕರ ಅಭಿಪ್ರಾಯವನ್ನು ಕಡೆಗಣಿಸಬೇಕೆಂದರೆ ಅದೂ ಕೂಡ ಆಗುವುದಿಲ್ಲ.

ಶಿಕ್ಷಣದಲ್ಲಿ ಸೋಷಿಯಲೀ ಬ್ಯಾಕ್‌ವರ್ಡ್ ಅಷ್ಟಕ್ಕೆ ಮಾತ್ರ ನಿಗದಿ ಮಾಡೋಣ ಅಂದರೂ ಆಗುವುದಿಲ್ಲ. ಕೆಲವರು ಹೇಳುತ್ತಾರೆ ಅದು ಹೇಗೆ ಹೇಳುತ್ತೀರಿ, ತೀರಾ ಗರೀಬರಿದ್ದಾರೆ ಇವತ್ತು ಕೀಳರಿಮೆಯ ಪ್ರಶ್ನೆ ಬರುತ್ತದೆಂದು ಹೇಳುತ್ತಾರೆ. ಕೀಳರಿಮೆಯ ಪ್ರಶ್ನೆ ಬರುತ್ತದೆ. ನಮ್ಮಲ್ಲಿ 4ನೇ ದರ್ಜೆಯ ಸಣ್ಣ ನೌಕರರಿದ್ದಾರೆ ಅವರ ಸಂಬಳ ಯಾವುದೋ ಮಟ್ಟಕ್ಕೆ ಹೋಗುತ್ತದೆ. ಸಚಿವ ಸಂಪುಟದಲ್ಲೂ ಮಾತನಾಡುವಾಗ ಆ ಪ್ರಶ್ನೆ ಬಂದಿದೆ. ಇಂಥವರೂ ಇದ್ದುದರಲ್ಲಿ ಹೇಗೋ ಬದುಕುತ್ತಾರೆ ಅವನಿಗೂ ಕೂಡ ಮೀಸಲಾತಿ ಇಲ್ಲವೆನ್ನುವುದು ಆ ಹಿನ್ನಲೆಯಲ್ಲಿ ಸರಿಯಾಗೇ ಇರಬಹುದು ಆದರೆ ವಸ್ತು ಸ್ಥಿತಿಯನ್ನು ನೋಡಿದಾಗ ಕೊಡತಕ್ಕಂತಹ ಪರಿಸ್ಥಿತಿ ಒದಗಿಬರಬಹುದು. ಆದರೆ ಸಮಗ್ರ ದೃಷ್ಟಿಯಿಂದ ನೋಡತಕ್ಕಂಥಾದ್ದು ಅವಶ್ಯಕ. ಈ ದೃಷ್ಟಿಯಿಂದ ಸರಕಾರ ಪರಿಶೀಲನೆ ಮಾಡುತ್ತದೆಯೇ ವಿನಃ ರಾಜಕೀಯ ದೊಂಬರಾಟ ಮಾಡುವುದಕ್ಕೆ ಇದನ್ನು ಬಳಸಿಕೊಳ್ಳುತ್ತಿಲ್ಲ. ಎರಡು ವರ್ಷಗಳಿಂದ ಅಧಿಕಾರ ಮಾಡುತ್ತಿರುವವರು ಚಿನ್ನಪ್ಪ ರೆಡ್ಡಿಯವರ ವರದಿಯನ್ನು ಮೂಸಿಕೂಡ ನೋಡಲಿಲ್ಲವೆಂದು ತಾವು ಹೇಳಿದಿರಿ. ಇವತ್ತು ಗಡುಸಾಗಿ ಮಾತನಾಡುತ್ತಾರೆ ಬಹಳ ದೊಡ್ಡ ಧ್ವನಿಯನ್ನು ಯಾವ ಮಟ್ಟಕ್ಕೆ ಎತ್ತಿ ಮಾತನಾಡುತ್ತಾರೆಂದರೆ ಇವರೆ ಏನೋ ರಕ್ಷಣೆ ಮಾಡತಕ್ಕಂತಹವರು ಎನ್ನಬಹುದು. ತಮಗೆ ಅಧಿಕಾರ ಇದ್ದಾಗ ಅದರ ಕಡೆ ಸ್ವಲ್ಪವೂ ಗಮನಹರಿಸಿರುವುದಿಲ್ಲ. ಅದರ ಬಗ್ಗೆ ಏನೂ ಮಾತನಾಡುವುದಿಲ್ಲ. ಇದೆಲ್ಲಾ ಆಗುತ್ತದೆ. ಆದ್ದರಿಂದ ಅವರ ಅಭಿಪ್ರಾಯ, ಆದರೆ ಪೂರ್ಣ ಎಲ್ಲವನ್ನೂ ಒಪ್ಪತಕ್ಕಂಥಾದ್ದು ಸಾಧ್ಯವಾಗಲಾರದು.

ಶ್ರೀ ವೈ.ಕೆ. ರಾಮಯ್ಯ:– ನನ್ನ ಹೇಳಿಕೆಯನ್ನು ಪ್ರಸ್ತಾಪ ಮಾಡಿದ್ದರಿಂದ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ. ನಿನ್ನೆ ನಾನು ಮಾತನಾಡುವಾಗ ಮಾನ್ಯ ಸಚಿವರು ಎಷ್ಟು ಹೊತ್ತು ಕುಳಿತಿದ್ದರೋ ನನಗೆ ಗೊತ್ತಿಲ್ಲ. ನಾನು ಪ್ರಾಮಾಣಿಕವಾಗಿ ಅಭಿಪ್ರಾಯ ಪಟ್ಟೆ. ಈಗ ಬಂದಿರುವ ವರದಿಗಳಲ್ಲಿ ಹಾವನೂರವರ ನೇತೃತ್ವದಲ್ಲಿ ಬಂದಂತಹ ವರದಿ ನನ್ನ ದೃಷ್ಟಿಯಲ್ಲಿ ಉತ್ತಮವಾಗಿ ವೈಜ್ಞಾನಿಕವಾಗಿ ಇತ್ತು ಎಂಬ ಅಭಿಪ್ರಾಯ ಹೇಳಿದ್ದೇನೆ. ಆ ವರದಿಯನ್ನು ಕೈ ಬಿಡುವಂತಹ ಪರಿಸ್ಥಿತಿಗೆ ಹೋಗಿದ್ದೇವೆ ಎಂದೂ ಕೂಡ ಅಭಿಪ್ರಾಯಪಟ್ಟಿದ್ದೇನೆ. ಅದಾದ ಮೇಲೆ ವೆಂಕಟಸ್ವಾಮಿ ಆಯೋಗದ ವರದಿ ಬಂದಾಗ ಅದನ್ನು ಕಾರ್ಯರೂಪಕ್ಕೆ ತರದ ರೀತಿಯಲ್ಲಿ ನಮ್ಮ ಹಿತಾಸಕ್ತಿಗಳೇ ಅಡ್ಡಿ ಬಂದುದನ್ನು ಕೂಡ ನಾನು ಹೇಳಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಅವರು ಈಗ ಪ್ರಸ್ತಾಪ ಮಾಡಿದ್ದರಿಂದ ನಾನು ಹೇಳಿದ್ದೇನೆ. ಮಾನ್ಯ ರಾಮಯ್ಯನವರು ಭಾಷಣ ಮಾಡುವಾಗ ನಾನು ಇಲ್ಲಿ ಇರಲಿಲ್ಲ ಕೇಳಲಿಲ್ಲ.

ಶ್ರೀ ವೈ.ಕೆ. ರಾಮಯ್ಯ:– ವೆಂಕಟಸ್ವಾಮಿ ಆಯೋಗದ ವರದಿಯನ್ನು ಕಾರ್ಯರೂಪಕ್ಕೆ ತರದ ಹಾಗೆ ಮಾಡಿದಂತಹ ಹಿತಾಸಕ್ತಿಗಳನ್ನು ನಾನು ಗುರುತಿಸಿದ್ದೇನೆ. ಅದಾದ ಮೇಲೆ 68 ಅನ್ನು ನಿಗದಿ ಮಾಡಿ ಆಡಳಿತಕ್ಕೆ ಅನುವಾಗುವಂತಹ ಆಜ್ಞೆ ಮುಖಾಂತರ ಈ ರಾಜ್ಯದಲ್ಲಿ ಮೀಸಲಾತಿ ಪದ್ಧತಿಯನ್ನು ಜಾರಿಗೆ ತಂದರು, ಅದೂ ಇತ್ತು. ತಾವು ಹೇಳುವ ಒಂದು ವಾದವನ್ನು ಸಂಪೂರ್ಣವಾಗಿ ನಾನು ಒಪ್ಪಿಕೊಳ್ಳುತ್ತೇನೆ. ಯಾವುದು ಎಂದರೆ ಯಾವುದೇ ಒಂದು ಆಯೋಗದ ವರದಿಯನ್ನು ಸರ್ಕಾರ ತಿರಸ್ಕರಿಸುವುದಕ್ಕೆ, ಒಪ್ಪಿಕೊಳ್ಳುವುದಕ್ಕೆ, ಬದಲಾವಣೆ ಮಾಡಲಿಕ್ಕೆ ಸಂಪೂರ್ಣವಾದಂಥ ಅಧಿಕಾರ ಇದೆ. ಆದರೆ ಅದನ್ನು ಸಂಪೂರ್ಣವಾಗಿ ವಿಕೃತಗೊಳಿಸಿ, ಅದರ ಹೆಸರೇಳುವುದಕ್ಕೆ ಸಾಧ್ಯವಾಗಲಾರದಂತೆ ಮಾಡುವುದು ಸರಿಯಲ್ಲ. ನಿನ್ನೆ ನೀವು ಇರಲಿಲ್ಲ. ಮಾನ್ಯ ರಂಗನಾಥ್‌ರವರೇ, ಎಷ್ಟು ಸಾರಿ ಮಾಡುತ್ತೀರಿ ಹೇಳಿ. 17ನೇ ತಾರೀಖು 50 ಪರ್ಸೆಂಟ್, ನಿನ್ನೆ ದಿನ ನಾನು ಭಾಷಣ ಶುರು ಮಾಡುವಾಗ 80, ಅರ್ಧ ಭಾಷಣ ಆಗುವ ಹೊತ್ತಿಗೆ 73, ಇವತ್ತು ಸಾಯಂಕಾಲ ಇನ್ನೆಷ್ಟು ತರುತ್ತೀರೋ ? ಅದನ್ನು ನಾನು ಹೇಳುತ್ತಿರುವುದು. ನೀವು ಚಿನ್ನಪ್ಪ ರೆಡ್ಡಿ ಆಯೋಗವನ್ನು ತಿರಸ್ಕರಿಸಿ. ನಿಮಗೆ ಅಧಿಕಾರ ಇದೆ, ಅದರ ಬದಲಾವಣೆ ಮಾಡಿ ನಿಮಗೆ ಅಧಿಕಾರ ಇದೆ, ಇಲ್ಲ ಅದನ್ನು ಒಪ್ಪಿಕೊಳ್ಳಿ, ಅದಕ್ಕೂ ಅಧಿಕಾರ ಇದೆ. ಆದರೆ ನಾವು ಏನು ಹೇಳುತ್ತಿದ್ದೇವೆ ಎಂದರೆ ಚಿನ್ನಪ್ಪ ರೆಡ್ಡಿ ಆಯೋಗದ ವರದಿಯನ್ನು ಸಂಪೂರ್ಣವಾಗಿ ವಿಕೃತಗೊಳಿಸಿ ಒಂದು ಸಾರಿ ಅಲ್ಲ, it is on slaught. ಇಲ್ಲ, ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆ ಎನ್ನಿ. ಒಕ್ಕಲಿಗರಿಗೆ ಅನ್ಯಾಯವಾಗುತ್ತದೇಯೋ, ಲಿಂಗಾಯಿತರಿಗೆ ಅನ್ಯಾಯವಾಗುತ್ತದೆಯೋ ಅದು ನಿಮ್ಮ ತತ್ವ. ನಿಮ್ಮ ಪಾಲಿಸಿ. ನೀವು ಜನಗಳಿಗೆ ಉತ್ತರ ಕೊಡಬೇಕಾಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲ, ತಾವು ಸಂಪೂರ್ಣವಾಗಿ ಅದನ್ನು ತಿರಸ್ಕರಿಸುತ್ತೇವೆ ಎಂದು ಹೇಳಿ, ನಾವು ಒಪ್ಪಿಕೊಳ್ಳುತ್ತೇವೆ. ಒಂದು ಸಾರಿ ನಿರ್ದಿಷ್ಟವಾಗಿ ಹೇಳಿ. ನೀವು ಎದೆ ಮೇಲೆ ಕೈ ಇಟ್ಟುಕೊಂಡು ಹೇಳಿ. ಒಂದು ಸಾರಿ ನಿರ್ದಿಷ್ಟವಾದಂಥ ಬದಲಾವಣೆ ಮಾಡಿ. ಇದು ನಮ್ಮ ಪಕ್ಷದ ತೀರ್ಮಾನ, ನಮ್ಮ ಒಳದನಿಯ ತೀರ್ಮಾನ ಎಂದು ಹೇಳಿ. ನಿಮ್ಮ ಎದೆಯ ದನಿ ಎರಿದು ತೆಗೆದುಕೊಳ್ಳಿ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದನ್ನು ಬಿಟ್ಟು 73, 80 ಎಂದು ಹೇಳಿದರೆ ಹೇಗೆ ?

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಅಧ್ಯಕ್ಷರೇ, ಹಿಂದುಳಿದವರಿಗೆ, ಅಸ್ಪೃಶ್ಯರಿಗೆ ಮೀಸಲಾತಿಯನ್ನು ಒದಗಿಸಿಕೊಡಬೇಕು ಎನ್ನುವಂಥದ್ದು ಯಾವತ್ತಿನಿಂದಲೂ ಕೂಡ ಅದು ಕಾಂಗ್ರೆಸ್ ಪಕ್ಷದ ಒಂದು ಸಿದ್ಧಾಂತ. ಅದು ಬದಲಾವಣೆ ಆಗಿಲ್ಲ.

ಶ್ರೀ ವೈ.ಕೆ. ರಾಮಯ್ಯ:– ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– ಬದಲಾವಣೆ ಆಗಿಯೇ ಇಲ್ಲ. ಆ ದೃಷ್ಟಿಯಿಂದಲೇ ನೆಹರೂರವರು ಆಡಳಿತ ಮಾಡುತ್ತಿದ್ದಂಥ ಕಾಲದಲ್ಲಿ ಕಾಕಾ ಸಾಹೇಬ್ ಕಾಲೇಲ್ಕರ್‌ರವರ ರಿಪೋರ್ಟ್ರು ಬಂತು. ಅದನ್ನು ಇಂಪ್ಲಿಮೆಂಟ್ ಮಾಡಿದರೋ ಬಿಟ್ಟರೋ ಆ ಮಾತು ಬೇರೆ. ಆದರೆ ಈ ಒಂದು ನೀತಿ ಇವತ್ತಿನ ದಿವಸ ಅಥವಾ ನಾಳೆ ನಡೆಯುವ ಚುನಾವಣೆಗಾಗಿ ಬಂದಂಥ ನೀತಿ ಅಲ್ಲ. ಇದು ಕಾಂಗ್ರೆಸ್ ಪಕ್ಷ ಒಪ್ಪಿಕೊಂಡಿರುವ ನೀತಿಯೇ. ಆದ್ದರಿಂದ ಇದು ಹೊಸದಾಗಿ ಬಂದಿರತಕ್ಕಂಥದ್ದೇನೂ ಇಲ್ಲ. ಮತ್ತೆ ಮಾನ್ಯ ಸದಸ್ಯರು 50 ಪರ್ಸೆಂಟ್‌ಗೆ ನಿಗದಿ ಮಾಡಿದೆವು ಎಂದು ಹೇಳಿದರು. ನಾವು ಒಪ್ಪಿಕೊಂಡಿದ್ದೇವೆ. ಏಕೆಂದರೆ ಸುಪ್ರೀಂ ಕೋರ್ಟ್‌ನ ಜಡ್ಜ್‌ಮೆಂಟ್ ಬಂದಿದ್ದುದರಿಂದ ಮಕ್ಕಳನ್ನು ಕಾಲೇಜಿಗೆ ಸೇರಿಸತಕ್ಕಂಥದ್ದು ಅತೀ ತಡವಾಗಿದ್ದರಿಂದ ಅನಿವಾರ್ಯವಾಗಿ ಸರ್ಕಾರ ಇವತ್ತಿನ ದಿವಸ ಅಡ್ಮಿಷನ್‌ಗೋಸ್ಕರ ನೌಕರಿಗಲ್ಲ ಮಾಡಿದೆ. ಅಡ್ಮಿಷನ್‌ಗೋಸ್ಕರ 50 ಪರ್ಸೆಂಟ್ ಮೀಸಲಾತಿಯ ಬಗ್ಗೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟಿತು, ಅದನ್ನು ಒಪ್ಪಿಕೊಂಡು ತತ್‌ಕ್ಷಣ ಅದನ್ನು ಜಾರಿಗೆ ಕೊಡಬೇಕು ಎಂದು ಮಾಡಿದ್ದೇವೆಯೇ ವಿನಹ ನೌಕರಿಗೆ ಸಂಬಂಧಪಟ್ಟಂತೆ ಅಲ್ಲ. ಅದೂ ಕೂಡ it is only temporary ಆ ಹಿನ್ನಲೆಯಲ್ಲೇ ಇವತ್ತಿನ ದಿವಸ ಮತ್ತೆ ಇದನ್ನು ಪುನರ್ ಪರಿಶೀಲನೆ ಮಾಡಿ ಆಕ್ಟ್ ಅನ್ನು ತಂದಿರತಕ್ಕಂಥದ್ದು.

ಶ್ರೀ ವಾಟಾಳ್ ನಾಗರಾಜ್:– ನಾನು ತಮಗೆ ಹೇಳುತ್ತೇನೆ. ಅವರ ಮಾತನ್ನು ನಾನು ಒಪ್ಪುತ್ತೇನೆ. ನಾನು ಸಾಮಾಜಿಕ ನ್ಯಾಯ ಯಾರಿಗೆ ದೊರಕಬೇಕು ಎನ್ನುವುದರಲ್ಲಿ, ಯಾರ್ಯಾರಿಗೆ ದನಿ ಇಲ್ಲ, ತುಳಿತಕ್ಕೆ ಸಿಕ್ಕಿರತಕ್ಕಂಥವರು ಅವರು ಯಾರೇ ಆಗಿರಲಿ, ಅವರುಗಳಿಗೆ ದೊರಕಬೇಕು ಎನ್ನುವುದರಲ್ಲಿ ನಮ್ಮದು ಸಹಮತ. ಅದರಲ್ಲೇನು ಎರಡನೆಯ ಅಭಿಪ್ರಾಯವಿಲ್ಲ. ನೀವು ಹಿಂದುಳಿದ ವರ್ಗಕ್ಕೆ ಅನುಕೂಲ ಮಾಡಬೇಕು ಎನ್ನುವಾಗ ನಾವು ಮಾಡಬೇಡಿ ಎಂದು ಹೇಳತಕ್ಕಂಥವರಲ್ಲ. ನಿಮ್ಮ ನಿರ್ಧಾರಗಳು ಏನಿವೆ, ತಾವೇನು ನೀತಿ ಹೇಳಿದರಲ್ಲ, ಈ ನೀತಿ ಬಗ್ಗೆ ಹೇಳುವುದಿಲ್ಲ. ನಿಮ್ಮ ನಿರ್ಧಾರಗಳು ಕಾಲಕಾಲಕ್ಕೆ ಬದಲಾವಣೆ ಆದವಲ್ಲ, ದಾಸಯ್ಯ ಅನ್ನಿಸಿಕೊಳ್ಳುವುದಕ್ಕೆ ಮೈತುಂಬಾ ನಾಮ ಹಚ್ಚಿಕೊಂಡು ನಾ ದಾಸಯ್ಯ, ನಾ ದಾಸಯ್ಯ ಎಂದು ಹೇಳಿಕೊಂಡು ಹೊರಟರಲ್ಲ, ನಿಮ್ಮ ನಿರ್ಧಾರಗಳು ದಾಸಯ್ಯ ಎಂದು ಇವರನ್ನು ಕರೆಯಬೇಕು, ಹೇಗೆ ಕರೆಯಬೇಕು ? ಮೈತುಂಬಾ ನಾಮ ಹಚ್ಚಿಕೊಂಡುಬಿಡುವುದು. ಆ ರೀತಿ ನೀವು ನಿಮ್ಮ ನಿರ್ಧಾರಗಳನ್ನು ಮಾಡುತ್ತಿದ್ದೀರಲ್ಲ, ಈ ದಾಸಯ್ಯನ ನಿರ್ಧಾರ ಬೇಡ. ಸ್ಪಷ್ಟವಾಗಿ ಹೇಳಿಬಿಡಿ. ನಮ್ಮದು ಈ ನಿರ್ಧಾರ, ಇವತ್ತು ತೀರ್ಮಾನ ಇದರ ಬಗ್ಗೆ ತೆಗೆದುಕೊಂಡಿದ್ದೇವೆ. ನಾಳೆ ಬೆಳಿಗ್ಗೆ ಜಾರಿಗೆ ಬರುತ್ತದೆ ಎಂದು ಹೇಳಿ. ನಮಗೆ ನಂಬಿಕೆಯೇ ಇಲ್ಲವೇ ? ನಂಬಿಕೆಯೇ ಹೋಗಿಬಿಟ್ಟದೆ. ಈ ಸದನದಲ್ಲಿ ಈ ಮಸೂದೆಯನ್ನು ಮಂಡಿಸಿದಾಗ ಶೇಕಡ 80. ಅವತ್ತು ಅಕಸ್ಮಾತ್ ಏನಾದರೂ ಮಸೂದೆ ಮತದಾನಕ್ಕೆ ಬಂದಿದ್ದರೆ 80 ಆಗುತ್ತಿತ್ತೇ ? ಅವತ್ತು ಮುಗಿದುಹೋಗುತ್ತಿತ್ತು. ನಿಮ್ಮ ತಿದ್ದುಪಡಿ ಪ್ರಶ್ನೆ ಇಲ್ಲವೇ ಇಲ್ಲ. ಅವತ್ತು ಮುಗಿಯುತ್ತಿತ್ತು. ಆದರೆ, ಈಗ ಇದ್ದಕ್ಕಿದ್ದ ಹಾಗೆ ಮಧ್ಯೆ 73 ಈಗ ಬಂತು. ಮಾನ್ಯ ಮುಖ್ಯಮಂತ್ರಿ ವೀರಪ್ಪ ಮೊಯಿಲಿಯವರು ಬಂದಿದ್ದಾರೆ, ಇನ್ನೊಂದು ಗಂಟೆಗೆ ಇನ್ನಾವ ನೀತಿ ಬರುತ್ತದೇಯೋ ? ಈಗ ಇದು ಏನಾಗುತ್ತದೆ, ಈ ನಿರ್ಧಾರಗಳ ಬಗ್ಗೆ ನಾನೇನು ಹೇಳುತ್ತೇನೆ ಎಂದರೆ, ಚಿನ್ನಪ್ಪರೆಡ್ಡಿ ವರದಿಯನ್ನು ನೀವು ರಾಜಕೀಯಕ್ಕೆ ತಂದಿರೋ, ಯಾವ ವಿಚಾರಕ್ಕೆ ತಂದಿರೋ ಅದನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದರಲ್ಲೇನೂ ಅನುಮಾನ ಇಲ್ಲ. ನಿಮ್ಮ ಸರ್ಕಾರ ಚಿನ್ನಪ್ಪರೆಡ್ಡಿ ವರದಿಯನ್ನು ಸಂಪೂರ್ಣವಾಗಿ ಕಾರ್ಯಗತ ಮಾಡುತ್ತೇವೆ ಎಂದು ಹೇಳಿದ್ದೀರಿ. ಇವತ್ತು ಮನವಿಗಳು ಬರುತ್ತವೆ, ನಿಜ. ಅದರ ಬಗ್ಗೆ ನನ್ನದೇನೂ ತಕರಾರು ಇಲ್ಲ. ನೀವು ಆಯೋಗವನ್ನು ರಚನೆ ಮಾಡಿದಾಗ ಸರ್ಕಾರವೇ ಬೇಕಾದರೆ ಇಡೀ ರಾಜ್ಯದ ಯಾವ ಜನಾಂಗಗಳಿಗೆ ಎಲ್ಲಿ ಅನ್ಯಾಯವಾಗುತ್ತದೆ, ಅವರೆಲ್ಲರೂ ಆಯೋಗದ ಮುಂದೆ ಹೋಗಬೇಕು, ಅಲ್ಲಿ ಹೇಳಬೇಕು ಎಂದು ಹೇಳಿ ನಿಮ್ಮ ಸರ್ಕಾರದ ವಕೀಲರಿಂದ ವಾದ ಮಾಡಿಸಿ ಅದನ್ನು

ಸರಿಪಡಿಸತಕ್ಕಂಥ ಒಂದು ವಿಧಾನ ಇದೆ. ತಿದ್ದುಪಡಿ ಮಾಡುವುದಕ್ಕೆ ನಿಮಗೆ ಅಧಿಕಾರ ಇಲ್ಲ ಎಂದು ನಾನೇನೂ ಹೇಳುತ್ತಿಲ್ಲ. ಅಥವಾ ನೀವು ಅದನ್ನು ತಿರಸ್ಕರಿಸುವುದಕ್ಕೆ ಅಧಿಕಾರ ಇಲ್ಲ ಎಂದು ಹೇಳುತ್ತಿಲ್ಲ. ಆದರೆ ಯಾವ ಒಂದು ನೀತಿ ನಿಮ್ಮದು ಇದೆಯಲ್ಲ, ಆ ನೀತಿಯ ಆಧಾರದ ಮೇಲೆ ಒಂದು ಆಯೋಗವನ್ನು ರಚನೆ ಮಾಡಿದ್ದೀರಿ. ಆಯೋಗವನ್ನು ರಚನೆ ಮಾಡಿ ಅಲ್ಲಿಗೆ ಮುಗಿಸಿ ಬಿಡುವುದೋ ? ಅಥವಾ ಆಯೋಗದವರು ವರದಿಯನ್ನು ಕೊಟ್ಟನಂತರ ನೀವು ಆ ವರದಿಯನ್ನು ಸಾರಾಸಗಟಾಗಿ ಹೆಸರನ್ನು ಮಾತ್ರ ಇಟ್ಟುಕೊಂಡು ಎಲ್ಲೆಲ್ಲೋ ಬದಲಾವಣೆ ಮಾಡುವಂಥ ವಿಚಾರ ಮಾಡಿದ್ದೀರಿ. ಆಯಿತು, ಅಲ್ಲಿಗೆ ಹೋಗೋಣ. ನಂತರ ಯಾವತ್ತು ಮಾಡಿದಿರಿ ಇದನ್ನು. ಒಂದು ದಿನ ಆಯಿತೇ ? ಎರಡು ದಿನ ಆಯಿತೇ ? ಕಾಲಕಾಲಕ್ಕೂ ಬದಲಾವಣೆ ಮಾಡಿಕೊಂಡು ಬಂದಿರಿ. ನಾನು ಏನು ನಿಮಗೆ ಹೇಳುವುದು ನೀವೇನಾದರೂ ಬದಲಾವಣೆ ಮಾಡುವುದು ಇದ್ದರೆ ಸ್ಪಷ್ಟವಾಗಿ ಒಂದು ಸಾರಿ ಬದಲಾವಣೆ ಮಾಡಿದ್ದೇವೆ, ಇದು ನಮ್ಮ ನಿರ್ಧಾರ. ಇನ್ನು ನಾಳೆ ನಾವು ಏನೂ ಮಾಡುವುದಿಲ್ಲ. ಮತ್ತೆ ಇನ್ನು ಚುನಾವಣೆ ಬರುವುದು ನವೆಂಬರ್ 27, 28ಕ್ಕೆ ಬರುತ್ತದೆ. ಇನ್ನೊಂದು ಸಾರಿ ನೀವು ಅಸೆಂಬ್ಲಿ ಕರೆದರೆ ನಮ್ಮ ಪರಿಸ್ಥಿತಿಯೇನು ? ಹೇಳುವುದಕ್ಕಾಗುವುದಿಲ್ಲ. ಯಾವ ಗಳಿಗೆಯಲ್ಲಿ ನೀವು ಕರೆಯುತ್ತೀರೋ ಬಿಡುತ್ತೀರೋ ನಮಗೆ ಸಂಶಯ ಬಂದುಬಿಟ್ಟಿದೆ. ಇನ್ನೊಂದು ಸಾರಿ ಕರೆದರೆ ನಮ್ಮ ಪರಿಸ್ಥಿತಿಯೇನು ? ಆದ್ದರಿಂದ ತಮಗೆ ಏನು ನಾನು ಹೇಳುತ್ತೇನೆ ಎಂದರೆ ನೀವು ಮಾಡಿ. ಸಾಮಾಜಿಕ ನ್ಯಾಯ ದೊರಕಬೇಕು, ಒಪ್ಪುತ್ತೇನೆ ನಾನು. ಕೊನೆಗೂ ಚಿನ್ನಪ್ಪರೆಡ್ಡಿ ವರದಿಯನ್ನು ತಂದಿರಿ. ನೀವು ಅದನ್ನು ರಾಜಕೀಯಕ್ಕೆ ತಂದಿರೋ ಯಾವುದಕ್ಕೆ ತಂದಿರೋ, ತಂದಿರಿ; ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಈ ಚಿನ್ನಪ್ಪರೆಡ್ಡಿ ವರದಿ ಅಂಗವಿಕಲವಾಗಬಾರದು. ಕೈ ಇಲ್ಲದವನು, ಕಣ್ಣಿಲ್ಲದವನು, ಕಾಲಿಲ್ಲದ ಹೆಳವನ ರೀತಿ ಈ ವರದಿ ಬರಬಾರದು. ನಮ್ಮ ಸರ್ಕಾರ ಯಾರನ್ನಾದರು ಕರೆದರೆ ಹೌದಪ್ಪ, ನಾನು ಆಯೋಗಕ್ಕೆ ಒಪ್ಪಿಕೊಳ್ಳಬೇಕು ಎನ್ನುವ ನಂಬಿಕೆ ಬರುವ ರೀತಿ ಈ ವರದಿಗಳನ್ನು ತಾವು ಕೊಡಬೇಕಾದುದು ತಮ್ಮ ಕರ್ತವ್ಯ. ಆ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ.

ಶ್ರೀ ಕೆ.ಹೆಚ್. ರಂಗನಾಥ್:– ಮಾನ್ಯ ಸದಸ್ಯರು ತುಂಬಾ ಚೆನ್ನಾಗಿ ಪ್ರಸ್ತಾಪ ಮಾಡುತ್ತಿದ್ದಾರೆ. ಮತ್ತೆ ಸರ್ಕಾರ ಹೆಚ್ಚು ವಿಚಾರ ಮಾಡುವುದಕ್ಕೆ ಅವಕಾಶವನ್ನು ಕೂಡ ಮಾಡಿಕೊಡುತ್ತಿದ್ದಾರೆ. ಚಿನ್ನಪ್ಪರೆಡ್ಡಿ ವರದಿಯನ್ನು ಅವರು ಸಲ್ಲಿಸಿದಾಗ ಅದರ ವಿಚಾರ ಪುನರ್ ಪರಿಶೀಲನೆ ಮಾಡತಕ್ಕಂಥ ಸಂದರ್ಭದಲ್ಲಿ ಮಂಡಲ್ ವರದಿ ಬಂತು. ಮಂಡಲ್ ವರದಿ ಬಂದು, ಮಂಡಲ್ ವರದಿಯ ನೀತಿ ಏನಾಗಿದೆ ಎಂದರೆ ಆಲ್ ಇಂಡಿಯಾ ಸರ್ವೀಸಸ್‌ಗೆ ಅಲ್ಲಿ ರಿಸರ್ವೇಷನ್ಸ್ ಬರುತ್ತದೆ. ನಾವು ನಮ್ಮ ರಾಜ್ಯದ ಸರ್ವೀಸಸ್‌ಗೆ ಸಂಬಂಧಪಟ್ಟಂತೆ ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ತಮಗೆ ಗೊತ್ತಿರುವ ಹಾಗೆ ದೇವರಾಜ ಅರಸ್‌ರವರ ಆ ಆರ್ಡರ್ ಪ್ರಕಾರವೇ ಇದನ್ನು ಮಾಡಿದ್ದುದು. ಹೆಗಡೆಯವರ ಕಾಲದಲ್ಲಿ 86ರ ಪ್ರಕಾರ ಮಾಡಿದ್ದುದು. ಈಗ ನಾವು ವಿಚಾರ ಮಾಡುತ್ತಿರುವುದು ಆ ಒಂದು ಹಿನ್ನೆಲೆಯಲ್ಲೇ. ಆದರೆ ಈ ಮಧ್ಯೆ ಮಂಡಲ್ ವರದಿ ಬಂದಮೇಲೆ ಇವತ್ತು ಕೆಲವು ನಮ್ಮ ಬ್ಯಾಕ್‌ವಾರ್ಡ್ ಕ್ಲಾಸ್‌ನವರಿಗೆ ಆಲ್ ಇಂಡಿಯಾದಲ್ಲಿ ಅವಕಾಶವಾಗುವುದನ್ನು ನಾವು ವಿಚಾರ ಮಾಡಬೇಕಾಗಿ ಬರುತ್ತದೆ. ಆ ಒಂದು ಹಿನ್ನೆಲೆಯಲ್ಲಿ ಮತ್ತೆ ಅದನ್ನು ಸ್ವಲ್ಪ ಆಳವಾಗಿ ಪರಿಶೀಲನೆ ಮಾಡತಕ್ಕಂಥ ಅವಶ್ಯಕತೆ ಬಂತೇ ವಿನಹ ಬೇರೇನೂ ಅಲ್ಲ. ನಮ್ಮ ಮಂಡಲ ವರದಿ ಬರದೇ ಹೋಗಿದ್ದ ಪಕ್ಷದಲ್ಲಿ ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿ ಮಾಡುವುದಕ್ಕೆ ಇಷ್ಟು ನಾವು ತಲೆ ಕೆಡಿಸಿಕೊಳ್ಳಬೇಕಾದಂಥ ಅವಶ್ಯಕತೆ ಇರಲಿಲ್ಲ. ಅದು ಬಂದಿದ್ದುದರಿಂದ ನಾವು ಅದನ್ನು ಒಪ್ಪಿಕೊಂಡರೆ, ಇಲ್ಲಿ ಕೆಲವರು ಹಿಂದುಳಿದವರು ಕೈಬಿಟ್ಟು ಹೋಗುವ ಪರಿಸ್ಥಿತಿ ಇದೆ. ಅಲ್ಲಿ ಕೆಲವರು ಬಿಟ್ಟುಹೋಗುವ ಪರಿಸ್ಥಿತಿ ಇದೆ.

ಇದು ಪರಿಸ್ಥಿತಿ ಒದಗಿಬಂದಿರುವುದರಿಂದ ಸರ್ಕಾರ ಹೆಚ್ಚು ಆಳವಾಗಿ ಪರಿಶೀಲನೆ ಮಾಡತಕ್ಕಂಥ ಅವಶ್ಯಕತೆ ಒದಗಿ ಬಂತು.

ಶ್ರೀ ವಾಟಾಳ್ ನಾಗರಾಜ್:- ನೇರವಾಗಿ ಪ್ರಶ್ನೆಯನ್ನು ನಾನು ತಮಗೆ ಕೇಳುತ್ತಿದ್ದೇನೆ, ಚಿನ್ನಪ್ಪರೆಡ್ಡಿ ವರದಿಯನ್ನು ಎಷ್ಟು ಸಾರಿ ನೀವು ಬದಲಾವಣೆ ಮಾಡುವುದು ? ಅಷ್ಟೇ ನನ್ನದು. ಹೋದ ಸಾರಿ ನಿಮ್ಮ ಮಸೂದೆ ಇಲ್ಲಿ ಮಂಡನೆಯಾದಾಗ ನೀವು ಮತದಾನಕ್ಕೆ ಹಾಕಿದ್ದರೆ 80. ನಿನ್ನೆ ಮಧ್ಯಾಹ್ನ 73ಕ್ಕೆ ಬಂತು. ಕಾಲಕಾಲಕ್ಕೂ ನಿಮ್ಮ ನಿರ್ಧಾರಗಳು ಏನಾಗುತ್ತದೆ ಎನ್ನುವುದು. ನಮಗೆ ಗೊತ್ತಾಗುವುದಿಲ್ಲ. ನಿಮ್ಮ ನಿರ್ಧಾರಗಳು ಸ್ಪಷ್ಟವಾಗಿ ಇರಬೇಕು. ಸ್ಪಷ್ಟತೆ ಇಲ್ಲ ಎನ್ನುವುದು. ನಾನೇನು ಚಿನ್ನಪ್ಪರೆಡ್ಡಿ ವರದಿಯನ್ನು ತಂದಿರುವ ಬಗ್ಗೆ ಅಥವಾ ಇಲ್ಲಿ ಮಂಡಿಸಿದ ಬಗ್ಗೆ ವಾದ ಅಲ್ಲ. ನಿಮ್ಮ ಇಚ್ಛೆ ಬಂದಂತೆ ಕಾಲಕಾಲಕ್ಕೆ ತಕ್ಕಂತೆ ನಿಮ್ಮ ಮುಖಿ ನೇರಕ್ಕೆ ಮಂಡಿಸುವುದು ಬೇಡ. ನಾನು ಆಗಲೇ ತಮಗೆ ಹೇಳಿದಂತೆ ವೀರೇಂದ್ರಪಾಟೀಲರು ಮಾಡಲಿಲ್ಲ, ಅವರು ಬಹಳ ಕಡಿಮೆ ದಿವಸ ಇದ್ದರೂ. ಬಂಗಾರಪ್ಪನವರು ಇದನ್ನು ಮಾಡಲೇ ಇಲ್ಲ, ಮುಟ್ಟಲೇ ಇಲ್ಲ, ಅದನ್ನು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ನೇರವಾಗಿ ಏನು ಹೇಳುತ್ತಿದ್ದೇನೆಂದರೆ ನೀವು ಈ ವರದಿಯನ್ನೂ ತೆಗೆದುಕೊಂಡ್ರಲ್ಲ, ತೆಗೆದುಕೊಂಡವರು ಹೋದ ಸಾರಿ ಈ ಸದನದಲ್ಲಿ ಈ ಮಸೂದೆಯನ್ನು ಸಂಪೂರ್ಣವಾಗಿ ಚರ್ಚೆ ಮಾಡಿ ಈ ಮಸೂದೆಯನ್ನು ಪಾಸ್ ಮಾಡಬಹುದಾಗಿತ್ತಲ್ಲ ? ಏತಕ್ಕೆ ನೀವು ಹಿಂದೆ ಬಿದ್ದಿರಿ ? ಏತಕ್ಕೆ ಇದಕ್ಕೆ ಒತ್ತಾಯ ಮಾಡಲಿಲ್ಲ ? ಏನು ಉದ್ದೇಶ ? ನಾನು ನೇರವಾಗಿ ಇದನ್ನು ಕೇಳುತ್ತಿದ್ದೇನೆ. ಇವತ್ತು 19 ಮತ್ತು 20ನೇ ತಾರೀಖು ಸಭೆ ಕರೆಯುವುದನ್ನು ನೀವು ಮೊದಲೇ ಮಾಡಬೇಕಾಗಿತ್ತು. ಈ ಮಸೂದೆಯನ್ನು ಏನು ಮಾಡಿದ್ದೀರಿ ? ಇದರಿಂದ ಏನು ಪ್ರಯೋಜನ ? ಇನ್ನು ಹದಿನೈದು ದಿವಸಗಳಾದ ನಂತರ ಈಗಾಗಲೇ ತಮಗೆಲ್ಲಾ ಗೊತ್ತಿರುವಂತೆ ಚುನಾವಣಾ ಆಯುಕ್ತರು ಮಹತ್ವವಾದಂಥ ಯಾವುದೇ ನೀತಿಯನ್ನು ನೀವು ಕೈಗೊಳ್ಳಬಾರದೆಂದು ಕಲ್ಕತ್ತಾದಲ್ಲಿ ಮಾತನಾಡುತ್ತಾ ಸ್ಪಷ್ಟವಾಗಿ ಹೇಳಿರುವರಲ್ಲದೆ ಹಿಂದುಳಿದವರ ಮೀಸಲಾತಿ ಬಗ್ಗೆಯಾಗಲಿ ಕ್ರಮ ತೆಗೆದುಕೊಳ್ಳಬಾರದೆಂದು ಹೇಳಿದ್ದಾರೆ ಮತ್ತು ನನ್ನ ಪ್ರಕಟಣೆ ಬರದೇ ಇದ್ದರೂ ಚಿಂತೆ ಇಲ್ಲ, ಪ್ರಕಟಣೆಗಿಂತ ಮುಂಚಿತವಾಗಿ ಯಾವುದೇ ನಿರ್ಧಾರ ತೆಗೆದುಕೊಳ್ಳಬಾರದೆಂದು ನೇರವಾಗಿ ಸರ್ಕಾರಗಳಿಗೆ ಹೇಳಿದ್ದಾರೆ.

ಶ್ರೀ ಕೆ.ಎಚ್. ರಂಗನಾಥ್:- ಅದು ನಮಗೆ ಅನ್ವಯವಾಗುವುದಿಲ್ಲ ಬಹಳ ಮಟ್ಟಿಗೆ ಹೊಸದಾಗಿ ಏನಾದರೂ ಕ್ರಮ ಕೈಗೊಂಡಾಗ ಮಾತ್ರ ಅದು ಅನ್ವಯವಾಗುತ್ತದಷ್ಟೆ. ನಮ್ಮ ಪರಿಸ್ಥಿತಿ ಏನಾಗಿದೆ ? ದಿವಂಗತ ಶ್ರೀಮಾನ್ ದೇವರಾಜ ಅರಸ್‌ರವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿನ ಸರ್ಕಾರಿ ಆಜ್ಞೆ, 1986ಆಜ್ಞೆ ಮತ್ತು ತದನಂತರ ಹೊರಡಿಸಿದ ಆಜ್ಞೆ ಸರ್ವೋಚ್ಚ ನ್ಯಾಯಾಲಯದಿಂದ ಬಂದಂಥ ಆದೇಶದ ಪ್ರಕಾರ ಸಿಂಧುವಲ್ಲವೆಂದು ಮೀಸಲಾತಿ ಪ್ರಮಾಣವನ್ನು ಶೇಕಡ 50ಕ್ಕೆ ನಿಲ್ಲಿಸಬೇಕೆಂದು ಹೇಳಿದ ನಂತರ, ನಮಗೆ ಈಗಾಗಲೇ ಒಂದು ಕಾನೂನು ಇದೆ, ಅದು ಬಳಕೆಯಾಗುತ್ತಿತ್ತು, ಅದರ ಫಲಾನುಭವಿಗಳೂ ಸಹ ಇದ್ದಾರೆ, ಆ ಕಾನೂನು ಚಾಲ್ತಿಯಲ್ಲಿತ್ತು. ಅದು ಈಗ ಸ್ಥಗಿತಗೊಂಡಿದೆ. ಆದುದರಿಂದ, ಇದನ್ನು ಮತ್ತೆ ಪರಿಶೀಲಿಸಬೇಕಾಗಿದೆ. ಆದರೆ, ಹೊಸದಾಗಿ ನಾವು ಮೀಸಲಾತಿ ಕಾನೂನು ಮಾಡುವುದಾದರೆ ಶೇಷನ್‌ರವರು ಹೇಳಿದ ರೀತಿಯಲ್ಲಿ ಹಿಂದುಳಿದ ವರ್ಗದವರನ್ನು to woo them, ಪುಸಲಾಯಿಸುವುದಕ್ಕೋಸ್ಕರ ಮಾಡಲಾಗುತ್ತಿದೆಯೆಂಬ ಆಪಾದನೆ ಬರುತ್ತದೆ. ಕರ್ನಾಟಕದಲ್ಲಿ ಹಾಗಿಲ್ಲ. ಅಲ್ಲದೆ, ಈ ಮಧ್ಯೆ ಮಂಡಲ ಆಯೋಗ ರೆಫರ್ ಆದಾಗಲೂ ಸುಪ್ರೀಂ ಕೋರ್ಟ್ ಹೇಳುತ್ತದೆ. ಪ್ರಮೋಷನ್ ಮತ್ತಿತರ ವಿಷಯದಲ್ಲಿ ಯಾವುದಾದರೂ ರಾಜ್ಯದಲ್ಲಿ ಅವರಿಗೆ ಸಂಬಂಧಿಸಿದ ಕಾನೂನು ಇದ್ದರೆ, ಆ ಕಾನೂನನ್ನು ಮತ್ತೆ ಮುಂದುವರೆಸಬಹುದೆಂದು ಕೂಡ ಹೇಳಿದ್ದಾರೆ. ಇವೊತ್ತು ಪರಿಸ್ಥಿತಿ ಹಾಗೆ ಇರುವುದರಿಂದ ಶೇಷನ್‌ರವರ ಆಪಾದನೆ ನಮಗೆ

ಅನ್ವಯಿಸುವುದಿಲ್ಲ. ಹೊಸದಾಗಿ ನಾವು ಮಾಡುವುದಕ್ಕೆ ಹೊರಟಿಲ್ಲ. ಈ ದೃಷ್ಟಿಯಿಂದ ಇದನ್ನು ಪರಿಶೀಲನೆ ಮಾಡುತ್ತಿದ್ದೇವೆಯೇ ವಿನಹ ಹೊಸದಾಗಿ ಮಾಡುತ್ತಿಲ್ಲ. ಅವರು ಹೇಳಿರಬಹುದು, ಅದು ಅಭಿಪ್ರಾಯದ ವಿಚಾರವಾಗುತ್ತದೆ. ಈ ವೇದಿಕೆಯನ್ನು ಬಳಸಿಕೊಂಡು ಅವರ ಬಗ್ಗೆ ಏನಾದರೂ ಹೇಳುವುದಕ್ಕೆ ನಾನು ಹೊರಟಿಲ್ಲ. ಆದರೆ, ವಸ್ತುಸ್ಥಿತಿ ಏನು ? ಇದರ ಹಿನ್ನೆಲೆಯಲ್ಲಿ ಅದು ನಮಗೆ ಅನ್ವಯಿಸುವುದಿಲ್ಲವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಒಂದೊಂದು ಸಾರಿ ಸ್ವಲ್ಪ ಕಷ್ಟವಾಗುತ್ತದೆ. ವ್ಯಕ್ತಿಗಳ ಬಗ್ಗೆ ಇರುವಂಥ ಗೌರವ, ತಾಳುವಂಥ ಅಭಿಪ್ರಾಯಕ್ಕೂ ಒಂದೊಂದು ಸಾರಿ ಕಾಂಟ್ರವರ್ಸಿ ಬಂದುಬಿಡುತ್ತದೆ.

ಶ್ರೀ ಕೆ.ಎಚ್. ರಂಗನಾಥ್:– ವೈಯಕ್ತಿಕ ಗೌರವದ ಪ್ರಶ್ನೆಯಲ್ಲ, ಇಲ್ಲಿರುವುದು ವಿಚಾರದ ಪ್ರಶ್ನೆ. I do not want to caste aspersions against anybody or any authority. ಇವೊತ್ತು ಕರ್ನಾಟಕದಲ್ಲಿರುವಂಥ ಪರಿಸ್ಥಿತಿ ಏನು ? ನಾವು ಏನು ಮಾಡುವುದಕ್ಕೆ ಹೊರಟಿದ್ದೇವೆ ? ನಾವು ಹೊಸದಾಗಿ ಮಾಡುವುದಾದರೆ ಅವರು ಹೇಳಿರುವ ಮಾತು ಅನ್ವಯಿಸುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ಉಚ್ಚ ನ್ಯಾಯಾಲಯದವರು ನಮಗೆ ನಿರ್ದೇಶನ ಕೊಟ್ಟಿರುವುದರಿಂದ ನಮಗೆ ಬೇರೆ ವಿಧಿಯಿಲ್ಲದೆ ಪರಿಪಾಲಿಸಬೇಕಾಗಿ ಬಂತೆಂದು ತಾವು ಹೇಳಿದಿರಿ.

ಶ್ರೀ ಕೆ.ಎಚ್. ರಂಗನಾಥ್:– ಅದು ಪ್ರವೇಶಾವಕಾಶಕ್ಕಾಗಿ ಮಾತ್ರ. ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಕಾಲೇಜುಗಳಿಗೆ ಪ್ರವೇಶಾವಕಾಶಕ್ಕೆ ಸಂಬಂಧಿಸಿದಂತೆ ಸರ್ಕಾರ ಬುದ್ಧಿಪೂರ್ವಕವಾಗಿ ಆ ತೀರ್ಮಾನ ತೆಗೆದುಕೊಂಡಿದ್ದುದು, ಆದರೆ, ಸರ್ಕಾರಿ ನೌಕರಿಗೆ ಸಂಬಂಧಿಸಿದಂತೆ ತೆಗೆದುಕೊಂಡಿಲ್ಲ. ಆ ತರಹದ ಎರಡು ಅನುಕೂಲತೆಗಳನ್ನು ನಾವು ಮಾಡಿಕೊಂಡಿದ್ದರಿಂದ ಹತ್ತು ವರ್ಷಕ್ಕೂ ಹೆಚ್ಚು ಕಾಲ ಆ ಅನುಕೂಲಗಳನ್ನು ಕರ್ನಾಟಕ ರಾಜ್ಯದ ಪ್ರಜೆಗಳ ಅನುಭವಿಸುತ್ತಿದ್ದರಿಂದ ಅದನ್ನು ಮತ್ತೆ ಪುನರ್ ಪರಿಶೀಲನೆ ಮಾಡುವಂಥ ಪರಿಸ್ಥಿತಿ ಒದಗಿ ಬಂದಿದ್ದರಿಂದ ಇವೊತ್ತು ಈ ಕಾನೂನು ಬಂದಿದೆಯೆಂದು ಹೇಳುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಮತ್ತೆ ಎದ್ದು ನಿಂತು ತಮಗೆ ತೊಂದರೆ ಕೊಡಲು ಇಷ್ಟಪಡುವುದಿಲ್ಲ. ನಮ್ಮ ಇಡೀ ವಾದ ಇಷ್ಟೇ. ನೀವು ಹೇಳಿದಂತೆ, ಈ ರಾಜ್ಯದಲ್ಲಿ ಯಾವ ರೀತಿ ಹುಟ್ಟಿನಿಂದ ಮತ್ತು ನಾವು ಮಾಡಿರುವ ಕಸುಬಿನ ಆಧಾರದ ಮೇಲೆ ಈ ದರಿದ್ರ ವ್ಯವಸ್ಥೆ ಏನು ನಮ್ಮನ್ನು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ಏನು ಭಾಗ ಮಾಡಿತೋ ಮತ್ತು ಇವರ ಹುಟ್ಟು ಮತ್ತು ಕಸುಬನ್ನು ಆಧಾರವಾಗಿಟ್ಟುಕೊಂಡು ಏನು ಸಮಾಜವನ್ನು ವಿಚ್ಛಿದ್ರವಾಗಿ ಒಡೆದು ಹಾಕಿದರು, ಇದರಿಂದಾಗಿ ಮೀಸಲಾತಿ ಕೊಡುವಂಥ ಪರಿಸ್ಥಿತಿ ಸೃಷ್ಟಿಯಾಯಿತು. ನೀವು ಮೀಸಲಾತಿ ಕೊಡುವುದನ್ನು ನಾವು ವಿರೋಧಿಸುವುದಿಲ್ಲ, ಇಷ್ಟು ಮೀಸಲಾತಿ ಕೊಡಿ ಎಂದೂ ಸಹ ನಿಮ್ಮನ್ನು ಬಲವಂತ ಮಾಡುವುದಿಲ್ಲ. ನಮ್ಮ ವಾದವಿಷ್ಟೆ. ನೀವು ಹೇಳಿದ ರೀತಿಯಲ್ಲಿ ದಿನಾಂಕ 16.11.92ರಂದು ಈ ರಾಷ್ಟ್ರದ ಉಚ್ಚ ನ್ಯಾಯಾಲಯ ಇಂದಿರಾ ಸಹಾನಿಯವರ ಪ್ರಕರಣದಲ್ಲಿ ಒಂದು ತೀರ್ಮಾನ ಕೊಟ್ಟಿದೆ. ಆ ತೀರ್ಮಾನ ಕೊಡುವಾಗ ನೀವು ಹೇಳಿದ ರೀತಿಯಲ್ಲೇ ಕೇಂದ್ರ ಸರ್ಕಾರ ಏನು ಮಾಡಬೇಕೆನ್ನುವುದೂ ಸಹ ಹೇಳಿದೆ, ಅಲ್ಲದೆ ರಾಜ್ಯ ಸರ್ಕಾರ ಏನು ಮಾಡಬೇಕು ಎನ್ನುವುದೂ ಹೇಳಿದೆ. ಬರೀ ಕೇಂದ್ರ ಸರ್ಕಾರಕ್ಕಷ್ಟೆ ಹೇಳಿಲ್ಲ. ಈ ತೀರ್ಪಿನ ಪ್ರತಿ ನನ್ನ ಹತ್ತಿರವಿದೆ. ರಾಜ್ಯ ಸರ್ಕಾರ ಏನು ಮಾಡಬೇಕೆಂದು ಹೇಳಿದೆಯೆಂದರೆ, 'ನಾಲ್ಕು ತಿಂಗಳೊಳಗೆ ನೀವು ಒಂದು ಖಾಯಂ ಆಯೋಗ ರಚನೆ ಮಾಡಬೇಕು, ಖಾಯಂ ರಚನೆಯಾಗಿ ಅದರ ವರದಿ ಬರುವವರೆಗೆ ನಿಮ್ಮಲ್ಲಿ ಯಾವ ವ್ಯವಸ್ಥೆಯಿದೆಯೋ.....ತಾವು ಸಹ ವಕೀಲರಾಗಿದ್ದೀರಿ, ಆ ತೀರ್ಪನ್ನು ನಾನು ಓದುತ್ತೇನೆ.

"This direction shall not however apply to State where there is reservation in favour of the backward classes already in operation. They can continue to operate them." ಮತ್ತು ಶೇಕಡ 50ಕ್ಕೆ ಸೀಮಿತಗೊಳಿಸಬೇಕೆಂದು ಹೇಳಿದರು. ಇದನ್ನು 50ಕ್ಕೆ ಸೀಮಿತಗೊಳಿಸುವಂಥ ನಿರ್ದೇಶನ ಏನಿದೆ, ಈ ನಿರ್ದೇಶನ ರಾಜ್ಯ ಸರ್ಕಾರಕ್ಕೆ ಅನ್ವಯವಾಗುವುದಿಲ್ಲ. ಯಾವ ರಾಜ್ಯದಲ್ಲಿ ಈಗಾಗಲೇ ಮೀಸಲಾತಿ ಪದ್ಧತಿ ಇತ್ತೋ, ಮೀಸಲಾತಿ ಪದ್ಧತಿಯನ್ನು ಖಾಯಂ ಆಯೋಗದ ವರದಿ ಬರುವವರೆಗೆ ನೀವು ಮುಂದುವರೆಸಿಕೊಂಡು ಹೋಗಬಹುದು.

ಇದು ಸುಪ್ರೀಂ ಕೋರ್ಟ್ ಕೊಟ್ಟಿರುವ ನಿರ್ದೇಶನ. ಸರ್ಕಾರದ ಮುಂದೆ ನಿನ್ನೆಯಿಂದಲೂ ನಮ್ಮ ಕಂಠ ಶೋಷಣೆ ಏನೆಂದರೆ ಈ 50 ಪರ್ಸೆಂಟನ್ನು ಸೀಮಿತಗೊಳಿಸಿ ಅವತ್ತಿನ ನಿರ್ದೇಶನ ಸರ್ಕಾರಕ್ಕೇನು ಬಂದಿದೆ ಅದನ್ನು ಕಾರ್ಯರೂಪಕ್ಕೆ ತರುವುದಕ್ಕೆ ನೀವು ಅನುಸರಿಸಬೇಕಾದಂಥ ರೀತಿ, ರಿವಾಜು, ನೀತಿ, ನಿಯಮಗಳೇನು ಎನ್ನುವುದು ಕೂಡ ಸುಪ್ರೀಂ ಕೋರ್ಟ್‌ನವರು ತಮ್ಮ ಆದೇಶದಲ್ಲಿ ಕೊಟ್ಟಿದ್ದಾರೆ. ಅದು 16–11–92ರಂದು ಬಂದಿದೆ. ಇದು ನಿನ್ನೆ ಮೊನ್ನೆ ಬಂದಿರತಕ್ಕದಲ್ಲ. ಆದ್ದರಿಂದ ವ್ಯಕ್ತಿಗಳ ಮಧ್ಯ ಅಭಿಪ್ರಾಯಗಳಿಗೆ ಕಾನ್‌ಫ್ಲಿಕ್ಟ್ ಬಂದಾಗ ಇದರ ಬಗ್ಗೆ ಹೇಳುವುದಕ್ಕೆ ನಮ್ಮಂಥವರಿಗೆ ಕಷ್ಟವಾಗುತ್ತದೆ. ನಿಮ್ಮ ಬಗ್ಗೆ ಅತ್ಯಂತ ಗೌರವವನ್ನು ಇಟ್ಟುಕೊಂಡಿರುವಾಗ ನಿಮ್ಮ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳದಿರುವುದು ಕಷ್ಟವಾಗುತ್ತದೆ. ನಮ್ಮ ವಾದವೇನೆಂದರೆ 16–11–92ರಂದು ಈ ರಾಷ್ಟ್ರದ ಸಂವಿಧಾನದ ಆರ್ಟಿಕಲ್ 16ರರ ಕಾಲಂ 4 ನ್ನು ಆಧಾರವಾಗಿಟ್ಟುಕೊಂಡು ಈ ರಾಷ್ಟ್ರದ ಉಚ್ಚ ನ್ಯಾಯಾಲಯವು ಒಂದು ತೀರ್ಪನ್ನು ಕೊಟ್ಟಿದೆ. ಅದು ಇಂದಿರಾ ಸಹಾನಿ ಕೇಸ್‌ನಲ್ಲಿ. ಅದರಲ್ಲಿ ಈ ರಾಷ್ಟ್ರದಲ್ಲಿ ಹಿಂದುಳಿದವರನ್ನು ಗುರುತಿಸಲು ಕೇಂದ್ರ ಸರ್ಕಾರದವರು ಏನು ಮಾಡಬೇಕು ಎನ್ನುವ ಬಗ್ಗೆ ಕೂಡ ಹೇಳಿದ್ದಾರೆ, ನಾನು ರಾಜ್ಯ ಸರ್ಕಾರಕ್ಕೆ ಮಾತ್ರ ಸೀಮಿತಗೊಳಿಸಿ ಹೇಳುತ್ತೇನೆ. ನೀವು ಒಂದು ಖಾಯಂ ಆಯೋಗವನ್ನು ರಚನೆ ಮಾಡಿ, ಅದು ವರದಿಯನ್ನು ಕೊಡುವವರೆಗೆ ಈಗ ಇರತಕ್ಕ ಪದ್ಧತಿಯನ್ನೇ ಕರ್ನಾಟಕದಲ್ಲಿ ಮುಂದುವರೆಸಿಕೊಂಡು ಹೋಗಿ ಎಂದು ಅವರು ನಿರ್ದೇಶನವನ್ನು ಕೊಟ್ಟಿದ್ದಾರೆ. ನೀವು ಆ ವಿದ್ಯುಕ್ತವಾದ ಮಾರ್ಗವನ್ನು ರಾಜ ಮಾರ್ಗವನ್ನು, ನ್ಯಾಯವಾದ ಮಾರ್ಗವನ್ನು ಬಿಟ್ಟು ಅಡ್ಡ ದಾರಿಯನ್ನು ಹಿಡಿಯತಕ್ಕ ಅವಶ್ಯಕತೆ ಏನಿತ್ತು? ಅದು ನನ್ನ ಪ್ರಶ್ನೆ?

ಶ್ರೀ ಕೆ.ಹೆಚ್. ರಂಗನಾಥ್:– ಆ ರೀತಿಯ ತೀರ್ಮಾನ ಬಂದ ದಿವಸ ಕರ್ನಾಟಕದಲ್ಲಿ 69 ಪರ್ಸೆಂಟ್ ಮೀಸಲಾತಿಯ ಕಾನೂನು ಇತ್ತು, ಅದನ್ನು ತಾವು ಒಪ್ಪಿಕೊಳ್ಳುತ್ತೀರ? ಆದ್ದರಿಂದ ಅದನ್ನು ನಾವು ಮುಂದುವರೆಸಿಕೊಂಡು ಹೋಗಿದ್ದರೆ ಸುಪ್ರೀಂ ಕೋರ್ಟ್‌ನ ಆಜ್ಞೆಯನ್ನು ನಿರಾಕರಣೆ ಮಾಡಿದಂತಾಗುವುದಿಲ್ಲ. ಈ ಮಧ್ಯೆ ತಮಿಳುನಾಡಿನಲ್ಲಿ ಒಂದು ಕಾನೂನು ಪಾಸ್ ಆಗಿದೆ. ಆದ್ದರಿಂದ ನಾವು ಸುಪ್ರೀಂ ಕೋರ್ಟ್‌ನ ಆಜ್ಞೆಯನ್ನು ನಿರಾಕರಣೆ ಮಾಡಿದಂತಾಗುವುದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸುಪ್ರೀಂ ಕೋರ್ಟ್ ಏನು ಹೇಳಿದೆ ಎಂಬುದರ ಬಗ್ಗೆ ಮಾನ್ಯ ರಾಮಯ್ಯನವರು ಅರ್ಧ ಓದಿದರು. ಆದ್ದರಿಂದ ತಮಗೆ ತಪ್ಪು ಕಲ್ಪನೆಯಾಗಿದೆ. ಅದರಲ್ಲಿ ಏನು ಇದೆ ಎಂದರೆ:

"This direction shall not however apply to States where reservations in favour of the backward classes are not in operation. They can continue to operate them. Such States shall however evolve the said criteria within six months from today and apply the same to exclude socially advanced persons/sections from the designated other backward classes."

Inc ra Sahney case is of No. 30, 1992, 6 months from the date ಅಂದರೆ ಈ

ದಿನಾಂಕದ ಆರು ತಿಂಗಳಿನಲ್ಲಿ ಎಂದರೆ ನೀವು ಮಾಡಲೇಬೇಕಾಗಿತ್ತು. ಆ ಕಾರಣ ಅದನ್ನೇ ಮುಂದುವರೆಸಬಹುದಾಗಿತ್ತು ಎನ್ನತಕ್ಕದ್ದು ಸರಿಯಾಗುವುದಿಲ್ಲ.

ಶ್ರೀ ಕೆ.ಹೆಚ್ ರಂಗನಾಥ್:- ಈ ಒಂದು ಹಿನ್ನೆಲೆಯಲ್ಲಿ ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ 69 ಪರ್ಸೆಂಟ್ ಮೀಸಲಾತಿಯನ್ನು ಮಾಡಿದ್ದಾರೆ, ಅದನ್ನು ಪುಷ್ಟೀಕರಿಸಿ 9ನೇ ಶೆಡ್ಯೂಲ್‌ನಲ್ಲಿ ಸೇರಿಸಬೇಕೆಂದು ರಾಷ್ಟ್ರಾಧ್ಯಾಕ್ಷರ ಒಪ್ಪಿಗೆಯನ್ನು ಪಡೆದುಕೊಂಡು ಕೇಂದ್ರ ಸರ್ಕಾರ ಪಾರ್ಲಿಮಂಟ್‌ನಲ್ಲಿ ಕಾನೂನು ಬಂದಮೇಲೆ ಅಂಥದ್ದೆ ಜನಾಂಗಗಳು, ಜಾತಿಗಳು ಕರ್ನಾಟಕದಲ್ಲಿ ಇದ್ದರೆ ಅವರುಗಳು Why should we deny them that opportunity? Why should we? What right have we got? Don't you think it is our duty to help them also ಇವತ್ತು ಅದು ಇಲ್ಲದೆ ಇರತಕ್ಕ ಪರಿಸ್ಥಿತಿ ಬಂದಿದ್ದರೆ, ಮುಖ್ಯಮಂತ್ರಿಗಳು ಇದರ ಬಗ್ಗೆ ಪ್ರಸ್ತಾಪ ಮಾಡುವಾಗ ಸವಿಸ್ತಾರವಾಗಿ ಹೇಳುತ್ತಾರೆ. ನಾವು ಇಲ್ಲಿಯವರೆಗೆ ಸರ್ಕಾರದ ಹುಕುಮನ್ನು ಮಾಡಿಕೊಂಡು ಈ ಮೀಸಲಾತಿಯನ್ನು ಪಾಲನೆ ಮಾಡುತ್ತಿದ್ದೆವು. ಆದರೆ ಮೊದಲ ಬಾರಿಗೆ ತಮಿಳುನಾಡಿನಲ್ಲಿ ಇಂಥ ಒಂದು ಕಾನೂನನ್ನು ಮಾಡಿ ಅದನ್ನು ಪುಷ್ಟೀಕರಿಸಲು ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆದು 9ನೇ ಶೆಡ್ಯೂಲ್‌ನಲ್ಲಿ ಸೇರಿದೆ. ಈ ರೀತಿ ಇರುವಾಗ ಅಂಥಾದೇ ಜಾತಿಗಳು, ಜನಾಂಗದವರು ನಮ್ಮ ರಾಜ್ಯದಲ್ಲಿದ್ದಾಗ, ಅಂಥ ಜನಾಂಗದವರ ಸಂಖ್ಯೆ ನಮ್ಮಲ್ಲಿ ಜಾಸ್ತಿ ಇದ್ದ ಪಕ್ಷದಲ್ಲಿ ನಾವು ಅವರಿಗೆ ಈ ಅನುಕೂಲವನ್ನು ನಿರಾಕರಣೆ ಮಾಡುತ್ತೇವೆ ಎನ್ನತಕ್ಕದ್ದು ಸರಿಯಾಗುತ್ತದೆಯೇ ? ಅವರಿಗೆ ಸಹಾಯ ಮಾಡತಕ್ಕದ್ದು ನಮ್ಮ ಕರ್ತವ್ಯವಲ್ಲವೆ ? ಈ ದೃಷ್ಟಿಯಿಂದ ಈ ಕಾನೂನನ್ನು ತಂದಿದ್ದರೆ ಅದು ಹೇಗೆ ಅಸಿಂಧುವಾಗುತ್ತದೆ ? ಅದು ಹೇಗೆ ವಾದಕ್ಕೆ ನಿಲುಕುವುದಿಲ್ಲ, ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ಮಾನ್ಯ ನಂಜುಂಡಸ್ವಾಮಿಯವರು ನಮ್ಮಲ್ಲಿ ಇರುವ ಕಾನೂನನ್ನೆ ಮುಂದುವರೆಸಿಕೊಂಡು ಹೋಗಬಹುದಾಗಿತ್ತು ಎಂದಿದ್ದಾರೆ, ಇದರ ಬಗ್ಗೆ ಆರು ತಿಂಗಳಿನೊಳಗೆ ಮಾಡಬೇಕಾಗಿತ್ತು ಎಂದು ಇದೆ, ಈ ಮಾಧ್ಯದಲ್ಲಿ ಬೇರೆ ಬೇರೆ ಪರಿಸ್ಥಿತಿಗಳು ಒದಗಿಬಂದಿವೆ. ತಮಿಳುನಾಡಿನಲ್ಲಿ ಇದರ ಬಗ್ಗೆ ಕಾನೂನನ್ನು ಮಾಡಿ ರಾಷ್ಟ್ರಾಧ್ಯಕ್ಷರು ಒಪ್ಪಿಗೆಯನ್ನು ಪಡೆದುಕೊಂಡು ಪಾರ್ಲಿಮೆಂಟ್‌ನ ಅನುಮೋದನೆಯನ್ನು ಪಡೆದುಕೊಂಡಿದೆ. ಇದು ಹೊಸ ವಿಚಾರಕ್ಕೆ ಅವಕಾಶ ಮಾಡಿಕೊಡುತ್ತದೆ. ಇವತ್ತು ವಿರೋಧ ಪಕ್ಷದವರು ನಮ್ಮನ್ನು ಮೆಚ್ಚಬೇಕು. ಕಾಂಗ್ರೆಸ್ ಪಕ್ಷದವರಾದ ನಾವು ವಿರೋಧ ಪಕ್ಷದ ಸರ್ಕಾರದವರು ಮಾಡಿರುವಂಥದ್ದನ್ನು ಕಾಂಗ್ರೆಸ್ ಪಕ್ಷದವರಾದ ನಾವು ಇಡೀ ಭರತ ಖಂಡದಲ್ಲಿ ಮೊದಲ ಬಾರಿಗೆ ಇದನ್ನು ತೆಗೆದುಕೊಳ್ಳುತ್ತಿದ್ದೇವೆ, by taking the risk of our party and our part high command from the point of view of the benefit that we are going to give to the backward class people of our State. ಇದನ್ನು ತಾವು ಮೆಚ್ಚಬೇಕು. ಇವತ್ತು ನಾವು ಮುಖ್ಯಮಂತ್ರಿಯವರಲ್ಲಿ, ಪಕ್ಷದವರಲ್ಲಿ, ಮಂತ್ರಿಮಂಡಲದಲ್ಲಿ ಪುನಃ ವಿಚಾರ ಮಾಡಿದ್ದೇವೆ. ಮೊದಲ ಬಾರಿಗೆ ಈ ರಿಸ್ಕ್ ತೆಗೆದುಕೊಳ್ಳುತ್ತಿದ್ದೇವೆ. ಆದುದರಿಂದ ಈ ವಿಚಾರದಲ್ಲಿ ಮಾಡಿರತಕ್ಕದ್ದು ಸೂಕ್ತವಾಗುತ್ತದೆ. ಇರಲಿ, ಶ್ರೀ ವಾಟಳ್ ನಾಗರಾಜ್‌ರವರೆ, ನಿಮ್ಮ ವಿಚಾರಕ್ಕೆ ನಾನು ಅಡ್ಡಿ ಬಂದೆ. ನಿಮ್ಮ ವಾದ ಸರಣಿಯನ್ನು ನಾನು ಕೆಡಿಸಿದ್ದಕ್ಕೆ ದಯಮಾಡಿ ಕ್ಷಮಿಸಬೇಕು.

ಶ್ರೀ ಎಸ್.ಎಂ. ಕೃಷ್ಣ:- ಇದರ ಜೊತೆಗೆ ನಮ್ಮ ಮೀಸಲಾತಿಯ ಇತಿಹಾಸವನ್ನು ನೋಡಿದರೆ ನಮಗೆ ಸಾಕಷ್ಟು ಸ್ಫೂರ್ತಿ ಕೊಟ್ಟಿರುವುದು ತಮಿಳುನಾಡು ಪೆರಿಯಾರ್ ರಾಮಸ್ವಾಮಿ ನಾಯಕರ್ ಆತ್ಮಗೌರವದ ಚಳುವಳಿಯನ್ನು ತಮಿಳುನಾಡಿನಲ್ಲಿ ಪ್ರಾರಂಭ ಮಾಡಿದರು. ಅನಂತರ ಇದು ಅಂದಿನ ಹಳೆಯ ಮೈಸೂರು ರಾಜ್ಯದಲ್ಲೂ ಹಬ್ಬಿತ್ತು. ಹಳೆ ಮೈಸೂರು ರಾಜ್ಯದಲ್ಲಿ ಸಾಂಕೇತಿಕವಾಗಿ ಈ ಮೀಸಲಾತಿ ವಿಚಾರವನ್ನು ನಾವು ಕೈಗೆತ್ತಿಕೊಂಡೆವು. ಆದುದರಿಂದ ಈ ದಿವಸ ಕೂಡ ತಮಿಳುರಾಜ್ಯ

ಇಡೀ ರಾಷ್ಟ್ರಕ್ಕೆ. ಅದರಲ್ಲೂ ದಕ್ಷಿಣ ರಾಜ್ಯಗಳಿಗೆ ದಾರಿ ತೋರಿಸಿದೆ. ಈಗ ಆ ದಾರಿಯಲ್ಲಿ ನಾವು ಹೋದರೆ ಅದಕ್ಕೆ ಅಂಜಿಕೆ, ಅಳುಕು ಬೇಕಾಗಿಲ್ಲ. ಆದುದರಿಂದ ನಾವು ಧೈರ್ಯವಾಗಿ ಮುಂದೆ ಹೋಗಬಹುದು.

ಶ್ರೀ ವಾಟಾಳ್ ನಾಗರಾಜ್:– ನಾವು ಅಂಜಿಕೊಂಡು ಬಂದಿಲ್ಲ, ಅಳುಕಿಕೊಂಡೂ ಬಂದಿಲ್ಲ, ರೈಲು ಹೋಧಮೇಲೆ ಟಿಕೇಟು ತೆಗೆದುಕೊಳ್ಳುತ್ತೇವಲ್ಲಾ ರೈಲು ಹೊರಟು ಹೋಗಿದೆ. ಅದು ಆಗಿ ಯಾವ ಕಾಲವಾಯಿತು. ನಾಳೆ ನಿಮ್ಮದಾಗಿ ಏನು ಮಾಡಿತ್ತೀರಿ ? ಅದನ್ನು ಹೇಳಿ. ನಿಮ್ಮ ಭಾಷಣವನ್ನು ಒಪ್ಪಿದೆ. ನಿಮ್ಮ ಜೊತೆಯಲ್ಲಿ ನಮ್ಮ ಸಹಮತವಿದೆ.

ಶ್ರೀ ಎಸ್.ಎಂ. ಕೃಷ್ಣ:– ಇನ್ನೊಂದು ರೈಲು ಬಂದೇ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಅದು ಆಗಬಹುದು. ಇನ್ನೊಂದು ರೈಲು ಬರುವುದು ಎಷ್ಟು ಹೊತ್ತಿಗೋ ? ಇನ್ನೊಂದು ರೈಲು ಬರುವುದು ಮುಂದಿನ ಚುನಾವಣೆಗೆ, ಅಷ್ಟು ಹೊತ್ತಿಗೆ ಏನೇನು ಆಗುತ್ತದೆಯೋ ಇದರ ಪರಿಸ್ಥಿತಿ. ಚಿನ್ನಪ್ಪರೆಡ್ಡಿ ವರದಿ, ಅದಕ್ಕೆ ಮಸೂದೆ, ಅದರ ಹಣೆಬರಹ ಏನೇನು ಆಗುತ್ತದೆಯೋ ? ಅದರ ಪ್ರಶ್ನೆ ಬೇರೆ. ಈಗ ಇಲ್ಲಿ ನಾವು ನೀವು ಆತ್ಮಶೋಧನೆ ಮಾಡಿಕೊಳ್ಳಬೇಕು. ಶ್ರೀ ರಾಮಕೃಷ್ಣ ಹೆಗಡೆಯವರು ಅನ್ಯಾಯವಾಗಿದೆ ಎಂದು ಹೇಳಿದರು. ಅವರು ಬರಲೇ ಇಲ್ಲ. ಮಾನ್ಯ ಬಂಗಾರಪ್ಪನವರು ಅನ್ಯಾಯವಾಗಿದೆ ಎಂದು ಹೇಳಿ, ಅವರ ಪಾಡಿಗೆ ಅವರು ಹೊರಟುಹೋದರು. ಈ ಮೂರು ಜನರು ಪ್ರಾಮಾಣಿಕವಾಗಿ ಆತ್ಮಶೋಧನೆ ಮಾಡಿಕೊಂಡರೆ ಒಳ್ಳೆಯದಾಗುತ್ತದೆ. ಸುಮ್ಮನೆ ಜನಗಳ ಜೊತೆಯಲ್ಲಿ ಚೆಲ್ಲಾಟವಾಡುವುದು ಬೇಡ. ನಿಮ್ಮ ಮಸೂದೆ ಏನಾಗಬಹುದು ಎನ್ನುವುದನ್ನು ರೈಲು ಬರಲಿ ಎಂದು ಹೇಳುತ್ತೀರಲ್ಲಾ, ಯಾವಾಗ ರೈಲು ಬರುವುದೆಂದರೆ ಮತ್ತೊಂದು ಚುನಾವಣೆ ಮುಗಿದ ಮೇಲೆ, ಮುಂದಿನ ಸರ್ಕಾರ ಬಂದಮೇಲೆ ದೇಶದಲ್ಲಿ, ರಾಜ್ಯದಲ್ಲಿ ಏನೇನು ಆಗುತ್ತದೆಯೋ. ಅದಕ್ಕೆ ನಾನು ಹೇಳುವುದೇನೆಂದರೆ ನೀವು ಮಾಡುವಾಗ ಯಾರು ಯಾರಿಗೆ ಕೊಡಬೇಕೆಂದು ಇದ್ದೀರಿ. ಅದರ ಬಗ್ಗೆ ನನ್ನ ತಕರಾರು ಇಲ್ಲ. ತಮಿಳುನಾಡಿನಿಂದು ಸ್ಫೂರ್ತಿ ಬಂತು ಎಂದು ಹೇಳಿದ್ದೀರಿ. ನಿಜ, ನಿಮ್ಮ ಜೊತೆಯಲ್ಲಿ ನನ್ನ ಸಹಮತವಿದೆ ನಾನು ಒಪ್ಪುತ್ತೇನೆ. ಆ ಸ್ಫೂರ್ತಿ ಬಂದಿದೆ. ಆದರೆ ಬರೀ ಸ್ಫೂರ್ತಿ ದೊರೆತಿದೆಯೇ ಹೊರತು ಇದರ ಬಗ್ಗೆ ನಿಮ್ಮ ಕಾರ್ಯಕ್ರಮಗಳು ಏನಿವೆ, ಅದು ಏನೂ ಕಾಣಲಿಲ್ಲ. ಮಳೆ ಬಂದಾಗ ಬೆಳೆ ಹಾಕುವುದನ್ನು ಬಿಟ್ಟು ಒಳ್ಳೆಯ ಬಿಸಿಲಿನಲ್ಲಿ ನೇಗಿಲು ಹಿಡಿದುಕೊಂಡು ಭೂಮಿಗೆ ಹೋಗುವುದೇ ? ಬೀಜವನ್ನು ಒಳಗೆ ಹಾಕುವುದೇ ? ಇದಕ್ಕೆ ಏನಾದರೂ ಸಂಬಂಧವಿದೆಯೆ ? ಅದಕ್ಕೆ ನಾನು ಹೇಳುವುದು ಸನ್ಯಾಸಿ ಸಹವಾಸದಿಂದ ಕೆಟ್ಟ ಎಂಬ ಒಂದು ಗಾದೆ ಇದೆ. ನನ್ನ ಮಾತಿಗೆ ಅವರು ಬೆಂಬಲ ಕೊಡಲಿ ಎಂದು ಹೇಳಿದೆ ಅಷ್ಟೆ. ಆ ರೀತಿ ಕೆಡುತ್ತಾ ಇದ್ದೀರಲ್ಲಾ, ಎಂಬ ಒಂದು ನೋವು ಇದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ವ್ಯಾಯಾಮ ಏನಿದೆ, ಆ ವ್ಯಾಯಾಮದಲ್ಲಿ ಶಕ್ತಿ ಬರುವುದಿಲ್ಲ; ಆರೋಗ್ಯವೂ ಬರುವುದಿಲ್ಲ. ಆದುದರಿಂದ ಸುಮ್ಮನೆ ಕಷ್ಟವಾದ ವ್ಯಾಯಾಮ ಮಾಡಿ ನಮ್ಮನ್ನು ಈ ಸಭೆಗೆ 19–20ರಲ್ಲಿ ಎಂದು ಕರೆದಿದ್ದೀರಿ. ಈ ಸಭೆಗೆ ಬರಲೇಬೇಕು. ಬಹಿಷ್ಕಾರ ಹಾಕುವುದು ಸರಿಯಲ್ಲವೆಂದು ನಾವು ಪ್ರಾಮಾಣಿಕವಾಗಿ ಈ ಸಭೆಗೆ ಬಂದಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರು ತಮ್ಮ ಅಂತಿಮ ನಿರ್ಧಾರವನ್ನು ಹೇಳಿ ಈಗಾಗಲೇ ಶೇ. 73ರಷ್ಟು ಎಂದು ಬಂದಿದೆ. ಆ ನಿರ್ಧಾರದಲ್ಲಿ ಏನೂ ಬದಲಾವಣೆ ಇಲ್ಲ. ಅದನ್ನೇ ನೀವು ಅಂತಿಮ ನಿರ್ಣಯವೆಂದು ತೆಗೆದುಕೊಳ್ಳುತ್ತೀರೆಂದು ಅಂದುಕೊಂಡಿದ್ದೇನೆ. ಮಾನ್ಯ ವೈ.ಕೆ. ರಾಮಯ್ಯನವರು ಅದು ಯಾವ ಗ್ಯಾರಂಟಿ ನೋಡೋಣ ಎಂದು ಹೇಳುತ್ತಾರೆ. ಗ್ಯಾರೆಂಟಿ ಯಾವುದೆಂದು ನಾವು ಕಾದು ಕುಳಿತುಕೊಳ್ಳೋಣ. ಮಾನ್ಯ ಬಂಗಾರಪ್ಪನವರು ಸಭಾತ್ಯಾಗ ಮಾಡಿದ ಹಾಗೆ ನಾನು ಮಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಸದಸಕ್ಕೆ

ಬಂದು ಹೇಳದೇ ಹೊರಗಡೆ ಹೇಳುವಂತಹ ಮಾತಿಗೆ ಹೋಗದೆ, ಕೊನೆಯವರಿಗೆ ನಾವು, ಮಾನ್ಯ ರಾಮಯ್ಯನವರು, ಪ್ರೊ॥ ನಂಜುಂಡಸ್ವಾಮಿಯವರು ಕುಳಿತಿರುತ್ತೇವೆ. ನೀವು ಹೊರಗಡೆ ಹೋದಾಗಲೆ ಜಾಸ್ತಿ ಹೇಳುವುದು. ಬಂಗಾರಪ್ಪನವರು ಇರುವಾಗ ಹೇಳುವುದಿಲ್ಲ. ಹೊರಗಡೆ ಹೋದಾಗ ನೀವು ಹೇಳುತ್ತಿರುತ್ತೀರಿ. ಇದ್ದಾಗ ನೀವು ಹೇಳಬೇಕು, ಆದ್ದರಿಂದ ನಾವು ಇಲ್ಲೇ ಕುಳಿತಿರುತ್ತೇವೆ.

12.45 ಪಿ.ಎಂ.

ಶ್ರೀ ಕೆ.ಹೆಚ್. ರಂಗನಾಥ್:- ಈ ಸಭೆಯ ಕಾನೂನನ್ನು ನಾವು ಮಾಡಿಕೊಂಡಿದ್ದೇವೆ. ಸಭೆ 11 ಗಂಟೆಗೆ ಪ್ರಾರಂಭವಾಗಿ ಸಂಜೆ 6ಗಂಟೆಯವರಿಗೆ ನಾವು ಕುಳಿತಿರುತ್ತೇವೆ. ಇಲ್ಲಿಗೆ ಬಂದಿದ್ದಕ್ಕೆ ಭತ್ಯವನ್ನು ಕೂಡ ತೆಗೆದುಕೊಳ್ಳುತ್ತೇವೆ. ನೀವು ಇದ್ದಕ್ಕಿದ್ದ ಹಾಗೆ ಎದ್ದುಹೋದರೆ ಅದಕ್ಕೆ ನಾವು ಕಾರಣವೇ ? ಇಲ್ಲಿಗೆ ಬಂದಮೇಲೆ ಕುಳಿತೇ ಇರಬೇಕು. ಲಂಚ್ ಇದೆ, ಕಾಫಿ ಕುಡಿಯುವುದಕ್ಕೆ ಮನಸ್ಸಾದರೆ ಹೋಗಿ ಬರಬೇಕು. ಅದು ಬಿಟ್ಟು ಎದ್ದುಹೋದ ಮೇಲೆ ಹೇಳಿದ್ದೀರಿ ಎಂದು ಹೇಳಿದರೆ ಹೇಗೆ ? ನಾವು 11 ಗಂಟೆಯಿಂದ ಈ ಸಭೆ ಪ್ರಾರಂಭ ಎಂದು ನಿಗದಿ ಮಾಡಿಕೊಂಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್:- ನಾವು ಹೊರಗೆ ಹೋದಾಗ ನೀವು ಏನಾದರೂ ಹೇಳಿ ಬಿಡುತ್ತೀರಿ ಎಂದು ನಾವು ಎಚ್ಚರದಿಂದ ಇಲ್ಲಿ ಕುಳಿತಿರಬೇಕು ಎಂದು ಮಾಡಿದ್ದೇವೆ. ಇದರಿಂದ ನಾವು ಏನು ತಿಳಿದುಕೊಂಡಿದ್ದೇನೆ ಯಾವುದೇ ವಿಧವಾದಂತಹ ನಿಮ್ಮ ಇದರ ಹಿಂದಿರತಕ್ಕಂಥ ಉದ್ದೇಶದ ಬಗ್ಗೆ ನನ್ನದೇನೂ ತಕರಾರು ಇಲ್ಲ ಎಂದು. ಸಾಮಾಜಿಕ ನ್ಯಾಯಾವನ್ನು ಯಾವ ಜನಕ್ಕೆ ಕೊಡಬೇಕು, ಎನ್ನುವ ಬಗ್ಗೆ ನೀವು ಏನು ತೀರ್ಮಾನ ಮಾಡುತ್ತೀರಿ ಮತ್ತು ಎಷ್ಟು ಜನರಿಗೆ ಧ್ವನಿ ಇಲ್ಲದವರಿಗೆ, ತುಳಿತಕ್ಕೆ ಒಳಗಾಗಿರುವವರಿಗೆ, ಅವರು ಯಾರೇ ಆಗಿರಲಿ ಸೌಲಭ್ಯ ಕೊಡಬೇಕು ಎನ್ನುವಂತಹ ವಾದದಲ್ಲಿ ಒಂದು ಅಕ್ಷರವೂ ನಾವು ಹಿಂದೆ ಬೀಳತಕ್ಕಂಥವರು ಅಲ್ಲ. ಅದರ ಬಗ್ಗೆ ನನ್ನ ಪ್ರಾಮಾಣಿಕವಾದ ಬೆಂಬಲ ಇದೆ. ಅದರಲ್ಲಿ ಎರಡು ಅಭಿಪ್ರಾಯ ಇಲ್ಲ. ಆದರೆ ನಿಮ್ಮ ರೀತಿ ನೀತಿಗಳ, ವ್ಯವಸ್ಥೆಗಳ ಗೊಂದಲದ ಬಗ್ಗೆ ನಮ್ಮ ಸಂಪೂರ್ಣವಾದ ವಿರೋಧ ಇದೆ ಎಂದು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

† ಪ್ರೊ॥ ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ):- ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳ ಮತ್ತು ಇತರೆ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕ 1994, ಇದನ್ನು ಕಳೆದ ಅಧಿವೇಶನದಲ್ಲಿ ಮಂಡಿಸಿದಾಗಲೆ ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡಿದ್ದೆ. ಈ ಶಾಸನ ಸಭೆಯು ಒಂದು ಸರ್ವಾನುಮತದಿಂದ ನಿರ್ಣಯ ಮಾಡಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಬೇಕು ಎಂದು ಹೇಳಿ, ಆ ನಿರ್ಣಯದ ಒಂದು ಪ್ರತಿಯನ್ನು ತಮ್ಮ ಕಡೆಗೆ ಕಳುಹಿಸಿದ್ದೆ. ಆ ನಿರ್ಣಯವನ್ನು ತಾವೂ ಮರೆತಿರಿ. ಸಭಾ ನಾಯಕರು ಮರೆತರು ಮತ್ತು ಈ ಸಭೆಯ ವಿರೋಧ ಪಕ್ಷದ ನಾಯಕರೂ ಮರೆತರು. ಇವತ್ತು ಕೂಡ ನಾನು ಈ ಸರ್ಕಾರಕ್ಕೆ ಮಾಡುತ್ತಿರುವಂತಹ ಮೊದಲನೆ ಸಲಹೆ, ಈ ಮಸೂದೆಯನ್ನು ತಾವು ಅಂಗೀಕಾರ ಮಾಡಬೇಕು ಎಂದು ತೀರ್ಮಾನ ಮಾಡಿದ್ದರೂ ಸಹ ಅದನ್ನು ಸ್ವಲ್ಪ ಮುಂದೂಡಿ ಎಲ್ಲಾ ಪಕ್ಷಗಳ ಜೊತೆ ಮಾತುಕತೆ ನಡೆಸಿ ಪೂರ್ವಭಾವಿಯಾಗಿ ಒಂದು ಸರ್ವಾನುಮತದ ನಿರ್ಣಯಕ್ಕೆ ತಾವು ಬರಬೇಕಾಗಿತ್ತು. ಹಿಂದುಳಿದ ವರ್ಗಗಳ ಕಲ್ಯಾಣದ ಬಗ್ಗೆ, ನಿಮಗೆ ಕಳಕಳಿ ಇದ್ದರೆ ಮಾಡಬೇಕಾದಂತಹ ಮೊದಲನೆ ಕೆಲಸ ಇದು. ಏತಕ್ಕೆ ನಾನು ಈ ಸಲಹೆ ಮಾಡುತ್ತಿದ್ದೇನೆಂದರೆ ಸಭಾಧ್ಯಕ್ಷರೆ ಅದನ್ನು ತಾವು ಮಾಡದೇ ಅವಸರವಾಗಿ ಈ ಮಸೂದೆಯನ್ನು ನೀವು ನಿನ್ನೆ ಮಂಡಿಸಿರುವಂತಹ ತಿದ್ದುಪಡಿಗಳ ಜೊತೆ ಏನಾದರೂ ಇವತ್ತು

ಅಂಗೀಕಾರ ಮಾಡಿದರೆ ಹಿಂದುಳಿದ ವರ್ಗಗಳಿಗೆ 1918ನೆ ಇಸವಿಯಿಂದ ಕರ್ನಾಟಕದಲ್ಲಿ ಏನು ಅಪಚಾರವಾಗಿಲ್ಲ ಅಂತಹ ಅಪಚಾರವನ್ನು ಮಾಡಿದಂತಹ ಪಾಪಕ್ಕೆ ನೀವು ಗುರಿಯಾಗುತ್ತೀರಿ. ಈ ಮಸೂದೆ ನ್ಯಾಯಾಲಯದಲ್ಲಿ 5 ನಿಮಿಷವೂ ಕೂಡ ನಿಲ್ಲುವುದಿಲ್ಲ. ಅದಕ್ಕೆ ಕಾರಣ ಭೂತವು ತಾವೇ. Statement of objects and reasons ಕೊನೆ ಪುಟದಲ್ಲಿ ತಾವು ಹೇಳಿದ್ದೀರಿ.

"The State Government have taken into consideration the population of backward classes in the Karnataka State and having regard to the special status and the social and educational backwardness of these persons, considered it necessary to bring a similar legislation to enforce the reservation policy issued in the G.O. dated 25th July 1994 to enhance the overall reservation quota to 80%."

ಇದು ಕಳೆದ ಅಧಿವೇಶನದಲ್ಲಿ ತಾವು ಇದನ್ನು ಮಂಡಿಸಿದಾಗ, ತಾವು ಹಿಂದುಳಿದ ವರ್ಗಗಳ ಜನಸಂಖ್ಯೆಯನ್ನು ಗಮನಕ್ಕೆ ತೆಗೆದುಕೊಂಡು ಶೇಕಡ 80 ಅಂತ ನಿಗದಿ ಮಾಡಿದ್ದಿರಿ, ನಿನ್ನೆ ಮಧ್ಯಾಹ್ನ ಅದು ಶೇಕಡ 73ಕ್ಕೆ ಬಂತು, ನನ್ನ ಮೊದಲನೆಯ ಪ್ರಶ್ನೆ ನಿಮ್ಮನ್ನು ನ್ಯಾಯಾಲಯ ಕೇಳುವುದು ಯಾವ ಆಧಾರದ ಮೇಲೆ 80 ರಿಂದ 73ಕ್ಕೆ ಬಂದಿರಿ, ನೇರವಾಗಿ ನಿಮಗೆ ಕೇಳುತ್ತಾರೆ you are a whimsical Government. This reduction for 80% to 73% is arbitrary. Non–application of mind is very apparent. ಇದಿಷ್ಟೇ ಸಾಕು. ಆಮೇಲೆ ನಾವು ಈ ಹಿಂದುಳಿದವರಿಗೆ ಮೀಸಲಾತಿಯನ್ನು ಮಾಡುವಂಥ ಒಂದು ಪ್ರಕ್ರಿಯೆಯನ್ನು ಮೂಲದಿಂದ ಪ್ರಾರಂಭ ಮಾಡಬೇಕಾಗುತ್ತದೆ. ಆ ಕಾರಣ ದಯಮಾಡಿ, ನಿಮಗೇನಾದರೂ ಈ ಹಿಂದುಳಿದ ವರ್ಗಗಳ ಬಗ್ಗೆ ಕಳಕಳಿ ಇದ್ದರೆ ಈ ಮಸೂದೆಯನ್ನು ಇವತ್ತು ವಾಪಸ್ಸು ತೆಗೆದುಕೊಳ್ಳಬೇಕು. ಪೂರ್ವಭಾವಿಯಾಗಿ ಒಂದು ಸರ್ವಾನುಮತದ ನಿರ್ಣಯ ಮಾಡಬೇಕು. ವೈವಿಧ್ಯತೆ ಇರುವಂಥ ನಮ್ಮ ದೇಶದ ವಿವಿಧ ಭಾಗಗಳಲ್ಲಿ ಮೂರು ಸಾವಿರ ವರ್ಷಗಳಿಂದ ಜಾತಿ ಪದ್ಧತಿ ವಿವಿಧ ಪ್ರಮಾಣದಲ್ಲಿ ಪರಿಣಾಮ ಮಾಡಿರುವ ಕಾರಣ ಇಡೀ ದೇಶಕ್ಕೆ ಏಕಸೂತ್ರತೆಯನ್ನು ಸರ್ವೋಚ್ಚ ನ್ಯಾಯಾಲಯ ಮಾಡುವುದು ಸಮಂಜಸವಲ್ಲ. ಆ ಕಾರಣ ಆಯಾಯಾ ರಾಜ್ಯಗಳ ಸರ್ಕಾರಗಳಿಗೆ ಮೀಸಲಾತಿಯ ಪ್ರಮಾಣವನ್ನು ನಿಗದಿ ಮಾಡುವಂಥ ಪರಮಾಧಿಕಾರ ಇರಬೇಕು ಎನ್ನುವಂಥ ಸಂವಿಧಾನ ತಿದ್ದುಪಡಿ ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಈ ಸದನ ಸರ್ವಾನುಮತದಿಂದ ಶಿಫಾರಸ್ಸು ಮಾಡಿ ನಿರ್ಣಯ ಕಳುಹಿಸಿಕೊಡಬೇಕು. ಇದು ಪೂರ್ವಭಾವಿಯಾಗಿ ಮಾಡಬೇಕಾದ ಮೊದಲನೆಯ ಕೆಲಸ. ಏಕೆಂದರೆ ಈ ಒಂದು ಹೋರಾಟ ಇವತ್ತು ನಿನ್ನೆಯದಲ್ಲ. ನಾನು ಈ ಮಾತನ್ನು ಹೇಳುವುದಕ್ಕೆ ಹಲವಾರು ಕಾರಣಗಳಿವೆ. ಸನ್ಮಾನ್ಯ ಸಭಾನಾಯಕರು ಮಾತನಾಡುತ್ತಾ ನಿನ್ನೆ ಒಂದು ಪದ ಉಪಯೋಗಿಸಿದರು "socialogical ethos' ಎಂದು. ಅದು ಸರ್ಕಾರಗಳಿಗೂ ಅನ್ವಯಿಸುತ್ತದೆ, ನ್ಯಾಯಾಲಯಗಳಿಗೂ ಅನ್ವಯಿಸುತ್ತದೆ, ನಾವೇನು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಮಾಡಬೇಕು ಎಂದು ಆಯೋಗವನ್ನು ರಚಿಸಿದ್ದೇವೆ ಆ ಆಯೋಗಗಳಿಗೆ ಇದು ಅನ್ವಯಿಸುತ್ತದೆ. ಸನ್ಮಾನ್ಯ ಸಭಾಧ್ಯಕ್ಷರೆ, ಇದುವರೆಗೂ ನಮ್ಮ ದೇಶದಲ್ಲಿ, 28 ಆಯೋಗಗಳು ರಚನೆಯಾಗಿವೆ. ಅದರಲ್ಲಿ ಮನುಧರ್ಮ ಶಾಸ್ತ್ರದ ಪ್ರಭಾವ ಇಲ್ಲದೆ ಕೆಲಸ ಮಾಡಿರುವಂಥ ಸಮಿತಿಗಳು ಕೇವಲ 3. ತಾವು ಕಾಲಾವಕಾಶ ಕೊಟ್ಟರೆ ನಾನು ಆ ಸಮಿತಿಗಳ ಹೆಸರನ್ನು ಹೇಳುತ್ತೇನೆ. ಆ ಹೆಸರನ್ನು ಹೇಳುತ್ತಲೇ ಗೊತ್ತಾಗುತ್ತದೆ ಯಾವ ಯಾವ ಸಮಿತಿಯ ಮೇಲೆ ಮನುಧರ್ಮದ ಪ್ರಭಾವ ಇತ್ತು, ಯಾವ ಸಮಿತಿ ಮೇಲೆ ಮನುಧರ್ಮದ ಪ್ರಭಾವ ಇರಲಿಲ್ಲ ಎಂದು ಆಂಧ್ರ ಪ್ರದೇಶದಲ್ಲಿ ಮನೋಹರ್ ಪ್ರಸಾದ್ ಸಮಿತಿ, ಅನಂತರಾಮನ್ ಆಯೋಗ, ಮುರುಳಿಧರ್ ರಾವ್ ಆಯೋಗ, ಬಿಹಾರದಲ್ಲಿ ಮುಂಗೇರಿಲಾಲ್ ಆಯೋಗ,

ಗುಜರಾತಿನಲ್ಲಿ ಎ.ಆರ್. ಭಕ್ಷಿ ಆಯೋಗ, ಜಸ್ಟೀಸ್ ಜಿ.ವಿ. ರಾಣೇ ಆಯೋಗ, ಜಸ್ಟೀಸ್ ಆರ್.ಟಿ. ಮಂಕಟ್ ಆಯೋಗ, ಹರಿಯಾಣದಲ್ಲಿ ಗುರುನಾಂ ಸಿಂಗ್ ಆಯೋಗ, ಜಮ್ಮು ಮತ್ತು ಕಾಶ್ಮೀರದಲ್ಲಿ ಜಸ್ಟೀಸ್ ಗಜೇಂದ್ರ ಗಡ್‌ಕರ್ ಆಯೋಗ, ಜಸ್ಟೀಸ್ ಎ.ಎನ್. ವಜೀರ್ ಆಯೋಗ, ಜಸ್ಟೀಸ್ ಆದರ್ಶ್ ಆನಂದ್ ಆಯೋಗ, ಕರ್ನಾಟಕದಲ್ಲಿ ಜಸ್ಟೀಸ್ ಎಲ್.ಟಿ. ಮಿಲ್ಲರ್ ಸಮಿತಿ, ನಾಗನಗೌಡ ಸಮಿತಿ, ಎಲ್.ಜಿ. ಹಾವನೂರ್ ಆಯೋಗ, ವಿ. ವೆಂಕಟಸ್ವಾಮಿ ಆಯೋಗ...... ಕೇರಳದಲ್ಲಿ ಜಸ್ಟೀಸ್ ಟಿ.ಡಿ. ನೂಕ್ಸ್ ಕಮಿಟಿ, ವಿ.ಕೆ. ವಿಶ್ವನಾಥನ್ ಕಮಿಟಿ, ಜಿ. ಕುಮಾರ್ ಪಿಳ್ಳೈ ಕಮಿಷನ್, ಎಂ.ಡಿ ದಾಮೋದರನ್ ಕಮಿಷನ್, ಮಹಾರಾಷ್ಟ್ರದಲ್ಲಿ ಒ.ಹೆಚ್.ಬಿ. ಸ್ಟಾರ್ಡ್ ಕಮಿಟಿ, ಪಿ.ಡಿ ದೇಶಮುಖಿ ಕಮಿಟಿ, ಬ್ರಿಷ್‌ಬ್ಯಾಂಡ್ ಕಮಿಟಿ; ತಮಿಳ್ನಾಡಿನಲ್ಲಿ ಎ.ಎನ್. ಸತ್ಯನಾಥನ್ ಕಮಿಷನ್, ಜೆ.ಎಂ. ಅಂಬಾಶಂಕರ್ ಕಮಿಷನ್; ಉತ್ತರ ಪ್ರದೇಶದಲ್ಲಿ ಚಡ್ಡಿಲಾಲ್ ಸಾತಿ ಕಮಿಷನ್, ಆಲ್ ಇಂಡಿಯ ಕಾಕಾ ಕಾಲೇಲ್‌ಕರ್ ಕಮಿಷನ್, ವಿ.ಪಿ. ಮಂಡಲ್ ಕಮಿಷನ್. ಇದರಲ್ಲಿ ಕೇವಲ 3 ಕಮಿಟಿಗಳಿಗೆ ಮನುಧರ್ಮ ಶಾಸ್ತ್ರದ ಪ್ರಭಾವ ಇರಲಿಲ್ಲ. ಅವು 3 ಯಾವುವು ಎಂದರೆ ಕರ್ನಾಟಕದಲ್ಲಿ ಆಗಿದ್ದಂಥ ಜಸ್ಟೀಸ್ ಮಿಲ್ಲರ್ ಕಮಿಟಿ 1918–20, ಕೇರಳದಲ್ಲಿ ಆಗಿದ್ದಂಥ ಜಸ್ಟೀಸ್ ಟಿ.ಡಿ. ನೂಕ್ಸ್ ಕಮಿಟಿ 1985, ಮಹಾರಾಷ್ಟ್ರದಲ್ಲಿ ಆಗಿದ್ದಂಥ ಒ.ಹೆಚ್.ಬಿ. ಸ್ಟಾರ್ಡ ಕಮಿಟಿ 1928–30. ಈ 3 ಸಮಿತಿಗಳ ಅಧ್ಯಕ್ಷರಾಗಿದ್ದವರು ಮನುಧರ್ಮ ಶಾಸ್ತ್ರದಿಂದ ಬಹಳ ದೂರ ಇದ್ದವರು ಇಂಗ್ಲೇಂಡಿನವರು. ಆ ಕಾರಣ ಯಾವುದೇ ಮನುಧರ್ಮ ಶಾಸ್ತ್ರದ ಸೋಂಕು ಇಲ್ಲದೆ ಸಾಮಾಜಿಕ ನ್ಯಾಯವನ್ನೂ ಯಾವ ರೀತಿ ತರಬೇಕೆಂಬುದನ್ನು ಅತ್ಯಂತ ವೈಜ್ಞಾನಿಕವಾಗಿ ನ್ಯಾಯದ ತಳಹದಿಯ ಮೇಲೆ ಶಿಫಾರಸ್ಸು ಮಾಡಿದಂಥ 3 ಕಮಿಟಿಗಳು. ಆ ಕಾರಣ ನಾವು ಅದನ್ನು ಅಧ್ಯಯನ ಮಾಡಿ ಅಲ್ಲಿ ಯಾವ ಯಾವ ಸೂತ್ರಗಳನ್ನು ಅಳವಡಿಸಿದ್ದರು ಆ ಸೂತ್ರಗಳನ್ನು ಮತ್ತೆ ಅಳವಡಿಸುವಂಥ ಪ್ರಯತ್ನವನ್ನು ನಾವು ಮಾಡಬೇಕಾಗಿದೆ. ಸ್ವಾತಂತ್ರ್ಯ ನಂತರ ಹಿಂದುಳಿದ ವರ್ಗಗಳ ಬಗ್ಗೆ ಏನೇನು ಕೆಲಸ ನಡೆದಿದೆ ಅದು ಸಂಪೂರ್ಣವಾಗಿ ಮನುಧರ್ಮ ಶಾಸ್ತ್ರದ ಪ್ರಭಾವಕ್ಕೆ ಒಳಗಾಗಿರುವ ಪ್ರಕ್ರಿಯೆಗಳು ಎಂಬುದನ್ನು ಮಾತ್ರ ನಾವೆಲ್ಲರೂ ನೆನಪಿಟ್ಟುಕೊಳ್ಳಬೇಕು. ಅದು ಆಯೋಗಗಳ ಮೂಲಕ ಇರಬಹುದು ಅಥವಾ ನ್ಯಾಯಾಲಯಗಳ ಮೂಲಕ ಇರಬಹುದು. ನ್ಯಾಯಾಲಯದ ಬಗ್ಗೆ ನಾನು ಏಕೆ ಹೆಚ್ಚು ಒತ್ತು ಕೊಡಬೇಕೆಂದು ಇಚ್ಛೆ ಪಡುತ್ತೇನೆಂದರೆ ನ್ಯಾಯಾಲಯದಲ್ಲಿಯೂ ಕೂಡ 1951ರಿಂದ 1992ರ ವರೆಗೆ ಇಂದಿರಾ ಸಹಾನಿ ಕೇಸಿನವರೆಗೆ 1951ನೇ ಇಸವಿಯಲ್ಲಿ ಚಂಪಕಂ ದೊರೈರಾಜ್ – ವರ್ಸಸ್ – ಸ್ಟೇಟ್ ಆಫ್ ಮದ್ರಾಸ್ ಎಂಬ ಮೊಕದ್ದಮೆಯಿಂದ ಹಿಡಿದು, ಇಂದಿರಾ ಸಹಾನಿ ವರ್ಸಸ್ ಯೂನಿಯನ್ ಆಫ್ ಇಂಡಿಯ ಮೊಕದ್ದಮೆಯವರೆಗೆ ದೊಡ್ಡ ಹೋರಾಟ ನಡೆದಿದೆ. ಸುಪ್ರೀಂ ಕೋರ್ಟಿನ ಒಳಗಡೆ ಕೂಡ. ಅನಂತರ ಈ ಸಮಸ್ಯೆ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವ ಸಮಸ್ಯೆ ಅಲ್ಲವೆಂಬುದನ್ನು ನಾವು ನ್ಯಾಯಾಲಯಕ್ಕೆ ತಿಳಿಸುವ ಅವಶ್ಯಕತೆ ಕೂಡ ಉಂಟು. ಹಲವಾರು ವಿಷಯಗಳು ಇದೇ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಪಡಿಸಬೇಕಾದುದು ಇದೆ. ಉದಾಹರಣೆಗೆ ಜಲವಿವಾದಗಳನ್ನು ನ್ಯಾಯಾಯಲದ ವ್ಯಾಪ್ತಿಯಿಂದ ಸಂವಿಧಾನದಲ್ಲಿ ತೆಗೆದು ಹಾಕಿದ್ದಾರೆ. ಅದನ್ನು ಕಾರಣವಿಲ್ಲದೆ ಮಾಡಿಲ್ಲ. ಅದೇ ರೀತಿ ಮೀಸಲಾತಿ ವಿಷಯವನ್ನು ಸಾಮಾಜಿಕ ನ್ಯಾಯದ ವಿಷಯವನ್ನು ಅದರಲ್ಲೂ ವಿಶೇಷವಾಗಿ ಆರ್ಟಿಕಲ್ 15 ಮತ್ತು 16 ಇದಕ್ಕೆ ಸಂಬಂಧಪಟ್ಟಂತೆ ಸರ್ವೋಚ್ಚ ನ್ಯಾಯಾಲಯದ ಏನು ಅಧಿಕಾರ ವ್ಯಾಪ್ತಿ ಇದೆ ಅದನ್ನು ಕಡಿತಗೊಳಿಸುವಂಥ ತಿದ್ದುಪಡಿ ಕೂಡ ಸಂವಿಧಾನಕ್ಕೆ ಆಗಬೇಕೆಂದು ಈ ಸದನ ಶಿಫಾರಸ್ಸು ಮಾಡಬೇಕು. ನಾನು ಹೇಳುತ್ತಿರುವ ಈ ಮಾತನ್ನು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಮೀಸಲಾತಿ ವಿಷಯಗಳಲ್ಲಿ ನ್ಯಾಯಾಲಯಗಳು ಸರಿಯಾದ ವೇದಿಕೆ ಅಲ್ಲ ತೀರ್ಮಾನ ಮಾಡುವುದಕ್ಕೆ ಎಂಬುದನ್ನು ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಅದನ್ನು ನಾನು ಈಗ ಓದಿ ಹೇಳುತ್ತೇನೆ: In Vasanthkumar case the Supreme Court has said:

"We are afraid the courts are not necessarily the most competent to identify backward classes or to lay down guidelines for their identification except in broad and very general way. We are equipped for, that we have nolegal parameterstomeasuresocial backwardness. Wearetruelyremoved from the people, particularly those of the backward classes by layer upon layer, of gradation and degradation." ಸುಪ್ರೀಂ ಕೋರ್ಟ್ ನ್ಯಾಯಾಧೀಶರುಗಳು ಹೇಳುವ ಮಾತು. ನಾವು ಜನಗಳಿಂದ ದೂರ ಇದ್ದೇವೆ. ಅದರಲ್ಲೂ ವಿಶೇಷವಾಗಿ ಹಿಂದುಳಿದ ವರ್ಗಗಳಿಂದ ಬಹಳ ದೂರ ಉಳಿದಿದ್ದೇವೆ. ಅದು ನಿಜ. ಆ ಕಾರಣದಿಂದ ನ್ಯಾಯಾಲಯದ ಬಗ್ಗೆ ನಾವು ಹೆಚ್ಚಿಗೆ ಮಾತನಾಡುವುದು ಬೇಕಾಗಿಲ್ಲ. ನ್ಯಾಯಾಲಯಗಳು 1951ನೇ ಇಸವಿಯಿಂದ 1994ನೇ ಇಸವಿಯವರೆಗೆ ಬೇರೆ ಬೇರೆ ವಿಚಾರಗಳನ್ನು ಹೇಳುತ್ತಲೇ ಬಂದಿವೆ. ಈಗೇನೋ 50 ಪರ್ಸೆಂಟ್‌ಗಿಂತ ಹೆಚ್ಚಿಗೆ ಮೀಸಲಾತಿ ಇರಬಾರದು ಎಂದು ಇಂದಿರಾ ಸಹಾನಿ ಮೊಕದ್ದಮೆಯಲ್ಲಿ ಹೇಳಿದೆ ಅನ್ನುತ್ತಿದ್ದೀರಲ್ಲ, Do you think that this 50% rule is an absolute rule? It is not an absolute rule. 50 ಪರ್ಸೆಂಟ್ ಮೀಸಲಾತಿಯನ್ನೂ ಮೀರಿ ಮೀಸಲಾತಿ ಮಾಡಬಹುದು ನಾವು. ನಮಗೆ ಅಧಿಕಾರ ಇದೆ, ಈ ಶಾಸನ ಸಭೆಗೆ. It is not an absolute rule. ಇಂದಿರಾ ಸಹಾನಿಯಲ್ಲಿ ಹೇಳಿರುವುದು ಹೇಳುತ್ತೇನೆ ನಾನು. ನಾನು ಹಿಡಿದುಕೊಂಡಿರುವುದು This is the "Complete Report of Indira Sahani Vs. Union of India". Justice Rathnavel Pandyan quotes justice Fazal Ali; once again a Justice not influenced by the Manudharmashastra. ಫಜಲಾಲಿ ಹೇಳಿರುವುದು ಎನ್. ಎಂ. ಥಾಮಸ್ ಕೇಸ್‌ನಲ್ಲಿ. N.M. Thomas Vs. State of Kerala. "Clause 4 of Article 16 does not fix any limit on the powers of the Government to make any reservation since Clause 4 is a part of Article 16 of the Constitution it is manifesto that the State cannot be allowed to indulge in excessive reservation so as to defeat the policy contained in Article 16 (1) as to what would be a suitable reservation within permissible limits depend upon the facts and circumstances of each case and no hard and fast rule can be laid down nor can this matter be redeemed to a mathematical formula so as to be adhered to in all cases. Decided cases of this court have no doubt laid the percentage of reservation and that the percentage of reservation should not exceed 50%, but we should remember in Balaji case when this rule was laid down it was obiter dicta only and obitar dicta is not binding. As I read the authorities this is however, a rule of caution...."

ಇದು ಫಜಲಾಲಿ ಅವರು ಹೇಳಿರುವುದು. 50 ಪರ್ಸೆಂಟ್ ಎಂದು ನಮ್ಮ ನ್ಯಾಯಾಲಯಗಳು ಹೇಳಿರಬಹುದು. ಆದರೆ

".... This is only a rule of caution and does not exhaust all categories. Suppose for instance a State has large number of backward classes citizens which constitute 80% of the population and the Government in order to give proper representation reserves 80% of the jobs for them; can is be

said that the percentage of reservation is bad and violates the permissible limits of Clause 4 of Article 16, the answer must necessarily be in negative."

ಸಭಾಧ್ಯಕ್ಷರೆ, ಒಂದು ರಾಜ್ಯದಲ್ಲಿ ಏನಾದರೂ ಹಿಂದುಳಿದ ವರ್ಗಗಳ ಜನಸಂಖ್ಯೆ ಶೇಕಡ 80 ಇದ್ದರೆ, ಆ ರಾಜ್ಯಕ್ಕೆ ಮೀಸಲಾತಿಯನ್ನು ಶೇಕಡ 80ರ ವರೆಗೆ ಮಾಡುವುದಕ್ಕೆ ಅಧಿಕಾರ ಇದೆ. ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಅಭಿಪ್ರಾಯದ ಪ್ರಕಾರ. ಅದೇ ರೀತಿ ಮನುಧರ್ಮ ಶಾಸ್ತ್ರದ ಪ್ರಭಾವಕ್ಕೆ ಒಳಗಾಗದೇ ಇದ್ದಂಥ ಬೇರೆ ನ್ಯಾಯಾಧೀಶರೂ ಕೂಡ. ಅದರಲ್ಲಿ ಚಿನ್ನಪ್ಪರೆಡ್ಡಿಯವರು ಮತ್ತೆ ಕೇರಳದ ಮಾರ್ಕ್ಸ್‌ವಾದಿ ಎಂದು ಎಲ್ಲರಿಗೂ ಗೊತ್ತಿರುವಂಥ ಕೃಷ್ಣಯ್ಯರ್ ಅವರು ಹೇಳಿರುವಂಥ ಮಾತು. ಇದು ಕರ್ಮಚಾರಿ ಕೇಸ್‌ನಲ್ಲಿ ಸಭಾಧ್ಯಕ್ಷರೆ.

"There is no fixed ceiling to reservation of preferential treatment in favour of the Schedule Castes and Schedule Tribes though generally reservation may not be far in excess of 50%. There is no regidity about the 50% rule which is only a convenient guideline laid down by the judges. Every case must be decided with reference to the present practical results yielded by the application of the particular rule of preferential treatment and not with reference to hypothetical results with the application of the rule may yield in the future. Judged in the light of the discussion I am unable to find anything illegal or unconstitutional in any one of the impugned orders or circulars" ಇನ್ನೊಂದು ವಾದ ಬರುತ್ತದೆ 50 ಪರ್ಸೆಂಟಿಗಿಂತ ಜಾಸ್ತಿ ಮೀಸಲಾತಿ ಏತಕ್ಕೆ ಮಾಡಬಾರದು ಎಂಬುದಕ್ಕೆ. ಎಫಿಷಿಯೆನ್ಸಿ ಹೋಗಿಬಿಡುತ್ತದೆ ಎಂಬ ವಾದ ಇದೆ ಈ ದೇಶದಲ್ಲಿ.

ಅದರ ಬಗ್ಗೆಯೂ ಕೂಡ ಸುಪ್ರೀಂ ಕೋರ್ಟ್ ಹೇಳುವ ಒಂದು ಮಾತನ್ನು ಇಲ್ಲಿ ಹೇಳಬೇಕು: "We must repeat here what we have said earlier that there is not scientific statistical data or evidence of expert administrators who have made any study of the problem to support the opinion that the reservation in excess of 50% may impaire efficiency."

50 ಪರ್ಸೆಂಟ್‌ಗಿಂತ ಜಾಸ್ತಿ ಮೀಸಲಾತಿ ಮಾಡಿದರೆ ಎಫಿಶಿಯನ್ಸಿ ಏನೂ ಹಾಳಾಗುವುದಿಲ್ಲ ಎನ್ನುವ ಅಭಿಪ್ರಾಯವನ್ನು ಸುಪ್ರೀಂ ಕೋರ್ಟ್‌ನವರು ಹೇಳಿದ್ದಾರೆ. ಆ ಕಾರಣ ನಾವು ಈ 50 ಪರ್ಸೆಂಟ್ ರೂಲ್ ಬಗ್ಗೆ ಗಾಬರಿ ಬೀಳಬೇಕಾಗಿಲ್ಲ. ತಾವು ಗಾಬರಿ ಬಿದ್ದೀರಿ. ಇಲ್ಲದೇ ಇದ್ದರೆ ಮೊನ್ನೆ ಇದ್ದಂತಹ 80 ಪರ್ಸೆಂಟ್ ನಿನ್ನೆಗೆ 73ಕ್ಕೆ ಬರಬೇಕಾದ ಅವಶ್ಯಕತೆ ಇರಲಿಲ್ಲ. ಈಗ ತಾವು ತಪ್ಪು ಮಾಡಿಬಿಟ್ಟಿದ್ದೀರಿ. ನೀವು ಈ ಕಾನೂನನ್ನು ಮಾಡಿದರೆ ಇದು ನ್ಯಾಯಾಲಯದಲ್ಲಿ ಒಂದು ನಿಮಿಷದಲ್ಲಿ ಹಾರಿಹೋಗುತ್ತದೆ. ಇದರಿಂದ ಹಿಂದುಳಿದ ವರ್ಗಗಳಿಗೆ ಹೆಚ್ಚು ಹಾನಿಯಾಗುತ್ತದೆಯೇ ಹೊರತು ಅನುಕೂಲ ಮಾತ್ರ ಆಗುವುದಿಲ್ಲ, ಆ ಕಾರಣ ಮುಂದೆ ಬರುವ ಸರ್ಕಾರಗಳಿಗೆ ದೊಡ್ಡ ತಲೆನೋವು ತರಬೇಡಿ. ಅದೃಷ್ಟ ಇದ್ದರೆ ನೀವೇ ಬರಬಹುದು, ಅದನ್ನು ಹೇಳುವುದಕ್ಕೆ ಬರುವುದಿಲ್ಲ. ಆ ಕಾರಣ ನೀವೂ ತಲೆನೋವು ತಂದು ಕೊಳ್ಳಬೇಡಿ. ಇದು ಯಾವುದೇ ಪಕ್ಷದ ಸಮಸ್ಯೆ ಅಲ್ಲ. ಆ ಕಾರಣದಿಂದಲೇ ನಾನು ಇಲ್ಲಿ ಇರುವುದು. ತಮಗೆಲ್ಲಾ ಗೊತ್ತಿದೆ ನಾನು ಯಾವುದೋ ಪಕ್ಷದಲ್ಲಿ ಇದ್ದರೂ ಹಿಂದುಳಿದ ವರ್ಗಗಳ ಹೋರಾಟದಲ್ಲಿ ನಾನು ದೇವರಾಜ ಅರಸ್ ಅವರ ಕಾಲದಲ್ಲಿ

ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಕೊಟ್ಟಿದ್ದೆ. ಆ ಒಂದು ಕಾರಣಕ್ಕೆ ನಾನು ಇಲ್ಲಿ ಇರುವುದು. ಆ ಕಾರಣ ನೀವು ಇದರಲ್ಲಿ ಪ್ರತಿಷ್ಠೆ ವಿಚಾರ ಎಂದು ದಯಮಾಡಿ ಮಾಡಿಕೊಳ್ಳಬೇಡಿ. ನನ್ನ ಸಲಹೆ ಎಂದರೆ, ಮೊದಲು ಒಂದು ಸರ್ವಾನುಮತದ ನಿರ್ಣಯವನ್ನು ಮಾಡೋಣ. ನನಗೆ ಗೊತ್ತಿರುವ ಪ್ರಕಾರ ಈಗಾಗಲೇ ಕೆಲವು ಲೋಕಸಭಾ ಸದಸ್ಯರು ಇಂತಹ ಒಂದು ಸಂವಿಧಾನಕ್ಕೆ ತಿದ್ದುಪಡಿ ಮಸೂದೆಯನ್ನು ಖಾಸಗಿಯಾಗಿ ಮಂಡಿಸಿದ್ದಾರೆ. ಅದರ ಪ್ರಕಾರವೇ ನಾವೂ ಒಂದು ಸರ್ವಾನುಮತದ ನಿರ್ಣಯವನ್ನು ಮಾಡಿದರೆ ಸಾಕು ಈ ಸದನದಲ್ಲಿ. ಅದರಿಂದಲೂ ತಮಗೆ ರಾಜಕೀಯ ಲಾಭ ಆಗುತ್ತದೆ, ಆಗುವುದಿಲ್ಲ ಎಂದು ಏನೂ ತಿಳಿಯಬೇಡಿ. ನೀವು ಈ ಮಸೂದೆ ಮಾಡಿದರೆ ಏನು ಲಾಭ ಆಗುತ್ತದೆ ಎಂದು ತಿಳಿದಿದ್ದೀರೋ, ಆ ಒಂದು ಸರ್ವಾನುಮತದ ನಿರ್ಣಯ ಮಾಡಿದರೂ ನಿಮಗೆ ಅಷ್ಟೇ ಲಾಭ ಆಗುವುದು. ರಾಜಕೀಯ ದೃಷ್ಟಿ ಏನಾದರೂ ಇದ್ದರೆ, ಚುನಾವಣೆ ದೃಷ್ಟಿ ಏನಾದರೂ ಇದ್ದರೆ ಅದು ನನಗೆ ಗೊತ್ತಿಲ್ಲ. ನಾನು ಅದನ್ನೆಲ್ಲಾ ಮಾತನಾಡುವವನು ಅಲ್ಲ. ಬರೀ ಮೀಸಲಾತಿ ವಿಷಯ ಮಾತನಾಡುವವನು. ಈ ಕಾರಣ ಸಭಾಧ್ಯಕ್ಷರೇ. ಜೊತೆಗೆ ಈ ಸರ್ಕಾರ ಒಂದೇ ಅಲ್ಲ, ಈ ಹಿಂದೆ ಇದ್ದ ಸರ್ಕಾರದಲ್ಲಿಯೂ ಕೂಡ ಮೀಸಲಾತಿ ಸಮಸ್ಯೆ ಭಗ್ಗೆ ಯಾವ ದಿಕ್ಕುದೆಸೆ ಇರಲಿಲ್ಲ. ಒಂದು ಸ್ಪಷ್ಟ ನಿಲುವು ಈ ಹಿಂದಿನ ಸರ್ಕಾರಗಳಲ್ಲಿ ಇಲ್ಲವೇ ಇಲ್ಲ. ಈ ಮಸೂದೆಯಲ್ಲೂ ಎಷ್ಟು ವಿರೋಧಾಭಾಸಗಳು ಇವೆ ಎಂದು ಓದಿ ಹೇಳುತ್ತೇನೆ. ಪ್ರಾರಂಭದಲ್ಲಿ 2ನೇ ಪುಟದಲ್ಲಿ ತಾವು ಹೇಳಿದ್ದೀರಿ. ಡೈರೆಕ್ಟೀವ್ ಪ್ರಿನ್ಸಿಪಲ್ಸ್ ಆಫ್ ಸ್ಟೇಟ್ ಪಾಲಿಸಿ ಎಲ್ಲಾ ಬರೆದಿದ್ದೀರಿ. ಈ ಉದ್ದೇಶ ಸಾಧನೆಗೆ ಮೀಸಲಾತಿಯನ್ನು ಜಾರಿಗೆ ತರುತ್ತಿದ್ದೇವೆ ಎಂದು ಹೇಳುತ್ತಾರೆ ಸಭಾಧ್ಯಕ್ಷರು.

"Whereas under Clause 2 of Article 38 of the Constitution (This is directive principle of State Policy) the State shall in particular strive to minimise inequality in income and endeavour to eliminate in equalities in status, facilities and opportunities not only amongst individuals but also among groups of people residing in different areas or engaged in different vocations..." 2ನೇ ಪುಟದ 2 ಹಾಗೂ 3ನೇ ಪ್ಯಾರ ಬಹಳ ಮುಖ್ಯ.

"And whereas under Clause 'B' of Article 39 of the Constitution the State shall in particular direct its policy towards securing that the ownership and control of the material resource of the community are so distributed as best to subserve the common good."

"And whereas under Clause C of Article 39 of the Constitution the State shall in particular direct its policy towards securing that the operation of the economic system does not result in the concentration of wealth and means of production to common detriment."

ಇವುಗಳನ್ನು ನೀವು ಖಾತ್ರಿಗೊಳಿಸುವುದಕ್ಕೆ, ನಮಗೆ ಕೊಡುತ್ತೇವೆ ಎಂದು ಹೇಳುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ ಈ ಮಸೂದೆಯ ಒಳಗೆ ಎಂಬುದು ನಮಗೆ ಗೊತ್ತಾಗುತ್ತಾ ಇಲ್ಲ. ಸಭಾಧ್ಯಕ್ಷರೇ, ನಾನು ಈ ಸದನಕ್ಕೆ ಬಂದಾಗಿನಿಂದ, 90ನೇ ಇಸವಿಯಿಂದ ಪ್ರತಿಯೊಂದು ಬಜೆಟ್ ಭಾಷಣದಲ್ಲೂ ಇರುವ ಮುಖ್ಯ ಅಂಶ ಖಾಸಗೀಕರಣ. 90ನೇ ಇಸವಿಯಿಂದ ಖಾಸಗೀಕರಣವೇ ನಿಮ್ಮ ಆರ್ಥಿಕ ನೀತಿಯ ಒಂದು ಮುಖ್ಯ ವಿಚಾರವಾಗಿದೆ. ಸಭಾಧ್ಯಕ್ಷರೇ, ಖಾಸಗೀಕರಣಕ್ಕೂ ಆರ್ಟಿಕಲ್ 15 ಮತ್ತು 16ಕ್ಕೂ ಏನೇನು ಸಂಬಂಧ ಇಲ್ಲ. ಎಲ್ಲಿಯವರೆಗೆ ನೀವು ಖಾಸಗೀಕರಣ

ಹೆಚ್ಚು ಮಾಡುತ್ತೀರಿ, ಸಾರ್ವಜನಿಕ ಕ್ಷೇತ್ರವನ್ನು ಕಡಿಮೆ ಮಾಡುತ್ತಾ ಬರುತ್ತೀರಿ ಅಷ್ಟರ ಮಟ್ಟಿಗೆ ಮೀಸಲಾತಿಯ ಸೂತ್ರಗಳು ಅಸಂಬಂಧ್ಧ ಆಗುತ್ತಾ ಹೋಗುತ್ತವೆ.

Your reservation policy will have no relevance at all as long as your continue a policy of privatisation. ಖಾಸಗೀ ಕ್ಷೇತ್ರದಲ್ಲಿ ಮೀಸಲಾತಿ ಕೊಡಬೇಕು ಎಂದು ಏನು ಇದರಲ್ಲಿ ಸೇರಿಸಿದ್ದೀರಿ, ಈ ಸದನದ 9ನೇ ಶಾಸನ ಸಭೆ ಪ್ರಾರಂಭ ಆದಾಗಿನಿಂದ ಕೇಳಿಬರುತ್ತಾ ಇರುವ ಮಾತುಗಳು perestroika, Glacenot, Privatisation. ನೀವು ಯಾವಾಗಲೂ Perestroika, Glacenot, Privatisation ಜಾರಿಗೆ ತರುತ್ತೇವೆ ಎನ್ನುವವರು ಮೀಸಲಾತಿ ಬಗ್ಗೆ ಮಾತನಾಡುವ ಹಕ್ಕನ್ನು ಪೂರ್ತಿ ಕಳೆದುಕೊಂಡುಬಿಟ್ಟಿದ್ದೀರಿ. Perestroika, Glacenot ನ ಬೆಳವಣಿಗೆ ಆಗುವುದಕ್ಕಿಂತಲೂ ಮುಂಚೆಯೇ ಎಷ್ಟು ಇತ್ತು ಅವಕಾಶ ? ಆರ್ಟಿಕಲ್ 15ರಲ್ಲಿ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 2 ಭಾಗ ಮಾತ್ರ ಶಾಲಾಕಾಲೇಜುಗಳ ಪ್ರವೇಶ ಅವಕಾಶಕ್ಕೆ ಇತ್ತು. Only two percent of the total population. ಶಾಲಾ ಕಾಲೇಜುಗಳ ಪ್ರವೇಶಾವಕಾಶದ ಅಂಕಿ ಅಂಶಗಳನ್ನು ಇವರು ತೆಗೆದುಕೊಂಡು ನೋಡಬೇಕು. ಆರ್ಟಿಕಲ್ 60ರಲ್ಲಿ ಸರ್ಕಾರಿ ಸೇವೆಯಲ್ಲಿ ಎಷ್ಟು ಅವಕಾಶ ? One percent of the total population. ಅದೂ ಖಾಸಗೀಕರಣದ ನಿಮ್ಮ ರಾಷ್ಟ್ರೀಯ ನೀತಿ ಜಾರಿಗೆ ಬರುವುದಕ್ಕಿಂತಲೂ ಮುಂಚೆ. ಈ 5 ವರ್ಷದಿಂದ ಖಾಸಗೀಕರಣದ ನೀತಿ ಜಾರಿಗೆ ಬರುವುದಕ್ಕೆ ಪ್ರಾರಂಭವಾಗಿ, ಸಾರ್ವಜನಿಕ ಕ್ಷೇತ್ರ ಕಡಿಮೆ ಆಗುತ್ತಾ ಬರುತ್ತಾ ಇರುವ ಸಂದರ್ಭದಲ್ಲಿ ಆರ್ಟಿಕಲ್ 15 ಹಾಗೂ 16ರಲ್ಲಿ ಎಷ್ಟು ಅವಕಾಶಗಳು ಉಳಿಯಬಹುದು ? ಅದೂ ವಿಶೇಷವಾಗಿ ಆರ್ಟಿಕಲ್ 16ರಲ್ಲಿ ಎಷ್ಟು ಅವಕಾಶ ಉಳಿಯಬಹುದು ? It is becoming totally irrelevant now. ಆ ಕಾರಣ ನೀವು ನಿಮ್ಮ ಆರ್ಥಿಕ ನೀತಿಯನ್ನು ಬದಲಾವಣೆ ಮಾಡುಕೊಳ್ಳದೇ 100 ಪರ್ಸೆಂಟ್ ರಿಸರ್ವೇಷನ್ ಮಾಡಿದರೂ ಏನೇನೂ ಪ್ರಯೋಜನಕ್ಕೆ ಬರುವುದಿಲ್ಲ. This will be a scrap of paper only. ಯಾವುದೇ ಸರ್ಕಾರಿ ಆಜ್ಞೆ ಹೊರಡಿಸಿದರೂ It will be a scrap of paper only. ಆ ಕಾರಣ ಈ ಮಸೂದೆ ನೀವು ಅಂಗೀಕಾರ ಮಾಡಿ ಏನು ಪ್ರಯೋಜನ ? ಆ ಕಾರಣದಿಂದ ನಾನು ಹೇಳುತ್ತಿದ್ದೇನೆ. ಒಂದು ಸರ್ವಾನುಮತದ ನಿರ್ಣಯ ಮಾಡೋಣ. ನಂತರ ನಿಧಾನಕ್ಕೆ ಮೀಸಲಾತಿಯನ್ನು ಯಾವ ರೀತಿ ಜಾರಿಗೆ ತರಬೇಕು. You will have to define Article 12 also.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಸ್ಟೇಟ್ ಎಂದರೆ ಏನು ? ನಮ್ಮ ವಿಚಿತ್ರ ವಿಶ್ಲೇಷಣೆಯಲ್ಲಿ ಖಾಸಗೀ ಕ್ಷೇತ್ರಗಳು ನಮ್ಮ ಸ್ಟೇಟ್ ಒಳಗೆ ಬರುತ್ತಾ ಇಲ್ಲ; ಖಾಸಗೀ ಕ್ಷೇತ್ರಕ್ಕೆ ಎಷ್ಟು ಹಣ ಕೊಡುತ್ತೀರಿ ಸಭಾನಾಯಕರೇ. ಖಾಸಗೀ ಕ್ಷೇತ್ರಕ್ಕೆ ಅವರ ಮನೆಯಿಂದ ಹಣ ತಂದು ಖಾಸಗೀ ಕ್ಷೇತ್ರದ ಉದ್ಯಮಗಳನ್ನು ಪ್ರಾರಂಭ ಮಾಡುತ್ತಾರೋ ಮನೆಯಿಂದ ಅವರು ಒಂದು ಪೈಸೆ ತರುವುದಿಲ್ಲ. ಗೊತ್ತಿದೆ ನಿಮಗೆ; ತಾವೆಲ್ಲಾ ಸರ್ಕಾರ ನಡೆಸಿರುವವರು. ಎಲ್ಲಾ ನಮ್ಮ ಹಣವೇ ಖಾಸಗೀ ಕ್ಷೇತ್ರದಲ್ಲಿ ಇರುವುದು. ಆದರೆ ಮೀಸಲಾತಿ, ಸಂವಿಧಾನ, ಖಾಸಗೀ ಕ್ಷೇತ್ರಕ್ಕೆ ಅನ್ವಯಿಸುವುದಿಲ್ಲವಂತೆ. They do not come under the definition of State under Article 12. So, you will have to give a different definition in Article 12 also. ಅದನ್ನು ಮಾಡದೇ ನೀವು ಏನು 100 ಪರ್ಸೆಂಟ್ ಮೀಸಲಾತಿ ಹಾಕಿದರೂ ಏನೂ ಪ್ರಯೋಜನಕ್ಕೆ ಬರುವುದಿಲ್ಲ. ಆ ಕಾರಣಕ್ಕೆ ನಾನು ಕೇಳುತ್ತಿರುವುದು. ಅವಸರ ಮಾಡಿಕೊಳ್ಳಬೇಡಿ, ಪ್ರತಿಷ್ಠೆ ವಿಷಯ ಮಾಡಿಕೊಳ್ಳಬೇಡಿ, ದಯಮಾಡಿ ಇದನ್ನು ವಾಪಸ್ಸು ತೆಗೆದುಕೊಳ್ಳಿ.

1.15 ಪಿ.ಎಂ.

ಬೇಕಾಗಿದ್ದರೆ ನಾಳೆ ಎಲ್ಲಾ ಪಕ್ಷದ ನಾಯಕರನ್ನು ಕರೆಯಿಸಿ ಸರ್ವಾನುಮತದ ನಿರ್ಣಯ ಮಾಡೋಣ ಎಂದು ಹೇಳಿ. ಆಗ ನಮಗೆ ಒಂದು ಹೊಸ ತಳಹದಿ ಸಿಗುತ್ತದೆ. ಹೊಸ ಮೀಸಲಾತಿಯ ನೀತಿಯನ್ನು ಇಡೀ ದೇಶಕ್ಕೆ ನಾವು ರೂಪಿಸುವಂಥ ಒಂದು ಅವಕಾಶವನ್ನು ಕಲ್ಪಿಸಿಕೊಳ್ಳಬಹುದು. ಖಾಸಗೀಕರಣದ ಒಂದು ನೀತಿಯನ್ನು ನೀವು ಅಳವಡಿಸಿಕೊಂಡು ಏನು ಮೀಸಲಾತಿ ನೀತಿಗೆ ಅಪಚಾರ ಆಗುತ್ತಾ ಇದೆ, ಅದೇ ಪ್ರಕಾರ ತಾವು ಮಂಡಿಸಿರುವ ಮಸೂದೆಯ ಸೆಕ್ಷನ್ 6 – Reservation for Backward Classes and Schedule Castes and Schedule Tribes ಅಂತ ಹೇಳಿ ಅದಕ್ಕೆ ಒಂದು Proviso ಏನು ಹಾಕಿದ್ದೀರಿ, Provided no person other than the Schedule Casts and Schedule Tribes and Category 1. Other Backward Classes shall be entitled for reservation, if either whose parents is not Group A or Group B Officer in the services of the Government. Section 6 ಕ್ರೀಮೀ ಲೇಯರ್ ಅನ್ನು ಅಳವಡಿಸಿದ್ದೀರಲ್ಲ ನೀವು ಖಾಸಗೀಕರಣದ ಮೂಲಕ ಆರ್ಟಿಕಲ್ 16(4) ಅನ್ನು ನಾಶ ಮಾಡಿದ್ದೀರಿ. ಈ ಸೆಕ್ಷನ್ 6 ಕ್ರೀಮೀ ಲೇಯರ್ ಅಂತ ಏನಿದೆ, ಇದನ್ನು ಸೇರಿಸುವ ಮೂಲಕ ನೀವು ಸೆಕ್ಷನ್ 15(4) ನ್ನು ನಾಶ ಮಾಡುತ್ತಾ ಇದ್ದೀರಿ. ಮಾನ್ಯ ರಂಗನಾಥ್ ಅವರು ಮಾತನಾಡುತ್ತಾ ಹೇಳಿದರು, ಒಬ್ಬ ಕ್ಲಾಸ್ ಫೋರ್ ಇದ್ದಾನೆ ಇಲ್ಲಿ. ಅವನ ಸಂಬಳ ಇಲ್ಲಿಗೆ ಬರುತ್ತದೆ. ಏನು ಮೀನ್ಸ್ ಟೆಸ್ಟ್ ಅಂತ ಹೇಳಿ ಡಿಸ್ಕಶನ್ ಮಾಡಿದ್ದಾರೆ. ಇಂದಿರಾ ಸಹಾನಿ ಕೇಸಿನಲ್ಲಿ ಮೀನ್ಸ್ ಟೆಸ್ಟ್ ಬಗ್ಗೆ ಎಷ್ಟು ಭ್ರಷ್ಟಾಚಾರ ಪ್ರವೇಶ ಮಾಡುತ್ತದೆ, ಮೀಸಲಾತಿಯ ನೀತಿಯನ್ನು ಜಾರಿಗೆ ತರುವ ಸಂದರ್ಭದಲ್ಲಿ ಅನ್ನುವುದನ್ನು ಬಹಳ ವಿವರವಾಗಿ ಸುಪ್ರೀಂ ಕೋರ್ಟಿನವರು ಚರ್ಚೆ ಮಾಡಿದ್ದಾರೆ. Means Test in the context of fluctuating fortunes. ಇವತ್ತು ಶ್ರೀಮಂತ ಇದ್ದವನು ನಾಳೆ ಬಡವನಾಗುತ್ತಾನೆ. ಅಥವಾ ಬಡವ ಆಗುವ ರೀತಿಯಲ್ಲಿ ದಾಖಲೆಗಳನ್ನು ಸೃಷ್ಟಿ ಮಾಡುತ್ತಾನೆ.

A Sales Tax Assessee can always become a Non–Assesses. An Income Tax Assessee can always become a Non–Assessee.

ಇಂದಿರಾ ಸಹಾನಿ ಕೇಸಿನಲ್ಲಿ ಇಂತಹ ಭ್ರಷ್ಟಾಚಾರಗಳನ್ನು ಪಟ್ಟಿ ಮಾಡಿ ಹೇಳಿದ್ದಾರೆ. ಓದಿ ಹೇಳುವುದಕ್ಕೆ ಅವಕಾಶ ಇಲ್ಲ. ಅವಕಾಶ ಇದ್ದರೆ ಓದಿ ಹೇಳುತ್ತೇನೆ, ಏನೇನು ಮಾಡುತ್ತಾರೆ ಎಂದು ಯಾವ ರೀತಿ ಮೀನ್ಸ್ ಟೆಸ್ಟ್ ಅಳವಡಿಸಿದರೆ ಭ್ರಷ್ಟಾಚಾರ ಹೇಗೆ ಪ್ರವೇಶ ಮಾಡುತ್ತದೆ ? ಈಗ ಆಗುತ್ತಿಲ್ಲವೇನು ? ಈಗ ಇನ್‌ಕಮ್ ಸರ್ಟಿಫಿಕೇಟ್‌ಗಳನೇನು ಯಾರು ಬೇಕಾದರೂ ಮೊನ್ನೆ ತೆಗೆದುಕೊಳ್ಳಲಿಲ್ಲವೇನು ? ಪಂಚಾಯಿತಿ ಚುನಾವಣೆಯಲ್ಲೇ ಇನ್‌ಕಮ್ ಸರ್ಟಿಫಿಕೇಟ್‌ಗಳನ್ನು ತೆಗೆದುಕೊಳ್ಳಲಿಲ್ಲವೇನು ? ಸಾವಿರಾರು ಎಕರೆ ಜಮೀನು ಇದ್ದವರು ತೆಗೆದುಕೊಂಡರು. ಅವರ ಹೆಸರುಗಳನ್ನು ನಾನು ಇಲ್ಲಿ ಹೇಳುವುದಿಲ್ಲ. ಅದು ಎಲ್ಲರಿಗೂ ಗೊತ್ತಿದೆ. ಆ ಕಾರಣ ಸೆಕ್ಷನ್ 6 ಏನಿದೆ, ನಾನು ಈ ಮಸೂದೆಯನ್ನೇ ಮಂಡಿಸಬೇಡಿ ಎಂದು ಹೇಳುತ್ತಿದ್ದೇನೆ. ಅದರಲ್ಲೂ ಕ್ರೀಮೀ ಲೇಯರ್ ಬಗ್ಗೆ ಯಾವ ರೀತಿ ಕುತಂತ್ರ ಇದೆ ಎಂದು ಕಳೆದ ಅಧಿವೇಶನದಲ್ಲೇ ನಾನು ಹೇಳಿದ್ದೆ. ಯಾರಿಗೆ ಕಾಲೇಜಿಗೆ ಪ್ರವೇಶ ಮಾಡುವುದಕ್ಕೆ ಶಕ್ತಿ ಇದೆ, ಅವರಿಗೆ ಮೀಸಲಾತಿ ಇಲ್ಲ. ಯಾರಿಗೆ ಕಾಲೇಜು ಮೆಟ್ಟಿಲನ್ನು ಹತ್ತಲಿಕ್ಕೇ ಶಕ್ತಿ ಇಲ್ಲ, ಅವರಿಗೆ ಮೀಸಲಾತಿ ಇದೆ. ಕ್ರೀಮೀ ಲೇಯರ್ ಅಂದರೆ ಅದು. ಇದನ್ನು ನಾವು ಹೊರಗಡೆ ಸುಟ್ಟಿದ್ದೇವೆ. ಜಸ್ಟೀಸ್ ರಾಮನಂದನ್ ಪ್ರಸಾದ್ ಕಮಿಟಿ ರಿಪೋರ್ಟ್ ಇದು. ಇದರಲ್ಲಿ ಏನು ಮೋಸ ಮಾಡಿದ್ದಾರೆ ಎಂದರೆ, ಇಂದಿರಾ ಸಹಾನಿ ಮೊಕದ್ದಮೆ ತೀರ್ಪು ಬಂದ ಮೇಲೆ, ರಚನೆಯಾದಂಥ ಸಮಿತಿ ಇದು. ತಮ್ಮ ಮೂಲಕ ಹೇಳುತ್ತಾ ಇದ್ದೇನೆ, ಸಭಾನಾಯಕರು ಕೇಳಬೇಕು.

The term of reference is clearly printed on the first page. For specifying the criteria for identification of socially advanced persons among the socially and educationally backward classes... Identification of socially advanced persons, that is the term of reference. ಆದರೆ ಇದರಲ್ಲಿ ಅಳವಡಿಸಿರುವುದು ಏನು ? ಎಲ್ಲಾ ಆರ್ಥಿಕ ಅಳತೆ ಗೋಲುಗಳನ್ನು ತಾನೆ ? ಮಾನ್ಯ ರೇವಣ್ಣನವರು ಕೇಳುವುದು ಏನು ? ಎರಡು ಸಾವಿರ ಕುರಿಗಳನ್ನು ಹೊಂದಿರುವವನು ಕ್ರೀಮೀ ಕುರುಬರೆಂದು ಅವರು ಒಪ್ಪುತ್ತಾರೇನು ? ಹೌದು ಸ್ವಾಮಿ, ಎರಡು ಸಾವಿರ ಕುರಿ ಇರುವವನು ಕ್ರೀಮೀ ಕುರುಬ. ಅವನ ಮಗನಿಗೆ ಮೀಸಲಾತಿ ಇಲ್ಲ. ಸುಮ್ಮನೆ ಏಕೆ ಮಾತನಾಡುತ್ತೀರಿ, ಎಲ್ಲಿದೆ ? Is there any justification if you say 8 hectares of rain-fed land? ಬಿಜಾಪುರ ಜಿಲ್ಲೆಯಲ್ಲಿ ಇಪ್ಪತ್ತು ಎಕರೆ ಹೊಲ. ಅವನ ಮಗ automatically socially advanced person. ಈ ಜಸ್ಟೀಸ್ ಪ್ರಸಾದ್ ಪ್ರಕಾರ ? ಇದನ್ನು ಒಪ್ಪುತ್ತೀರಿ ? ಬಿಜಾಪುರ ಜಿಲ್ಲೆಯವರು ಒಪ್ಪುತ್ತಾರೇನು ? ನಾನು ಕಳೆದ ಅಧಿವೇಶನದಲ್ಲೇ ಹೇಳಿದೆ, ಹೇಗೆ ಆರ್ಟಿಕಲ್ 16 ಪ್ಯಾರಾಗ್ರಾಫ್ 4 ಅದು ಮೂಲ ಸಂವಿಧಾನದಲ್ಲಿ ಇರಲಿಲ್ಲ. ಮೂಲ ಸಂವಿಧಾನ ರಚನೆ ಮಾಡುವಾಗಲೇ ಪ್ರಾರಂಭವಾದ ಕುತಂತ್ರ ಇದು. ಆರ್ಟಿಕಲ್ 16(4) ಇತ್ತು, ಆರ್ಟಿಕಲ್ 15(4) ಇರಲಿಲ್ಲ. ಅಂದರೆ ನಮ್ಮ ಸಂವಿದಾನ ಕರ್ತೃಗಳು ವಿಧಾನಸೌಧ ಬಾಗಿಲನ್ನು ತೆಗೆದಿದ್ದರು. ಆದರೆ ಶಾಲೆಯ ಬಾಗಿಲನ್ನು ಮುಚ್ಚಿದರು. ಯಾರು ಕರ್ತೃಗಳು ಎಂದು ಕೂಡ ನಾನು ಆವಾಗ ಹೇಳಿದ್ದೆ. ಗೋಪಾಲಸ್ವಾಮಿ ಅಯ್ಯಂಗಾರ್, ಅಲ್ಲ ಕೃಷ್ಣಸ್ವಾಮಿ ಅಯ್ಯರ್. ಕೆ.ಎಂ. ಮುನಿಶಿ, ಬೆನಗಲ್ ನರಸಿಂಹರಾವ್, ಡ್ರಾಫ್ಟಿಂಗ್ ಕಮಿಟಿಯ ಚೇರ್ಮನ್ ಆಗಿ (ಈ ಪದವನ್ನು ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.) ಡಾ. ಅಂಬೇಡ್ಕರ್ ಇದ್ದರು ಎಂದು. ದಯಮಾಡಿ ಶಬ್ದಗಳು ಈ ಸದನದ ಕಡತದಲ್ಲಿ ಹೋಗತಕ್ಕಂಥಾದ್ದು ಸೂಕ್ತ ಅಲ್ಲ ಎಂದ ನಾನು ಹೇಳುತ್ತೇನೆ.

ಶ್ರೀ ಎಂ. ಮುನಿಸ್ವಾಮಿ:– ಆ ಪದ ನಮ್ಮ ಮನಸ್ಸನ್ನು ನೋಯಿಸುತ್ತದೆ. It pains us. Dr. Ambedkar has not only served the Scheduled Caste but for the whole nation. He has to withdraw that word.

PROF. M.D. NANJUNDASWAMY:– I will not withdraw.

ಉಪಾಧ್ಯಕ್ಷರು:– ಆ ಶಬ್ದವನ್ನು ಎಕ್ಸ್‌ಪಂಜ್ ಮಾಡಿದ್ದೇನೆ.

Sri. M. MUNISWAMY:– Prof. Nanjundaswamy is a senior Member of this House. He should not remark so lightly about a National leader. He has to withdraw that word and apologise to the House.

PROF. M.D. NANJUNDASWAMY:– I will not withdraw.

SRI. M. MUNISWAMY:– You must withdraw.

PROF. M.D. NANJUNDASWAMY:– I will not.

SRI. M. MUNISWAMY:– You must.

ಉಪಾಧ್ಯಕ್ಷರು:– (ಈ ಪದವನ್ನು ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸತ್ಯ ಯಾವಾಗಲೂ ಕಹಿ.

ಶ್ರೀ ಎಂ. ಮುನಿಸ್ವಾಮಿ:– ಸತ್ಯ ಎಲ್ಲರಿಗೂ ಗೊತ್ತಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾನು ಯಾರನ್ನೂ ಸುಮ್ಮಸುಮ್ಮನೆ ಹೊಗಳುವವನಲ್ಲ. ಇರುವ ವಿಚಾರವನ್ನು ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು:– ಆ ಪದವನ್ನು ನಾನು ತೆಗೆಸಿ ಹಾಕಿದ್ದೇನೆ.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅಂಬೇಡ್ಕರ್ ಅವರಿಗೆ ಎಲ್ಲಿ ಗೌರವ ಸಲ್ಲಿಸಬೇಕೋ ಅಲ್ಲಿ ಸಲ್ಲಿಸುತ್ತೇನೆ. ಸತ್ಯಾಂಶ ಏನು ನಡೆಯಿತು, ಅದನ್ನು ತಾವು ತಿಳಿದುಕೊಳ್ಳಬೇಕು, ಸುಮ್ಮಸುಮ್ಮನೆ ನಿಮಗೆ ಉದ್ವೇಗ ? ಅಂಬೇಡ್ಕರ್ ಆಗಲಿ, ಗಾಂಧೀಜಿಯವರಾಗಲೀ, ಅವರನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕೋ ಬೇಡವೋ ? ಗಾಂಧೀಜಿಯವರನ್ನು ಪೂರ್ತಿಯಾಗಿ ಒಪ್ಪಿದವನು ನಾನಲ್ಲ. ಮಾನ್ಯ ರಂಗನಾಥ್ ಅವರು ಬಹಳ ವರ್ಷಗಳ ಹಿಂದೆ ಒಮ್ಮೆ ರಸ್ತೆಯಲ್ಲಿ ಸಿಕ್ಕಿ ಮಾತನಾಡಿದ್ದರು. ಅದನ್ನು ನಾನು ಅವರಿಗೆ ನೆನಪು ಮಾಡಿಕೊಡುತ್ತೇನೆ.

ಉಪಾಧ್ಯಕ್ಷರು:– ಮಾನ್ಯ ಪ್ರೊ. ನಂಜುಂಡಸ್ವಾಮಿಯವರೇ, ತಾವು ವಿಷಯಕ್ಕೆ ಬನ್ನಿ.

ಪ್ರೊ. ಎಂ.ಡಿ ನಂಜುಂಡಸ್ವಾಮಿ:– ಸಭಾಧ್ಯಕ್ಷರೇ, ಒಂದು ನಿಮಿಷ. ಗಾಂಧೀಜಿಯವರೇ ಆಗಲಿ, ಅಥವಾ ಅಂಬೇಡ್ಕರ್ ಅವರೇ ಆಗಲಿ, ಯಾರೇ ಆಗಲಿ ಅವರನ್ನು ಸಂಪೂರ್ಣವಾಗಿ ಒಪ್ಪಬೇಕು ಎಂದು ಹೇಳತಕ್ಕವನು ನಾನಲ್ಲ. ಗಾಂಧೀಜಿಯವರ ಹೆಸರು ಬಂದಿದ್ದರಿಂದ ಸನ್ಮಾನ್ಯ ರಂಗನಾಥ್ ಅವರಿಗೆ ಒಂದು ನೆನಪನ್ನು ಮಾಡಿಕೊಡುತ್ತಿದ್ದೇನೆ. ಅವರಿಗೆ ಅದು ನೆನಪಿದೆಯೋ ಇಲ್ಲವೋ ಗೊತ್ತಿಲ್ಲ. ಬಹಳ ಹಿಂದೆ, 20 ವರ್ಷಗಳ ಕೆಳಗೆ, ಆಗ ನಾನು ತ್ರಿಪೀಸ್ ಸೂಟು, ಬೂಟು ಟೈ ಎಲ್ಲ ಕಟ್ಟುತ್ತಿದ್ದೆ. ಸಮಾಜವಾದಿ ಚಳುವಳಿಯಲ್ಲಿದ್ದೆ. ಆಗ ಒಂದು ದಿವಸ ರಂಗನಾಥ್ ಅವರು ರಸ್ತೆಯಲ್ಲಿ ಸಿಕ್ಕಿ ಕೇಳಿದರು. ಏನಿದು ? ಅಂತ. ಹೌದು, ಖಾದಿ ಬಗ್ಗೆ ನನ್ನದೇ ಆದ ಅಭಿಪ್ರಾಯ ಇದೆ ಅಂತ ನಾನು ಅವರಿಗೆ ಆಗ ಹೇಳಿದ್ದೆ. ಇವತ್ತಿಗೂ ಖಾದಿ ಬಗ್ಗೆ ನನ್ನದೇ ಆದ ಅಭಿಪ್ರಾಯ ಇದೆ. ಗಾಂಧೀಜಿ ಬಗ್ಗೆ ನನ್ನದೇ ಆದಂಥ ಅಭಿಪ್ರಾಯ ಇದೆ. ಅದನ್ನು ಹೇಳುವುದಕ್ಕೆ ನನಗೆ ಹಕ್ಕಿದೆ. ಅಂಬೇಡ್ಕರ್ ಅವರ ಬಗ್ಗೆಯೂ ಅವರಿಗೆ ಎಲ್ಲಿ ಗೌರವ ಕೊಡಬೇಕೋ, ಅವರು ಎಂತಹ ಸಾಮಾಜಿಕ ಕ್ರಾಂತಿಕಾರಿ, ಅದನ್ನು ನಾನೇನು ಇಲ್ಲಿ ಸದಸ್ಯರಿಗೆ ಹೇಳಬೇಕಾಗಿಲ್ಲ. ಅದರ ಬಗ್ಗೆ ನಾನು ಬಹಳ ಚಳುವಳಿಗಳಲ್ಲಿ ಭಾಗವಹಿಸಿದವನು. ಅವರಿಗೆ ಗೌರವ ತೋರಿಸಿರೋನು, ಆದರೆ, ನಿಜದ ಸ್ಥಿತಿ ಏನು ನಡೆಯಿತು ಅದನ್ನು ತಿಳಿದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕೋ ಬೇಡವೋ ? ಇದು ಒಂದರಲ್ಲಿ ಎಡವಿದ್ದು ಅಲ್ಲ ಅಂಬೇಡ್ಕರ್‌ರವರು, ಸಂವಿಧಾನದಲ್ಲಿ ಬಹಳ ಕಡೆ ಎಡವಿದ್ದಾರೆ. ಎಡವುದಕ್ಕೆ ಕಾರಣ sociological ethos of the constitutent assembly. ಅದರ ಬಗ್ಗೆ ಒಂದು ಪುಸ್ತಕವೇ ಇದೆ. Constitutent assemblyನಲ್ಲಿ ಯಾವ ಯಾವ ಜಾತಿಯ ಎಷ್ಟೇಷ್ಟು ಜನ ಕಾನಿಸ್ಟಿಟ್ಯೂಟುಯೆಂಟ್ ಅಸೆಂಬ್ಲಿಯಲ್ಲಿ ಸದಸ್ಯರು ಆಗಿದ್ದರು ಎಂದು. ಅಂತಹ ಒಂದು ಸದನದಲ್ಲಿ ಕೆಲಸ ಮಾಡುವಾಗ ಏನೇನು ಪ್ರಭಾವಗಳು ಬರುತ್ತವೆ ಎಂದು ಅರ್ಥ ಮಾಡಿಕೊಳ್ಳಬೇಕು. ಸುಮ್ಮನೆ ಉದ್ವೇಗದಿಂದ ಮಾತನಾಡುವುದಲ್ಲ ನಿಮಗೊಬ್ಬರಿಗೆ ಅಲ್ಲ ಸೇರಿದವರು ಅಂಬೇಡ್ಕರ್. Ambedkar is not a Harijan leader. He is a National Leader. He belongs to me as much he belongs to that Hon. Member. ಸುಮ್ಮನೆ (ಈ ಪದವನ್ನು ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.) ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಮುನಿಸ್ವಾಮಿ:– ನೋಡಿ ತಿರುಗಿ ತಿರುಗಿ ನೀವು ಇದೇ ಮಾತನಾಡುವುದು.

ಶ್ರೀ ಎಂ. ಮುನಿಸ್ವಾಮಿ:- ಸತ್ಯ ಎಲ್ಲರಿಗೂ ಗೊತ್ತಿದೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ನಾನು ಯಾರನ್ನೂ ಸುಮ್ಮಸುಮ್ಮನೆ ಹೊಗಳುವವನಲ್ಲ. ಇರುವ ವಿಚಾರವನ್ನು ನಾನು ಮಾತನಾಡುತ್ತೇನೆ.

ಉಪಾಧ್ಯಕ್ಷರು:- ಆ ಪದವನ್ನು ನಾನು ತೆಗೆಸಿ ಹಾಕಿದ್ದೇನೆ.

(ಗೊಂದಲ)

ಪ್ರೊ. ಎಂ.ಡಿ. ನಂಜುಂಡಸ್ವಾಮಿ:- ಅಂಬೇಡ್ಕರ್ ಅವರಿಗೆ ಎಲ್ಲಿ ಗೌರವ ಸಲ್ಲಿಸಬೇಕೋ ಅಲ್ಲಿ ಸಲ್ಲಿಸುತ್ತೇನೆ. ಸತ್ಯಾಂಶ ಏನು ನಡೆಯಿತು, ಅದನ್ನು ತಾವು ತಿಳಿದುಕೊಳ್ಳಬೇಕು, ಸುಮ್ಮಸುಮ್ಮನೆ ನಿಮಗೆ ಉದ್ವೇಗ ? ಅಂಬೇಡ್ಕರ್ ಆಗಲಿ, ಗಾಂಧೀಜಿಯವರಾಗಲೀ, ಅವರನ್ನು ನಾವು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕೋ ಬೇಡವೋ ? ಗಾಂಧೀಜಿಯವರನ್ನು ಪೂರ್ತಿಯಾಗಿ ಒಪ್ಪಿದವನು ನಾನಲ್ಲ. ಮಾನ್ಯ ರಂಗನಾಥ್ ಅವರು ಬಹಳ ವರ್ಷಗಳ ಹಿಂದೆ ಒಮ್ಮೆ ರಸ್ತೆಯಲ್ಲಿ ಸಿಕ್ಕಿ ಮಾತನಾಡಿದ್ದರು. ಅದನ್ನು ನಾನು ಅವರಿಗೆ ನೆನಪು ಮಾಡಿಕೊಡುತ್ತೇನೆ.

ಉಪಾಧ್ಯಕ್ಷರು:- ಮಾನ್ಯ ಪ್ರೊ. ನಂಜುಂಡಸ್ವಾಮಿಯವರೇ, ತಾವು ವಿಷಯಕ್ಕೆ ಬನ್ನಿ.

ಪ್ರೊ. ಎಂ.ಡಿ ನಂಜುಂಡಸ್ವಾಮಿ:- ಸಭಾಧ್ಯಕ್ಷರೇ, ಒಂದು ನಿಮಿಷ. ಗಾಂಧೀಜಿಯವರೇ ಆಗಲಿ, ಅಥವಾ ಅಂಬೇಡ್ಕರ್ ಅವರೇ ಆಗಲಿ, ಯಾರೇ ಆಗಲಿ ಅವರನ್ನು ಸಂಪೂರ್ಣವಾಗಿ ಒಪ್ಪಬೇಕು ಎಂದು ಹೇಳತಕ್ಕವನು ನಾನಲ್ಲ. ಗಾಂಧೀಜಿಯವರ ಹೆಸರು ಬಂದಿದ್ದರಿಂದ ಸನ್ಮಾನ್ಯ ರಂಗನಾಥ್ ಅವರಿಗೆ ಒಂದು ನೆನಪನ್ನು ಮಾಡಿಕೊಡುತ್ತಿದ್ದೇನೆ. ಅವರಿಗೆ ಅದು ನೆನಪಿದೆಯೋ ಇಲ್ಲವೋ ಗೊತ್ತಿಲ್ಲ. ಬಹಳ ಹಿಂದೆ, 20 ವರ್ಷಗಳ ಕೆಳಗೆ, ಆಗ ನಾನು ತ್ರಿಪೀಸ್ ಸೂಟು, ಬೂಟು ಟೈ ಎಲ್ಲ ಕಟ್ಟುತ್ತಿದ್ದೆ. ಸಮಾಜವಾದಿ ಚಳುವಳಿಯಲ್ಲಿದ್ದೆ. ಆಗ ಒಂದು ದಿವಸ ರಂಗನಾಥ್ ಅವರು ರಸ್ತೆಯಲ್ಲಿ ಸಿಕ್ಕಿ ಕೇಳಿದರು. ಏನಿದು ? ಅಂತ. ಹೌದು, ಖಾದಿ ಬಗ್ಗೆ ನನ್ನದೇ ಆದ ಅಭಿಪ್ರಾಯ ಇದೆ ಅಂತ ನಾನು ಅವರಿಗೆ ಆಗ ಹೇಳಿದ್ದೆ. ಇವತ್ತಿಗೂ ಖಾದಿ ಬಗ್ಗೆ ನನ್ನದೇ ಆದ ಅಭಿಪ್ರಾಯ ಇದೆ. ಗಾಂಧೀಜಿ ಬಗ್ಗೆ ನನ್ನದೇ ಆದಂಥ ಅಭಿಪ್ರಾಯ ಇದೆ. ಅದನ್ನು ಹೇಳುವುದಕ್ಕೆ ನನಗೆ ಹಕ್ಕಿದೆ. ಅಂಬೇಡ್ಕರ್ ಅವರ ಬಗ್ಗೆಯೂ ಅವರಿಗೆ ಎಲ್ಲಿ ಗೌರವ ಕೊಡಬೇಕೋ, ಅವರು ಎಂತಹ ಸಾಮಾಜಿಕ ಕ್ರಾಂತಿಕಾರಿ, ಅದನ್ನು ನಾನೇನು ಇಲ್ಲಿ ಸದಸ್ಯರಿಗೆ ಹೇಳಬೇಕಾಗಿಲ್ಲ. ಅದರ ಬಗ್ಗೆ ನಾನು ಬಹಳ ಚಳುವಳಿಗಳಲ್ಲಿ ಭಾಗವಹಿಸಿದವನು. ಅವರಿಗೆ ಗೌರವ ತೋರಿಸಿರೋನು, ಆದರೆ, ನಿಜದ ಸ್ಥಿತಿ ಏನು ನಡೆಯಿತು ಅದನ್ನು ತಿಳಿದುಕೊಳ್ಳುವುದಕ್ಕೆ ನಾವು ಪ್ರಯತ್ನ ಮಾಡಬೇಕೋ ಬೇಡವೋ ? ಇದು ಒಂದರಲ್ಲಿ ಎಡವಿದ್ದು ಅಲ್ಲ ಅಂಬೇಡ್ಕರ್‌ರವರು, ಸಂವಿಧಾನದಲ್ಲಿ ಬಹಳ ಕಡೆ ಎಡವಿದ್ದಾರೆ. ಎಡವುದಕ್ಕೆ ಕಾರಣ sociological ethos of the constitutent assembly. ಅದರ ಬಗ್ಗೆ ಒಂದು ಪುಸ್ತಕವೇ ಇದೆ. Constitutent assemblyನಲ್ಲಿ ಯಾವ ಯಾವ ಜಾತಿಯ ಎಷ್ಟೇಷ್ಟು ಜನ ಕಾನಿಸ್ಟಿಟ್ಯೂಟುಯೆಂಟ್ ಅಸೆಂಬ್ಲಿಯಲ್ಲಿ ಸದಸ್ಯರು ಆಗಿದ್ದರು ಎಂದು. ಅಂತಹ ಒಂದು ಸದನದಲ್ಲಿ ಕೆಲಸ ಮಾಡುವಾಗ ಏನೇನು ಪ್ರಭಾವಗಳು ಬರುತ್ತವೆ ಎಂದು ಅರ್ಥ ಮಾಡಿಕೊಳ್ಳಬೇಕು. ಸುಮ್ಮನೆ ಉದ್ವೇಗದಿಂದ ಮಾತನಾಡುವುದಲ್ಲ ನಿಮಗೊಬ್ಬರಿಗೆ ಅಲ್ಲ ಸೇರಿದವರು ಅಂಬೇಡ್ಕರ್. Ambedkar is not a Harijan leader. He is a National Leader. He belongs to me as much he belongs to that Hon. Member. ಸುಮ್ಮನೆ (ಈ ಪದವನ್ನು ಉಪಾಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.) ಮಾತನಾಡುವುದು ಸರಿಯಲ್ಲ.

ಶ್ರೀ ಎಂ. ಮುನಿಸ್ವಾಮಿ:- ನೋಡಿ ತಿರುಗಿ ತಿರುಗಿ ನೀವು ಇದೇ ಮಾತನಾಡುವುದು.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ:– ಹೇಳಿದ್ದೆಲ್ಲ ಕೇಳುತ್ತಾರೆ ಎಂದು ಮನಸ್ಸಿಗೆ ಬಂದ ಹಾಗೆ ಹೇಳುವುದಲ್ಲ ನಾವು ಹೇಳುತ್ತೇವೆ ನೀವು ಕಡತದಿಂದ ತೆಗೆಸಿಬಿಡಿ. ಆಗ ಸಮಾಧಾನ ಬರುತ್ತದೆ. ತಾವು ಎಲ್ಲರಿಗೂ ಎಚ್ಚರಿಕೆ ಕೊಡಬೇಕು. ಒಬ್ಬ ಮಹಾನುಭಾವ ವ್ಯಕ್ತಿಯ ಹೆಸರನ್ನು ಇಲ್ಲಿ ವಿರೋಧ ಮಾಡಬಾರದು. ಆ ಪರಮಾತ್ಮ ಇದಿದ್ದಕ್ಕೆ ನಾವು ಹರಿಜನರು ಇಲ್ಲಿ ಇದ್ದೇವೆ. ಇವತ್ತು ನಮಗೆ ಕೊಡುತ್ತಿದ್ದಾರೆ ಇವರೇನು ಕೊಡುತ್ತಿದ್ದಾರೆ. ಇವರು ಅವರನ್ನು ವಿರೋಧ ಮಾಡಿ ಕುಲಗೆಡಿಸಿ ಜಾತಿ ಬಿಡಿಸಿದರು.

ಅಧ್ಯಕ್ಷರು:– ಆಯಿತು ಕಾನಡೆಯವರೇ ಕುಳಿತುಕೊಳ್ಳಿ.

ಶ್ರೀ ಕರಿಯಣ್ಣ:– ಮಾನ್ಯ ಅಧ್ಯಕ್ಷರೇ ಅವರ ಬಗ್ಗೆ ನಮಗೆ ಗೌರವ ಇದೆ. ಅವರ ಭಾಷಣವನ್ನು ನಾವು ಇದುವರೆಗೂ ಕೇಳಿದ್ದೇವೆ. ಯಾವ ರೀತಿ ಒಬ್ಬ ಮನುಷ್ಯನನ್ನು ಟೀಕೆ ಮಾಡುವುದು ನಾಮಕಾವಸ್ಥೆಗೆ ಒಬ್ಬರು ರಾಜ್ಯಾಂಗದ ಅಧ್ಯಕ್ಷಕರು ಆಗಿಬಿಡುತ್ತಾರೋ ? ನಾಮಕಾವಸ್ಥೆಗೆ ಅವರು ಅಧ್ಯಕ್ಷರೇ ? ಅದನ್ನು ಕೇಳಿದವರು ಒಬ್ಬರು ಹುಚ್ಚರು ಅಂತ ಹೇಳುವುದಾದರೆ ಇವರು ಎಷ್ಟು ಮಟ್ಟಕ್ಕೆ ಇದ್ದಾರೆ ಎಂದು ಅರ್ಥ ಮಾಡಿಕೊಳ್ಳಿ. ಈ ರೀತಿ ಮಾತನಾಡಿದರೆ ಇವರ ಗೌರವ ಎಷ್ಟು ಕಡಿಮೆ ಆಗುತ್ತದೆಂದು ಅರ್ಥ ಮಾಡಿಕೊಳ್ಳಿ. ಒಬ್ಬ ವಿಚಾರವಾದಿಯನ್ನು ಟೀಕೆ ಮಾಡಿ ಅದನ್ನು ಕೇಳಿದರೆ ಹುಚ್ಚ ಅಂತ ಹೇಳುತ್ತಾರಲ್ಲ.

ಅಧ್ಯಕ್ಷರು:– ಆಯಿತು ಕಡತದಿಂದ ತೆಗೆದು ಹಾಕಿದ್ದಾರೆ.

ಶ್ರೀ ಗೋಪಾಲ ಮುಕುಂದ ಕಾನಡೆ:– ಅವರು ಹುಚ್ಚರೆಂದು ಹೇಳುತ್ತಾರೆ ನೀವು ಕಡತದಿಂದ ತೆಗೆದು ಹಾಕುತ್ತೀರಿ. ನನಗೆ ಅವರ ಬಗ್ಗೆ ಸ್ವಲ್ಪ ಅನುಮಾನ ಇದೆ. ಅವರು ಆಸ್ಪತ್ರೆಗೆ ಹೋಗಿ ಚೆಕ್ ಮಾಡಿಕೊಂಡು ಬರಲಿ ಅವರು ಸರಿ ಇದ್ದಾರೋ ಇಲ್ಲವೋ ಎಂದು. ಇವರ ಎಲ್ಲರ ಬಗ್ಗೆ ಈ ರೀತಿ ಮಾತನಾಡುತ್ತಾರೆ.

ಅಧ್ಯಕ್ಷರು:– ಕುಳಿತುಕೊಳ್ಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೇ ಏಕೋ ಕನ್ನಡದಲ್ಲಿ ಮಾತನಾಡುವುದು ಒಳ್ಳೆಯದಲ್ಲ ಅಂತ ಅನಿಸುತ್ತದೆ. I was just saying that the discussion should not go berserk. ಹಾಗೆಂದರೆ ಅವರಿಗೆ ಏನೂ ಆಗುವುದಿಲ್ಲ. ಅದನ್ನೇ ಕನ್ನಡದಲ್ಲಿ ಹೇಳಿದರೆ...

ಶ್ರೀ ಕರಿಯಣ್ಣ:– ಮಾನ್ಯ ಅಧ್ಯಕ್ಷರೇ ತಾವು ಕುಳಿತುಕೊಳ್ಳಿ ಅಂದ ಮೇಲೆ ನಾವು ತಮ್ಮ ಆಜ್ಞೆಯನ್ನು ಪಾಲನೆ ಮಾಡುತ್ತೇವೆ. ಅವರು ಮಾತನಾಡುವಾಗ ಒಳ್ಳೆಯ ಭಾಷೆಯನ್ನು ಬಳಸುವುದಕ್ಕೆ ಹೇಳಿ ಹುಚ್ಚರು ಅಂದರೆ ಏನು ಅರ್ಥ. ಅವರು ಹುಚ್ಚರು ಎಂದು ಹೇಳಿದರೂ ಅದನ್ನು ಕೇಳಿಕೊಂಡು ಮನೆಗೆ ಹೋಗಬೇಕಾಗಿತ್ತೇನು ನಾವು. ಅವರಿಗೆ ಹೇಳಿ ಸ್ವಲ್ಪ ಒಳ್ಳೆಯ ಶಬ್ದಗಳನ್ನು ಉಪಯೋಗಿಸಿ ಅಂತ. ಸದಸ್ಯರಿಗೆ ಎಲ್ಲರಿಗೂ ಗೌರವ ಇದೆ ಅಂತ ತಾವು ಸ್ವಲ್ಪ ಹೇಳಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಸಭಾಧ್ಯಕ್ಷರೇ ತಾವು ಹೇಳುವ ಅವಶ್ಯಕತೆ ಇಲ್ಲ. ನಾನೇ ಅವರಿಗೆ ಆಶ್ವಾಸನೆ ಕೊಡುತ್ತೇನೆ. ಆದಷ್ಟು ತಮಗೆ ಬೇಜಾರು ಆಗದ ರೀತಿಯಲ್ಲಿ ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ:– ಬೇಜಾರು ಆಗುವ ರೀತಿ ಮಾತನಾಡಿದರೆ ನಾವು ಬಿಡುವುದಿಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾನು ಅಂಬೇಡ್ಕರ್‌ರವರ ಬಗ್ಗೆ ಹೇಳಿದ್ದುದು ಸರಿಯಾದ ವಿಚಾರವೇ. ನಿಮಗೆ ಮಾತ್ರ ಅಂಬೇಡ್ಕರ್ ಬಗ್ಗೆ ಪ್ರೀತಿ ನನಗೆ ಅಂಬೇಡ್ಕರ್ ಬಗ್ಗೆ ಗೌರವ ಇಲ್ಲ ಎನ್ನುವ ಭಾವನೆ ನಿಮಗೆ ಏಕೆ ಬಂತು.

ಅಧ್ಯಕ್ಷರು:– ವಿಷಯಕ್ಕೆ ಬನ್ನಿ.

ಶ್ರೀ ಎಂ.ಡಿ. ನಂಜುಂಡಸ್ವಾಮಿ:– ಮಾನ್ಯ ಅಧ್ಯಕ್ಷರೇ ವಿಷಯಕ್ಕೆ ಬರುತ್ತಿದ್ದೇನೆ. ಹಲವಾರು ಕಾರಣಗಳಿಂದ ನಾನು ನಮ್ಮ ಸರ್ಕಾರದವರಿಗೆ ಹೇಳುತ್ತಿದ್ದೆ. ಈ ಮಸೂದೆಯನ್ನು ಅವಸರದಲ್ಲಿ ಇವತ್ತು ಮಂಡನೆ ಮಾಡಿ ಅಂಗೀಕಾರ ಮಾಡುವುದಕ್ಕೆ ಒತ್ತಾಯ ಮಾಡಬೇಡಿ ಎಂದು. ತಮ್ಮ ಮಸೂದೆಯಲ್ಲಿ adequacy of representation ಖಾಸಗೀಕರಣದ ಬಗ್ಗೆ ಮಾತನಾಡುತ್ತಾ ಹಾಗೆಯೇ ಕ್ರೀಮೀ ಲೇಯರ್‌ಗೇ ಸಂಬಂಧಪಟ್ಟ ಹಾಗೆ ಮಾತನಾಡುತ್ತಾ ಅದರ ಪರಿಣಾಮ ಏನಾಗುತ್ತದೆ ಎಂದು ನಾನು ತಮಗೆ ಈಗಾಗಲೇ ಹೇಳಿದೆ. ಈಗ ತಾವು ನನಗೆ ಉತ್ತರ ಕೊಡಬೇಕು. ಯಾವುದಾದರೂ ಜಾತಿಗಳ ಪ್ರಾತಿನಿಧ್ಯ ಸರ್ಕಾರದ ಸೇವೆಯಲ್ಲಿ ಕಡಿಮೆ ಇದ್ದರೆ ಇವತ್ತು ಅದಕ್ಕೆ ಕಾರಣ is it the paucity of candidates or is there any other risk? If any caste is inadequately represented in Government service, is the reason for it is paucity of candidates or is there any other reason. There is not paucity of candidates in any community today.

ಅಭ್ಯರ್ಥಿಗಳ ಅಭಾವ ಏನೂ ಇಲ್ಲ. ದಕ್ಷ ಅಭ್ಯರ್ಥಿಗಳ ಅಭಾವ ಏನೂ ಇಲ್ಲ. ಆದರೂ ಅವುಗಳಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲ ಎನ್ನುವುದಕ್ಕೆ ಯಾವುದೋ ಬೇರೆ ಕಾರಣ ಇದೆ. ಆ ಕಾರಣ ಸರಿಪಡಿಸುವಂತಹ ಒಂದು ಕೆಲಸ ಮಾಡಬೇಕೋ ಬೇಡವೋ ಈ ತಿದ್ದುಪಡಿ. ಮತ್ತೆ ಈಗಾಗಲೇ ಏನು ಒಟ್ಟು ಜನಸಂಖ್ಯೆಯಲ್ಲಿ ಶೇಕಡ ಒಂದು ಪರ್ಸೆಂಟ್ ಸರ್ಕಾರಿ ಸೇವೆಯಲ್ಲಿ ಅವಕಾಶ, ಒಟ್ಟು ಜನಸಂಖ್ಯೆಯಲ್ಲಿ ಶೇಕಡ 2 ಪರ್ಸೆಂಟ್ ಶಾಲಾಕಾಲೇಜು ಪ್ರವೇಶ ಅವಕಾಶ. ಅದು ಇನ್ನು ಸೀಮಿತ ಆಗುವಂತಹ ಆರ್ಥಿಕ ನೀತಿಗಳು ಜಾರಿಗೆ ಬರುತ್ತಿವೆ. ಇಂತಹ ಸಂದರ್ಭದಲ್ಲಿ ಯಾವ ಸೂತ್ರ ಅಳವಡಿಸಬೇಕು ಮೀಸಲಾತಿಗೆ ಎನ್ನುವುದು ಮುಖ್ಯವೋ ಅಲ್ಲವೋ ? To ensure adequacy of representation to all castes when there is surplus qualified candidates in every community ಎಲ್ಲಾ ಜಾತಿಗಳಲ್ಲಿ ಸರ್‌ಪ್ಲೆಸ್ ಇದ್ದಾರೆ ಇವತ್ತು. But they are inadequately represented. ಏನು ಕಾರಣ, ಕಾರಣವೇನೆಂದರೆ ನೀವೇನು ಅರ್ಧ ಭಾಗ ಎಂದು ಮೆರಿಟ್‌ಪೂಲ್ ಎಂದು ಕ್ರಿಯೆಟ್ ಮಾಡಿದ್ದೀರಿ ಅದೇ ಕಾರಣ. ಆ ಮೆರಿಟ್‌ಪೂಲನ್ನು ನಾಶ ಮಾಡುವ ಕೆಲಸ ಈ ಮಸೂದೆ ಮಾಡಬೇಕು.

DR. NAGAPPA:– He is contary to his own statement. That is what I am telling. ಅವರು ಆಗಲೇ ಭಾಷಣ ಮಾಡಿದ್ದುದು. ಸರ್ಕಾರ ಬಂದ ಮೇಲೆ There is no value for reservation policy ಎಂದು ಹೇಳುತ್ತಿದ್ದಾರೆ ಈಗ. There is no inadequacy in any department ಎಂದು ಅವರೇ ಹೇಳುತ್ತಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಸಭಾಧ್ಯಕ್ಷರೇ ನಾನು ಕನ್ನಡದಲ್ಲೇ ಮಾತನಾಡುತ್ತೇನೆ. ಏನು ಮಾಡುವುದು ಅಂತ ಗೊತ್ತಾಗುತ್ತಿಲ್ಲ. ನಾನು ಹೇಳುತ್ತಿದ್ದುದು there are surplus candidates in every community but each community is inadequately represented ಏನು ಕಾರಣ ಎಂದು. ಕಾರಣ ಏನು 50 ಪರ್ಸೆಂಟ್ ಮೆರಿಟ್‌ಪೂಲ್ ಎಂದು ನಾವು ಸೃಷ್ಟಿ ಮಾಡಿಕೊಂಡು ಬರುತ್ತಿದ್ದೇವೆ, ಅದು ಕಾರಣ; Particularly now opportunities are getting more and

more limited because of privatisation and also because of creamy layor.

ಈಗ ಅಳವಡಿಸಬೇಕಾಗಿರುವ ಸೂತ್ರ ಯಾವುದು ಎಂದು ಹೊಸದಾಗಿ ಕಂಡುಹಿಡಿಯಬೇಕೋ ಬೇಡವೋ, ಚರ್ಚೆ ಮಾಡಿ ತೀರ್ಮಾನಕ್ಕೆ ಬರಬೇಕೋ ಬೇಡವೋ ? ಅದೇ ಕೆಲಸ ಮಿಲರ್ ಕಮಿಟಿ ಮಾಡಿದ್ದುದು, ಲೋಕ್ಸ್ ಕಮಿಟಿ ಮಾಡಿದ್ದುದು, ಮಹಾರಾಷ್ಟ್ರದಲ್ಲಿ ಸ್ಟಾರ್ಕ್ ಕಮಿಟಿ ಮಾಡಿದ್ದುದು even at that time, pre–independence day, when opportunities were limited, opportunities were distributed on the basis of distributive justice.

ಡಿಸ್ಟ್ರಿಬ್ಯೂಟಿವ್ ಜಸ್ಟೀಸ್ ಎಂದರೆ ಮತ್ತೇನೂ ಅಲ್ಲ, ಜಾತಿ ಜನಸಂಖ್ಯೆಗನುಗುಣವಾಗಿ ಮೀಸಲಾತಿ. ಮತ್ತೆ ಆ ಜಾರಿಗೆ ಏನೇನು ಅವಕಾಶಗಳ ಕೋಟಾ ಕೊಡುತ್ತೀರಿ ಅದರೊಳಗಡೆಯೇ ಮೆರಿಟ್‌ಪೂಲ್ ಅದರೊಳಗಡೆಯೇ ಪಾವರ್ಟಿ. ಉದಾಹರಣೆಗೆ 7 ಪರ್ಸೆಂಟ್ ಕುರುಬರಿದ್ದಾರೆ, 7 ಸೀಟು ಅವರಿಗೆ, ಅದರಲ್ಲಿ ಮೂರೂವರೆ ಸೀಟು ಬುದ್ಧಿವಂತ ಕುರುಬರಿಗೆ, ಮೂರೂವರೆ ಸೀಟು ಬಡ ಕುರುಬರಿಗೆ. 13 ಪರ್ಸೆಂಟ್ ಒಕ್ಕಲಿಗರಿದ್ದಾರೆ, 13 ಸೀಟು ಒಕ್ಕಲಿಗರಿಗೆ ಅದರಲ್ಲಿ ಆರೂವರೆ ಸೀಟು ಬುದ್ಧಿವಂತ ಒಕ್ಕಲಿಗರಿಗೆ, ಆರೂವರೆ ಸೀಟು ಬಡ ಒಕ್ಕಲಿಗರಿಗೆ, ಇದೊಂದೇ ನ್ಯಾಯಬದ್ಧವಾದ ಸೂತ್ರ. ಯಾವ ಜಾತಿಯೂ ದೂರು ಹೇಳುವುದಕ್ಕಾಗುವುದಿಲ್ಲ, ನಮಗೆ ಮೋಸ ಆಗಿದೆ ಎಂದು. ಜಾತಿ ಜನಸಂಖ್ಯೆ ಆಧಾರದ ಮೇಲೆ ಮೀಸಲಾತಿ ಆಗ Adequecey of representation should be ensured to every community.

SHRI. K.H. RANGANATH:– Are you not perpetuating the caste system? Is it not against the principle of casteless society?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅದಕ್ಕೂ ಉತ್ತರ ಹೇಳಬೇಕಾಗುತ್ತದೆ, ಹೇಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಸ್ವಾಮಿ, ನಾವು ಆರಾಧನ ಮನೆ ಕಟ್ಟುತ್ತಿದ್ದೀವಲ್ಲ ಹರಿಜನರಿಗೆಂದು.

ಶ್ರೀ ಕೆ.ಹೆಚ್. ರಂಗನಾಥ್:– ಗಂಭೀರವಾಗಿ ವಿಚಾರ ಮಾಡಿದರೆ ಆರಾಧನದ ಅವಶ್ಯಕತೆ ಇದೆಯೇ ? ಅದನ್ನು ಇದರ ಜೊತೆ ಬೆರೆಸುವುದು ಬೇಡ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಅಧ್ಯಕ್ಷರೇ ನಮ್ಮ ಹಿರಿಯ ಸದಸ್ಯರು ಒಂದು ಪ್ರಶ್ನೆ ಕೇಳಿದ್ದಾರೆ are we not perpetuating caste system I say 'No' ನಾವು ಜಾತಿ ಎಂದರೇನೆಂದು ಅರ್ಥ ಮಾಡಿಕೊಳ್ಳುತ್ತೇವೆ ? ಜಾತಿಯನ್ನು 2 ದೃಷ್ಟಿಯಿಂದ ನೋಡಬೇಕು. caste as an emotion, caste as an institution ನಾನು ಹೇಳುವಂತಹ ಮೀಸಲಾತಿಯಿಂದ ಒಂದು ಕೆಲಸ ಆಗಬಹುದು. Caste as emotion might continue to remain. ಮೀಸಲಾತಿ ನೀತಿಯ ಮೂಲ ಉದ್ದೇಶವೇ to destroy the caste and an institution. ಜಾತಿಯನ್ನು ಒಂದು ಸಂಸ್ಥೆಯಾಗಿ ನಾಶ ಮಾಡುವುದೇ ಮೀಸಲಾತಿ. ನೀತಿ. Therefore, the caste will not remain as institution; the caste might remian as an emotion. But that will have to be resolved or solved by a different programme altogether. The scientific education is the solution to remove the caste as emotion. ಈಗ ನನ್ನ ಮನಸ್ಸಿನಲ್ಲಿ ಜಾತಿ ಉಳಿದಿಲ್ಲ ಏಕೆಂದರೆ I have exposed myself to scientific education. Caste to me is a superstition.

ನಮ್ಮ ಮಕ್ಕಳಿಗೂ ಆ ಭಾವನೆ ಬರುವಂತಹ ಶಿಕ್ಷಣ ಕೊಡುವಂತಹ ಪಠ್ಯಪುಸ್ತಕಗಳನ್ನು ಮೊದಲು ಬದಲಾಯಿಸಬೇಕು, ರಾಮ ಸೀತೆ ಬಸವ ಅಲ್ಲ. ಅದು ಬೇರೆ ಸಮಸ್ಯೆ. ಇಷ್ಟೆಲ್ಲ ನಾವು ಬದಲಾವಣೆ ಮಾಡಿ ಮೀಸಲಾತಿ ಜಾರಿಗೆ ತರಬೇಕಾಗುತ್ತದೆ. Reservation according to the proportion of the caste population; creation of merit pool inside the caste quota; creation of poverty pool also inside the caste quota. ಅದು ಬಿಟ್ಟು ಈಗಿರುವ 50 ಪರ್ಸೆಂಟ್ ಮೆರಿಟ್‌ಪೂಲನ್ನು ಎಲ್ಲಿಯವರೆಗೂ ಮುಂದುವರೆಸುತ್ತೀರಿ ಅಲ್ಲಿಯವರೆಗೆ inadequacy of representation ಎಲ್ಲಾ ಜಾತಿಗಳಲ್ಲೂ ಇರುತ್ತವೆ. If you want to ensure adequacy of representation you will have to bring in this policy of reservation which ensures oppotunities according to the proportion of population of each caste.

ಶ್ರೀ ಭೀಮಣ್ಣ ಖಂಡ್ರೆ:– ಪ್ರತಿಯೊಂದು ಜಾತಿ ಸಂಖ್ಯೆ ಪ್ರಕಾರ ರೆಪ್ರೆಸೆಂಟೇಶನ್ ಕೊಡಬೇಕೆಂದು ಹೇಳಿದಾಗ ಇದರರ್ಥ ಕುಟುಂಬ ಯೋಜನೆಯ ರೂಲ್ಸ್ ಪಾಲಿಸಿ ಏನಿವೆ ಅದನ್ನು ಬದಲಾಯಿಸಬೇಕಾಗುತ್ತದೆ. ಕಾರಣ ಪ್ರತಿ ಜಾತಿ ಮನುಷ್ಯ ನನಗೆ ಹೆಚ್ಚು ರೆಪ್ರೆಸೆಂಟೇಶನ್ ಸಿಗಬೇಕಾದರೆ ಹೆಚ್ಚು ಸಂಖ್ಯೆಯಲ್ಲಿ ಬೆಳೆಸಬೇಕೆನ್ನುತ್ತಾನೆ. Is it fair in this country to adopt that on the caste system?

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ಇದೇ ಕಾರಣಕ್ಕೆ ನಾನು ಹೇಳಿದ್ದುದು ಇದು ದೀರ್ಘ ಚರ್ಚೆಗೆ ಒಳಪಡಬೇಕು. ಅದಕ್ಕೆ ಅವಸರ ಮಾಡಬೇಡಿ ಎಂದು. ಇಲ್ಲದಿದ್ದರೆ ನಾವು ಬಹಳ ತಪ್ಪು ಮಾಡುತ್ತೇವೆ. ಅದರ ಜೊತೆಗೆ ಮತ್ತೊಂದು ವಿಚಾರ ನಾವು ಚರ್ಚೆ ಮಾಡಬೇಕಾದ್ದುದು. ಚಿನ್ನಪ್ಪರೆಡ್ಡಿಯವರೇ ಅದನ್ನು ಸೂಚಿಸಿದ್ದಾರೆ. ಚಿನ್ನಪ್ಪರೆಡ್ಡಿ ವರದಿ ವಾಲ್ಯೂಂ 177ನೇ ಪೇಜಿನಲ್ಲಿ, ಮೆರಿಟ್‌ಪೂಲ್‌ಗೆ ಸಂಬಂಧಿಸಿದ್ದರಿಂದ ಇದನ್ನು ಹೇಳುತ್ತೇನೆ.

"To my shock, I discovered that in the State of Karnataka, there are 13024 Single Teacher Schools as against the total of 20830 Primary, Secondary and High Schools in the entire State. The State of Karnataka leads all other States and has the highest percentage of such schools. The number of pupils attending these 13024 Single Teacher Primary Schools in Karnataka is 8,34,885. The nacked fact therefore is that 8,34,885 pupils now in the Primary Schools in the Karnataka State are receiving next no education since it is humanly impossible for the Single Teacher to manage four different classes.

1.45 ಪಿ.ಎಂ.

ಇಂತಹ ಒಂದು ಸೆಸ್ಕೂಲ್‌ನಲ್ಲಿ ಈಜಿಕೊಂಡು ಟೀಚಿಂಗ್ ಪಡೆದು ಬಂದು ತಲುಪುತ್ತಾರಲ್ಲ ಅವನಿಗೇನಾದರೂ ಇಲ್ಲಿ ಅವಕಾಶ ಕಲ್ಪಿಸಿಕೊಟ್ಟಿದ್ದೀರಾ? ಹಿಂದೆ ವೈಟೇಜ್ ಎಂದು ಕರೆದು 15 ಪರ್ಸೆಂಟ್ ವೈಟೇಜ್ ಕೊಟ್ಟಿದ್ದರು. ಆ ವೈಟೇಜನ್ನು ಕನ್ನಡದಲ್ಲಿ ಕೃಪಾಂಕವೆಂದು ಭಾಷಾಂತರ ಮಾಡುತ್ತಾರೆ. ಇಂತಹ ಒಂದು ಸೆಸ್ಕೂಲಿನಲ್ಲಿ ಈಜಿಕೊಂಡು ಬಂದು ದಡಕ್ಕೆ ಬರುತ್ತಾನೆ ಅವನಿಗೆ ವೈಯಿಟೇಜ್ ಅಂದರೆ ಏನು ತೂ ಅಂತ. ಗೌರವಾಂಕವೆಂತಲೂ ತೂಕಾಂಕವೆಂತಲೋ, ಆ ಕಾರಣ ಅವರಿಗೆ ಗೌರವಾಂಕ ಕೊಡುವ ಕೆಲಸವನ್ನೇನಾದರೂ ಮಾಡಿದ್ದೀರಾ? ಅದನ್ನು ಮಾಡಬೇಕೋ

ಬೇಡವ್ವೋ ? ಸಿಂಗಲ್ ಟೀಚರ್ಸ್ ಸ್ಕೂಲಿಗೆ ಯಾರು ಹೋಣೆ ? ಆ ಕಾರಣದಿಂದ ಈ ಸರಕಾರಕ್ಕೆ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲವನ್ನೂ ಬಹಳ ದೀರ್ಘವಾಗಿ ಚರ್ಚೆ ಮಾಡಿ ಒಂದು ವೈಜ್ಞಾನಿಕವಾದ ಮೀಸಲಾತಿ ನೀತಿಯನ್ನು ಜಾರಿಗೆ ತರಬೇಕೇ ಹೊರತು ಅವಸರಕ್ಕಾಗಿ ಮಾಡಬಾರದು. ಚುನಾವಣೆಗೋಸ್ಕರ ಇದನ್ನು ತಂದಿದ್ದೀರಿ ಎಂದು ನಾನೇನು ನಿಮ್ಮ ಮೇಲೆ ಆರೋಪ ಮಾಡುವುದಿಲ್ಲ. ಇದು ಬಹಳ ಮುಖ್ಯವಾದ ಸಮಸ್ಯೆ. ನನ್ನ ವಿನಂತಿ ಏನೆಂದರೆ ಇದಕ್ಕೆ ಅವಸರವೇನು ಮಾಡುತ್ತಿದ್ದೀರಿ. ಈ ರೀತಿ ದಯವಿಟ್ಟು ಇದನ್ನು ಅಂಗೀಕಾರ ಮಾಡಬೇಡಿ. ತಾವು ಮಧ್ಯ ಪ್ರವೇಶ ಮಾಡಿ, ಎಲ್ಲಾ ಪಕ್ಷಗಳನ್ನು ಕರೆಯಿಸಿ ಒಂದು ಸರ್ವಾನುಮತದ ನಿರ್ಣಯ ಮಾಡೋಣ. ಆಯಾ ರಾಜ್ಯಗಳ ಮೀಸಲಾತಿ ಪ್ರಮಾಣವನ್ನು ತೀರ್ಮಾನ ಮಾಡುವಂತಹ ಪರಮಾಧಿಕಾರ ಆಯಾಯ ರಾಜ್ಯ ಸರಕಾರಗಳಿಗೆ ಇರಬೇಕು. ಮತ್ತು ಈ ವಿಚಾರವನ್ನು ಸರ್ವೋಚ್ಛ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗಿರಬೇಕು ಎಂದು ತಿದ್ದುಪಡಿಯನ್ನು ಕೇಂದ್ರ ಸರಕಾರ ಮಾಡಬೇಕೆಂದು ಶಿಫಾರಸ್ಸು ಮಾಡುವ ನಿರ್ಣಯವನ್ನು ನಾಳೆ ಮಾಡೋಣ. ಈ ಮಸೂದೆಯನ್ನು ಅಂಗೀಕಾರ ಮಾಡುವುದಕ್ಕೆ ತಾವು ಒತ್ತಾಯ ಮಾಡಬೇಡಿ ತಮ್ಮ ಉತ್ತರ ನೋಡಿ, ತಾವು ಇದನ್ನು ಮತಕ್ಕೆ ಹಾಕಿದರೆ ಆ ನಂತರ ನಾನು ಸಭಾತ್ಯಾಗ ಮಾಡುತ್ತೇನೆಂದು ಈಗಲೇ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ, ನಮಸ್ಕಾರ.

† ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಇವತ್ತಿನವರೆಗೆ ಈ ಮಸೂದೆ ಬಗ್ಗೆ ಸುದೀರ್ಘವಾದ ಚರ್ಚೆ ನಡೆದಿದೆ. ಅದರಲ್ಲಿಯೂ ಕೊನೆಯ ಚರ್ಚೆ ಅತ್ಯಂತ ಗಂಭೀರವಾಗಿತ್ತು. ವಿಚಾರಪೂರಿತವಾದಂತಹ ಚರ್ಚೆ ಕೂಡ ಆಗಿತ್ತು. ನಾನು ಅದಕ್ಕಾಗಿ ಪ್ರೊ. ನಂಜುಂಡಸ್ವಾಮಿಯವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಇಂತಹ ಚರ್ಚೆ ನಡೆಯಬೇಕು, ಕಾಲಾವಕಾಶವೂ ಬೇಕು. ಆದರೆ ನಮ್ಮ ಮುಂದೆ ಇರತಕ್ಕಂತಹ ವಿಧೇಯಕ ಎಷ್ಟು ಸಮಂಜಸವಾಗಿದೆ, ಎಷ್ಟು ಅಂಗೀಕಾರಕ್ಕೆ ಅರ್ಹವಾಗಿದೆ.

ಅನ್ನತಕ್ಕಂತಹ ವಿಚಾರದಲ್ಲಿ ಚರ್ಚೆಯಲ್ಲಿ ಭಾಗವಹಿಸಿರತಕ್ಕಂತಹ ಬಹಳ ಜನ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಲಿಲ್ಲ. ಆದರೆ ಚರ್ಚೆಯನ್ನು ಪ್ರಾರಂಭ ಮಾಡಿರತಕ್ಕಂತಹ ಮಾನ್ಯ ಸದಸ್ಯರಾದಂತಹ ಬಂಗಾರಪ್ಪನವರು ಹೇಳಿದ್ದನ್ನು ನಾನು ಕೇಳಿ ಬಿಟ್ಟೆ. ನನಗೆ ಕಾಡಿನಲ್ಲಿ ನಿಂತಿದ್ದಾಗ ಮಳೆ ಬಂದ ಹಾಗಾಯಿತು. ಅವರು ಏನು ಹೇಳಿದ್ದರೋ ಗೊತ್ತಾಗಲಿಲ್ಲ. ಈ ವಿಧೇಯಕ ಈ ಸದನದಲ್ಲಿ ಮಂಡಿಸಿದ ಮೇಲೆ ಆ ವಿಧೇಯಕದ ಮೇಲೆ ಚರ್ಚೆಯಾಗಬೇಕು ಎಂದು ನಾನು ತಿಳಿದುಕೊಂಡೆ ಆ ಚರ್ಚೆಯಾಗತಕ್ಕಂತಹ ಕಾಲದಲ್ಲಿ ಆ ವಿಧೇಯಕದ ಹಿಂದೆ ಇದ್ದಂತಹ ಸಿದ್ಧಾಂತಗಳು ತತ್ವಗಳು ಕಾರ್ಯಾಚರಣೆಗಳು ಪರಿಣಾಮಗಳು ಇದರ ಬಗ್ಗೆ ವಿವರವಾದ ಚರ್ಚೆ ಮತ್ತು ಸಲಹೆ ನೀಡಿದರೆ ತುಂಬಾ ಪ್ರಯೋಜನವಾಗುತ್ತದೆ. ಆದರೆ ಯಾರೂ ವಿಧೇಯಕವನ್ನು ವಿರೋಧ ಮಾಡಲಿಲ್ಲ. ವಿರೋಧ ಮಾಡದೇ ಇದ್ದಾಗ ಇದಕ್ಕೆ ಎಲ್ಲರ ಸ್ವಾಗತ ಇದೆ ಎಂದೇ ನಾವು ತಿಳಿದುಕೊಂಡೆವು. ಆದರೆ ದುರದೃಷ್ಟವಶಾತ್ ನಮ್ಮ ವಿರೋಧ ಪಕ್ಷದವರು ಎಲ್ಲರೂ ಅಲ್ಲ, ಕೆಲವರು ಸದನದಿಂದ ದೂರ ಇದ್ದಾರೆ. ಅವರ ಗೈರುಹಾಜರಿ ಶಾಸ್ತ್ರಕ್ಕೆ ಪಲಾಯನದ ಒಂದು ಸಂಕೇತವೆಂದು ನಾನು ಹೇಳಬಯಸುತ್ತೇನೆ. ಇಂತಹ ವಿಚಾರದಲ್ಲಿ ಸದನದಿಂದ ದೂರ ಇರಬೇಕಾದ ಅಗತ್ಯ ಇಲ್ಲ. ಮಾನ್ಯ ವಾಟಾಳ್‌ರವರು ಹೇಳಿದ ಒಂದು ಮಾತನ್ನು ನಾನು ಒಪ್ಪುತ್ತೇನೆ. ಈ ಸದನ ಅತ್ಯಂತ ಗಂಭೀರವಾದಂತಹ, ಮಹತ್ವವಾದಂತಹ ಸದನ ಮತ್ತು ತಮ್ಮ ಎಲ್ಲಾ ಅನಿಸಿಕೆಗಳನ್ನು ಮತ್ತು ವಿಚಾರಗಳನ್ನು ಸಭೆಯ ಮುಂದಿಡತಕ್ಕಂತಹ ಅಧಿಕಾರವನ್ನು ಜನ ಕೊಟ್ಟಿದ್ದಾರೆ. ಅದನ್ನು ಉಪಯೋಗಿಸಿಕೊಳ್ಳತಕ್ಕಂತಹ ಸಂದರ್ಭ ಇದು. ತಮ್ಮ ಅಭಿಪ್ರಾಯ ಕೊಡತಕ್ಕಂತಹ ಸಂದರ್ಭದಲ್ಲಿ ನುಣುಚಿಕೊಳ್ಳತಕ್ಕಂತಹ ಪ್ರಯತ್ನ ಮಾಡುವುದರಿಂದ ಜನಕ್ಕೂ ವಂಚನೆಯಾಗುತ್ತದೆ ಮತ್ತು ಈ ಸಾಮಾಜಿಕ ವಂಚನೆಗೆ ಒಳಗಾಗಿರತಕ್ಕಂತಹ ವರ್ಗಕ್ಕೂ ವಂಚನೆಯಾಗುತ್ತದೆ. ಆ ದೃಷ್ಟಿಯಿಂದ ಇಷ್ಟು

ಮಾತ್ರ ಅವರ ಗೈರುಹಾಜರಿ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಈ ಚರ್ಚೆ ಕಾಲದಲ್ಲಿ ಒಂದು ವಿಚಿತ್ರವಾದಂಥ ವಾದ ಬಂತು. ಚಿನ್ನಪ್ಪ ರೆಡ್ಡಿಯವರ ವರದಿಯನ್ನು ನಾವು ವಿಚ್ಛಿದ್ರಗೊಳಿಸಿದ್ದೇವೆ ಮತ್ತು ವಿಕೃತಗೊಳಿಸಿದ್ದೇವೆ. ರಾಜಕೀಯಕ್ಕೆ ಬಳಸಿಕೊಂಡಿದ್ದೇವೆಂಬ ವಾದ ವಿಶೇಷವಾಗಿ ಪ್ರಸ್ತಾಪಕ್ಕೆ ಬಂತು. ನಾವು ಅದನ್ನು ವಿಕೃತಗೊಳಿಸಲಿಲ್ಲ. ಇದರ ಬಗ್ಗೆ ವಿವರಿಸಿ ಹೇಳಿದರೆ ವಿಕೃತಗೊಳಿಸಿದ್ದೇವೆಂದು ಹೇಳತಕ್ಕಂತಹ ಮಾನ್ಯ ಸದಸ್ಯರಿಗೆ ಅರ್ಥವಾಗುತ್ತದೆ. ಚಿನ್ನಪ್ಪ ರೆಡ್ಡಿ ವರದಿಯಲ್ಲಿ ವರ್ಗೀಕರಣ ಮಾಡಿದ್ದಾರೆ: ಮೊದಲನೆಯ ವರ್ಗಕ್ಕೆ ಸೇರಿದಂತಹ ಕೆಲವು ಜಾತಿಗಳನ್ನು ಸೇರಿಸಿದ್ದಾರೆ.

ಅಜಾತಿಗಳನ್ನು ಸೇರಿಸತಕ್ಕಂತಹ ಸಂದರ್ಭದಲ್ಲಿ ಬುಡಕಟ್ಟು ಜನಾಂಗದ ಸ್ವಭಾವವನ್ನು ಹೊಂದಿರತಕ್ಕಂತಹ ಕೆಲವು ಜಾತಿಗಳನ್ನು ಸೇರಿಸಿ ಮೊದಲನೇ ವರ್ಗವಾಗಿ ವರ್ಗೀಕರಿಸಿದ್ದಾರೆ. ಆ ವರ್ಗದ ಜನಸಂಖ್ಯೆಯು ಸಮಾನಕ್ಕೆ ಸರಿಯಾದ ಶೇಕಡ 5ರಷ್ಟನ್ನು ಅವರು ಮೀಸಲಾತಿ ಒದಗಿಸಿದ್ದಾರೆ. ಎರಡನೇ ವರ್ಗಕ್ಕೆ ಆ ವರ್ಗಕ್ಕಿಂತ ಸ್ವಲ್ಪ ಮೇಲೆ ಕಾಣುವಂತಹವರನ್ನು ಸಾಮಾಜಿಕವಾಗಿ ಹಿಂದುಳಿದವರೆಂದು ಗುರುತಿಸಿ ಎರಡನೇ ವರ್ಗವನ್ನಾಗಿ ಮಾಡಿ ಅವರಿಗೆ ಶೇಕಡ 28ರಷ್ಟನ್ನು ಮೀಸಲಾತಿ ಕೊಟ್ಟು ಅಂದರೆ ಆ ಜನಸಂಖ್ಯೆಯ ಹೆಚ್ಚೂ ಕಡಿಮೆ Nearer to their Population ಮೀಸಲಾತಿಯನ್ನು ಒದಗಿಸಿದ್ದಾರೆ. 3ನೇ ವರ್ಗೀಕರಣದಲ್ಲಿ ಕೃಷಿ ಕಾರ್ಮಿಕರು, ಕಾರ್ಖಾನೆಯಲ್ಲಿ, ರೈಲ್ವೆಯಲ್ಲಿ ಕೆಲಸ ಮಾಡತಕ್ಕಂತಹವರು ರಿಕ್ಷಾ ಕೆಲಸ ಮಾಡತಕ್ಕಂತಹವರು ಈ ರೀತಿ ಶ್ರಮಜೀವಿ ವರ್ಗವನ್ನು ಒಂದು ಗುಂಪನ್ನಾಗಿ ಮಾಡಿದ್ದಾರೆ. ಇಲ್ಲಿ ಜಾತಿ ಇಲ್ಲ. ಉದ್ಯೋಗದಲ್ಲಿ ತೊಡಗಿರುವ ಶ್ರಮಜೀವಿಗಳನ್ನು ಗುರುತಿಸಿ ಅವರಿಗೆ ಶೇಕಡಾ 5ರಷ್ಟು ಮೀಸಲಾತಿ ಒದಗಿಸಿದ್ದಾರೆ. ಹೀಗೆ ಒಟ್ಟು ಶೇಕಡಾ 38ರಷ್ಟು ಮೀಸಲಾತಿ ಮಾಡಿದ್ದಾರೆ. ಮಾನ್ಯ ಪ್ರೊಫೆಸರ್ ಅವರು ಹೇಳುತ್ತಿದ್ದರು ಇದನ್ನು ಏಕೆ ಕಡಿಮೆ ಮಾಡಿದಿರಿ ಎಂದು. ಅದರ ಬಗ್ಗೆ ಆಮೇಲೆ ಹೇಳುತ್ತೇನೆ. ಏಕೆ ಕಡಿಮೆ ಮಾಡಿದ್ದೇವೆಂಬ ಬಗ್ಗೆ ನಂತರ ಹೇಳುತ್ತೇನೆ. ಕೊನೆಯ ಮೂರನೆಯ ವರ್ಗವನ್ನು ತೆಗೆದಿರುವ ಕಾರಣಕ್ಕಾಗಿ ಕಡಿಮೆಯಾಗಿದೆ. ಏಕೆ ತೆಗೆದಿದ್ದೇವೆ ಎಂಬ ಬಗ್ಗೆ ಕಾರಣ ಹೇಳುತ್ತೇನೆ. 28–10–38 ಕೊನೆಯ ವರ್ಗವನ್ನು ಬಿಟ್ಟು ಅಂದರೆ ಅದನ್ನು ಜಾತಿಯ ಆಧಾರದ ಮೇಲೆ ಮಾಡಿದ್ದಲ್ಲ; ಅದನ್ನು ಬಿಟ್ಟು ಬಿಡೋಣ. ಇನ್ನು ಉಳಿದದ್ದು 33 ಶೇಕಡವನ್ನು ಚಿನ್ನಪ್ಪರೆಡ್ಡಿ ವರದಿಯಲ್ಲಿ ಮೀಸಲಾತಿ ಸೂಚನೆ ಮಾಡಿದ್ದಾರೆ. ಏಪ್ರಿಲ್ ತಿಂಗಳಲ್ಲಿ ಶೇಕಡಾ 73 ಎಂದು ಮಾಡಿದ್ದೆವು. ಅದನ್ನು ಸ್ವಲ್ಪ ಬದಲಾವಣೆ ಮಾಡಿ ಜುಲೈ ತಿಂಗಳಲ್ಲಿ 80 ರಷ್ಟಕ್ಕೆ ಬದಲಾವಣೆ ಮಾಡಿದೆವು. ತಾವೇನು ತಮ್ಮ ಕಲ್ಪನಾ ಲೋಕದಲ್ಲಿ ಚರ್ಚೆ ಮಾಡತಕ್ಕಂತಹ ಸಂದರ್ಭದಲ್ಲಿ ಬಹಳ ತಿರುಚಿದ್ದೀರಿ, ಘಳಿಗೆಗೊಂದು ತೀರ್ಮಾನ ಮಾಡಿದ್ದೀರಿ ಎಂದು ಹೇಳಿದ್ದೀರಲ್ಲ, ಅದು ಸರಿಯಲ್ಲ. ಏಪ್ರಿಲ್‌ನಲ್ಲಿ ಮಾಡಿರತಕ್ಕಂತಹ ತೀರ್ಮಾನದಲ್ಲಿ ಮೂಲಭೂತ ಬದಲಾವಣೆಯನ್ನು ನಾವು ಮಾಡಿಲ್ಲ. ಕೇವಲ ಸಣ್ಣ–ಪುಟ್ಟ ಬದಲಾವಣೆಗಳನ್ನು ಜುಲೈ ತಿಂಗಳಲ್ಲಿ ತೀರ್ಮಾನ ಕೈಗೊಳ್ಳುವ ಸಮಯದಲ್ಲಿ ಮಾಡಿದ್ದೇವೆ. ಈಗ 73 ಅನ್ನು ಮಾಡಬೇಕೆಂದು ಮಾಡಿದ್ದೇವೆ. 73ಅನ್ನು ಮಾಡುವಾಗ ಮೊದಲನೇ ವರ್ಗಕ್ಕೆ ಶೇಕಡ 7ರಷ್ಟು ಮೀಸಲಾತಿ ಮಾಡಿದ್ದೇವೆ. ಹಿಂದೆ 5 ಅನ್ನು ಮಾಡುವ ಬದಲಾಗಿ ಮಾಡುವುದಕ್ಕೆ ಕಾರಣವೇನಾಯಿತು ಎಂದರೆ, ಹಿಂದೆ 86ನೇ ಇಸವಿಯಲ್ಲಿ ಹೊರಡಿಸಿದಂತಹ ಆಜ್ಞೆಯಲ್ಲಿ 'ಎ' ಗುಂಪಿಗೆ ಸೇರಿದಂತಹ ಕೆಲವು ಜಾತಿಗಳು ಇದ್ದವು. ಉದಾಹರಣೆಗೆ, ಹೇಳುವುದಾದರೆ ಗೊಲ್ಲರ ಜಾತಿ, ಅದಕ್ಕೆ ಸಂಬಂಧಪಟ್ಟ ಎಲ್ಲಾ ಜಾತಿಗಳು ಸೇರಿದರೆ ಶೇಕಡ 2 ಪ್ರಮಾಣದಷ್ಟು ಆಗುತ್ತದೆ. ಅವೆಲ್ಲ 'ಎ' ಗುಂಪಿನಲ್ಲಿದ್ದವು. ಆ 'ಎ' ಗುಂಪಿನಲ್ಲಿ ಇದ್ದಂತಹ ಕಾಲದಲ್ಲಿ ಅವರಿಗೆ ವಿಶೇಷವಾದ ಸವಲತ್ತುಗಳು ಇತ್ತು. ಅವರಿಗೆ ಆದಾಯ ಮಿತಿ ಇರಲಿಲ್ಲ. ವಿದ್ಯಾಭ್ಯಾಸಕ್ಕೆ ಸ್ಕಾಲರ್‌ಶಿಪ್ ಕೊಡುವುದು ಇತ್ತು ಮತ್ತು ಆಶ್ರಮಶಾಲೆಗಳನ್ನು ಮಾಡಬಹುದಿತ್ತು: ಹೀಗೆ ವಿಶೇಷವಾದ ಸವಲತ್ತನ್ನು ಆಗ ಕೊಟ್ಟರು. ಅಂತಹ ಜನರನ್ನು ಅವರು ಸ್ವಲ್ಪ ಬುಡಕಟ್ಟಿಗೆ

ಸೇರಿದಂತಹ ವರ್ಗಕ್ಕೆ ಸೇರಿದಂತಹ ಜನರಾಗಿದ್ದರು. ಅವರನ್ನು ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಈ ನಮ್ಮ ಎರಡನೇ ಗುಂಪಿನಲ್ಲಿ ಸೇರಿಸಿದರು. ನಾವು ಏಪ್ರಿಲ್ ತಿಂಗಳಲ್ಲಿ ಜಾರಿಗೆ ಕೊಡತಕ್ಕಂತಹ ಕಾಲದಲ್ಲಿ ಚಿನ್ನಪ್ಪ ರೆಡ್ಡಿ ವರದಿಯಲ್ಲಿ 1ನೇ ಗುಂಪಿನಲ್ಲಿ ಸೇರಿದಂತಹ ಎಲ್ಲಾ ಜಾತಿಯನ್ನು ಅಲ್ಲೇ ಇಟ್ಟು, ಶೇಕಡ 5ರಷ್ಟನ್ನು 2ನೇ ಗುಂಪಿನಲ್ಲಿದ್ದಂತಹ ಜಾತಿಯನ್ನು ಅಲ್ಲೇ ಇಟ್ಟು ಅವರಿಗೆ 28 ಅನ್ನೇ ಕೊಟ್ಟಿದ್ದೇವೆ. ಆ ತೀರ್ಮಾನವಾದ ನಂತರ ಸರಕಾರದ ಆಜ್ಞೆ ಹೊರಟ ನಂತರ ಹಿಂದೆ ಸವಲತ್ತನ್ನು ಪಡೆಯುತ್ತಿದ್ದಂತಹ ಜನರು ಪ್ರದರ್ಶನ ಮಾಡಿದರು. ನಮಗೆ ಅನ್ಯಾಯವಾಗಿದೆ. ಸರಕಾರಕ್ಕೆ ತಿಳಿಸಿದರು ನಮ್ಮ ಪರಿಸ್ಥಿತಿ ಹೀಗೆ ಇದೆ ಸಮಾಜಿಕ ಪರಿಸ್ಥಿತಿ ಹೀಗಿದೆ ಎನ್ನುವುದನ್ನು ತಿಳಿಸಿದರು. ಆಗ ಅವರನ್ನು 1ನೇ ವರ್ಗದಿಂದ 2ನೇ ವರ್ಗಕ್ಕೆ ಹಾಕುವುದರಿಂದ ಸ್ವಲ್ಪ ಅವರಿಗೆ ಅನ್ಯಾಯಘಾಗುತ್ತದೆ. ಕೇವಲ 86 ರಿಂದ ಇಷ್ಟರೊಳಗೆ ಅವರು ಸಾಮಾಜಿಕವಾಗಿ ಅಭಿವೃದ್ಧಿ ಸುಧಾರಣೆಯಾಗಲಿಲ್ಲ ಅವರನ್ನು 1ನೇ ವರ್ಗದಲ್ಲೇ ಇಡುವುದು ಸೂಕ್ತವೆಂದು ಸರಕಾರಕ್ಕೆ ಅನ್ನಿಸಿತು. ಜೊತೆಗೆ ಆ 1ನೇ ವರ್ಗದಲ್ಲಿದ್ದಂತಹ ಜನರು ಯಾರ್‍ಯಾರು 2ನೇ ವರ್ಗಕ್ಕೆ ತಂದಿದ್ದರೋ ಅವರನ್ನೆಲ್ಲಾ ಅಲ್ಲಿಯೇ ಇಡುವುದು ಸೂಕ್ತವೆಂಬ ಕಾರಣಕ್ಕಾಗಿ ನಾವು ಎರಡನೇ ವರ್ಗದಲ್ಲಿದ್ದಂತಹ ಆ ಗೊಲ್ಲರು ಮತ್ತು ಇತರೇ ಸಣ್ಣ ಸಣ್ಣ ಸಮಾಜದ ಅವಪ್ರಜಾ ಸಂಖ್ಯೆ ಎಲ್ಲ ಸೇರಿಸಿದರೆ ಸುಮಾರು 2ರಷ್ಟು ಆಗಬಹುದೆಂದು ಗುರುತಿಸಿಕೊಂಡು ಅವರನ್ನು ಮೊದಲನೇ ವರ್ಗಕ್ಕೆ ತಂದ ಕಾರಣಕ್ಕಾಗಿ ಅವರ ಪ್ರಜಾ ಸಂಖ್ಯೆ ಜಾಸ್ತಿಯೂ ಆಯಿತು. ಆದ್ದರಿಂದ 7ಅನ್ನು ಮಾತ್ರ ಇಟ್ಟಿದ್ದೇವೆ. ಇವರು 2ನೇ ವರ್ಗದಿಂದ 1ನೇ ವರ್ಗಕ್ಕೆ ನಾವು ತಳ್ಳಿದ್ದರಿಂದ ಹೊಸದಾಗಿ ನಾವು ಯಾವ ಜಾತಿಯನ್ನೂ ಸೇರಿಸಲಿಲ್ಲ. ಚಿನ್ನಪ್ಪ ರೆಡ್ಡಿಯ ವರದಿಯಲ್ಲಿ ಗುರುತಿಸಿಲ್ಲದೇ ಇರತಕ್ಕಂತಹ ಸಮಾಜದವರನ್ನು ಜಾತಿಯವರನ್ನು ನಾವು ವರ್ಗೀಕರಿಸಲಿಲ್ಲ. ಅಲ್ಲಿದ್ದವರನ್ನೇ ಸ್ವಲ್ಪ ಹೊಂದಾಣಿಕೆ ಮಾಡತಕ್ಕಂತಹ ಪ್ರಯತ್ನ ಮಾಡಿರುವ ಕಾರಣಕ್ಕಾಗಿ ನಾವು ಮೊದಲನೇ ಗುಂಪಿಗೆ ಸೇರಬೇಕಾಯಿತು. ಮೊದಲು ಏಪ್ರಿಲ್ ತಿಂಗಳಲ್ಲಿ ಶೇಕಡ 5 ರಷ್ಟು ಮೀಸಲಾತಿ ಮಾಡತಕ್ಕಂತಹ ತೀರ್ಮಾನ ಬದಲಾಯಿಸಿ 7ಅನ್ನು ಮಾಡುವುದಕ್ಕೆ ಕಾರಣ ಇವತ್ತು. ಈ ವರ್ಗದ ಗೊಲ್ಲರು ಮತ್ತು ಇತರೆ ಜಾತಿಯವರನ್ನು 1ನೇ ವರ್ಗಕ್ಕೆ ತಂದಿರುವ ಕಾರಣಕ್ಕಾಗಿ. ಇನ್ನು 26 ಉಳಿಯುತ್ತದೆ. 26ರಲ್ಲಿ ಯಾರ್‍ಯಾರು ಸೇರಿದ್ದರು ಎಂದರೆ ನಮ್ಮ ಅಲ್ಪಸಂಖ್ಯಾತರೂ ಸೇರಿದ್ದರು. 2ನೇ ವರ್ಗದಲ್ಲಿ ಅಲ್ಪಸಂಖ್ಯಾತರೂ ಇದ್ದರು.

ಶ್ರೀ ವೈ.ಕೆ. ರಾಮಯ್ಯ:– ಚಿನ್ನಪ್ಪ ರೆಡ್ಡಿ ಆಯೋಗದಲ್ಲಿ ಹಿಂದುಳಿದವರ ವರ್ಗಕ್ಕೆ ಮೀಸಲಾತಿ ಕೊಡಲಿಕ್ಕೆ ನಿಗದಿ ಮಾಡಿದಂತಹ ಜನಸಂಖ್ಯೆ ಎಷ್ಟು. ಜಾತಿ ಹೆಸರು ಹೇಳುವುದಿಲ್ಲ. ಇವತ್ತು ಈ ಮೀಸಲಾತಿ ಸವಲತ್ತಿಗೆ ಒಳಪಡುವ ಈ ಕರ್ನಾಟಕ ರಾಜ್ಯದ ಜನಸಂಖ್ಯೆ ಎಷ್ಟು ? ಅದನ್ನು ಹೇಳಿದರೆ ನಾನು ತಮಗೆ ತುಂಬಾ ಕೃತಜ್ಞನಾಗುತ್ತೇನೆ. ಯಾವ ಜಾತಿಯನ್ನಾದರೂ ಸೇರಿಸಿ ಯಾವುದಾದರೂ ಬಿಡಿ. ಯಾರ್‍ಯಾರನ್ನು ಸೇರಿಸಿದ್ದೀರಿ ಎಂದು ತಮಗೆ ಗೊತ್ತಿದೆ ಏತಕ್ಕೆ ಸೇರಿಸಿದಿರಿ ಎನ್ನುವುದೂ ಗೊತ್ತಿದೆ. ನೀವು ಸೇರಿಸಲಿಕ್ಕೆ ನಮ್ಮರು ಅಡ್ಡಿ ಇಲ್ಲ. ಬದಲಾವಣೆ ಮಾಡಲಿಕ್ಕೆ ನಿಮಗೆ ಅಧಿಕಾರವಿಲ್ಲವೆಂದು ಹೇಳುವಷ್ಟು ದಡ್ಡರು ನಾವಲ್ಲ, ಅವಿವೇಕಿಗಳು ನಾವಲ್ಲ. ಆದರೆ ಈ ಬದಲಾವಣೆಯನ್ನು ತಂದಂತಹ ಸಂದರ್ಭ ನಿಮ್ಮ ಮೇಲೆ ಬಂದಂತಹ ಒತ್ತಡ ಇದೆಯಲ್ಲ, ಇದನ್ನು ನೋಡಿ ಇದರ ಅರಿವಿರುವುದರಿಂದ ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಸಾಮಾಜಿಕ ನ್ಯಾಯ ಕೊಡುವಂತಹ ಬದ್ಧತೆಗೆ ಬದ್ಧರಾಗಿ ನೀವು ತೀರ್ಮಾನ ತೆಗೆದುಕೊಳ್ಳಲಿಲ್ಲ. ಒತ್ತಡಕ್ಕೆ ಯಾರನ್ನೋ ಮೆಚ್ಚಿಸಲಿಕ್ಕೆ ಈ ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ಅಷ್ಟೇ ಹೇಳುವುದು. ಈ ಹಂತದಲ್ಲಿ ಹೇಳಿ. ಚಿನ್ನಪ್ಪ ರೆಡ್ಡಿ ಆಯೋಗದಲ್ಲಿ ಕೊಟ್ಟಿರುವಂಥಾದ್ದರಲ್ಲಿ ಹಿಂದುಳಿದವರು ಎಷ್ಟು ಜನಸಂಖ್ಯೆ ಇದ್ದರು ಈಗ ತಾವು ಕೊಟ್ಟಿದ್ದೀರಲ್ಲ ಯಾವ್ಯಾವ ಜಾತಿ ಸೇರಿಸಿದ್ದೀರೋ ಈಗಿನ ಜನಸಂಖ್ಯೆ ಎಷ್ಟು ಇದೆ ಅದನ್ನು ದಯಮಾಡಿ ತಿಳಿಸಿ.

ಶ್ರೀ ಕಾಗೋಡು ತಿಮ್ಮಪ್ಪ:– ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಯಾವ ಪ್ರಮಾಣದ ಮೀಸಲಾತಿ ಇಟ್ಟು

ಸೇರಿದಂತಹ ವರ್ಗಕ್ಕೆ ಸೇರಿದಂತಹ ಜನರಾಗಿದ್ದರು. ಅವರನ್ನು ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಈ ನಮ್ಮ ಎರಡನೇ ಗುಂಪಿನಲ್ಲಿ ಸೇರಿಸಿದರು. ನಾವು ಏಪ್ರಿಲ್ ತಿಂಗಳಲ್ಲಿ ಜಾರಿಗೆ ಕೊಡತಕ್ಕಂತಹ ಕಾಲದಲ್ಲಿ ಚಿನ್ನಪ್ಪ ರೆಡ್ಡಿ ವರದಿಯಲ್ಲಿ 1ನೇ ಗುಂಪಿನಲ್ಲಿ ಸೇರಿದಂತಹ ಎಲ್ಲಾ ಜಾತಿಯನ್ನು ಅಲ್ಲೇ ಇಟ್ಟು, ಶೇಕಡ 5ರಷ್ಟನ್ನು 2ನೇ ಗುಂಪಿನಲ್ಲಿದ್ದಂತಹ ಜಾತಿಯನ್ನು ಅಲ್ಲೇ ಇಟ್ಟು ಅವರಿಗೆ 28 ಅನ್ನೇ ಕೊಟ್ಟಿದ್ದೇವೆ. ಆ ತೀರ್ಮಾನವಾದ ನಂತರ ಸರಕಾರದ ಆಜ್ಞೆ ಹೊರಟ ನಂತರ ಹಿಂದೆ ಸವಲತ್ತನ್ನು ಪಡೆಯುತ್ತಿದ್ದಂತಹ ಜನರು ಪ್ರದರ್ಶನ ಮಾಡಿದರು. ನಮಗೆ ಅನ್ಯಾಯವಾಗಿದೆ. ಸರಕಾರಕ್ಕೆ ತಿಳಿಸಿದರು ನಮ್ಮ ಪರಿಸ್ಥಿತಿ ಹೀಗೆ ಇದೆ ಸಮಾಜಿಕ ಪರಿಸ್ಥಿತಿ ಹೀಗಿದೆ ಎನ್ನುವುದನ್ನು ತಿಳಿಸಿದರು. ಆಗ ಅವರನ್ನು 1ನೇ ವರ್ಗದಿಂದ 2ನೇ ವರ್ಗಕ್ಕೆ ಹಾಕುವುದರಿಂದ ಸ್ವಲ್ಪ ಅವರಿಗೆ ಅನ್ಯಾಯಘಾಗುತ್ತದೆ. ಕೇವಲ 86 ರಿಂದ ಇಷ್ಟರೊಳಗೆ ಅವರು ಸಾಮಾಜಿಕವಾಗಿ ಅಭಿವೃದ್ಧಿ ಸುಧಾರಣೆಯಾಗಲಿಲ್ಲ ಅವರನ್ನು 1ನೇ ವರ್ಗದಲ್ಲೇ ಇಡುವುದು ಸೂಕ್ತವೆಂದು ಸರಕಾರಕ್ಕೆ ಅನ್ನಿಸಿತು. ಜೊತೆಗೆ ಆ 1ನೇ ವರ್ಗದಲ್ಲಿದ್ದಂತಹ ಜನರು ಯಾರ್ಯಾರು 2ನೇ ವರ್ಗಕ್ಕೆ ತಂದಿದ್ದರೋ ಅವರನ್ನೆಲ್ಲಾ ಅಲ್ಲಿಯೇ ಇಡುವುದು ಸೂಕ್ತವೆಂಬ ಕಾರಣಕ್ಕಾಗಿ ನಾವು ಎರಡನೇ ವರ್ಗದಲ್ಲಿದ್ದಂತಹ ಆ ಗೊಲ್ಲರು ಮತ್ತು ಇತರೇ ಸಣ್ಣ ಸಣ್ಣ ಸಮಾಜದ ಅವಪ್ರಜಾ ಸಂಖ್ಯೆ ಎಲ್ಲ ಸೇರಿಸಿದರೆ ಸುಮಾರು 2ರಷ್ಟು ಆಗಬಹುದೆಂದು ಗುರುತಿಸಿಕೊಂಡು ಅವರನ್ನು ಮೊದಲನೇ ವರ್ಗಕ್ಕೆ ತಂದ ಕಾರಣಕ್ಕಾಗಿ ಅವರ ಪ್ರಜಾ ಸಂಖ್ಯೆ ಜಾಸ್ತಿಯೂ ಆಯಿತು. ಆದ್ದರಿಂದ 7ಅನ್ನು ಮಾತ್ರ ಇಟ್ಟಿದ್ದೇವೆ. ಇವರು 2ನೇ ವರ್ಗದಿಂದ 1ನೇ ವರ್ಗಕ್ಕೆ ನಾವು ತಳ್ಳಿದ್ದರಿಂದ ಹೊಸದಾಗಿ ನಾವು ಯಾವ ಜಾತಿಯನ್ನೂ ಸೇರಿಸಲಿಲ್ಲ. ಚಿನ್ನಪ್ಪ ರೆಡ್ಡಿಯ ವರದಿಯಲ್ಲಿ ಗುರುತಿಸಿಲ್ಲದೇ ಇರತಕ್ಕಂತಹ ಸಮಾಜದವರನ್ನು ಜಾತಿಯವರನ್ನು ನಾವು ವರ್ಗೀಕರಿಸಲಿಲ್ಲ. ಅಲ್ಲಿದ್ದವರನ್ನೇ ಸ್ವಲ್ಪ ಹೊಂದಾಣಿಕೆ ಮಾಡತಕ್ಕಂತಹ ಪ್ರಯತ್ನ ಮಾಡಿರುವ ಕಾರಣಕ್ಕಾಗಿ ನಾವು ಮೊದಲನೇ ಗುಂಪಿಗೆ ಸೇರಬೇಕಾಯಿತು. ಮೊದಲು ಏಪ್ರಿಲ್ ತಿಂಗಳಲ್ಲಿ ಶೇಕಡ 5 ರಷ್ಟು ಮೀಸಲಾತಿ ಮಾಡತಕ್ಕಂತಹ ತೀರ್ಮಾನ ಬದಲಾಯಿಸಿ 7ಅನ್ನು ಮಾಡುವುದಕ್ಕೆ ಕಾರಣ ಇವತ್ತು. ಈ ವರ್ಗದ ಗೊಲ್ಲರು ಮತ್ತು ಇತರೆ ಜಾತಿಯವರನ್ನು 1ನೇ ವರ್ಗಕ್ಕೆ ತಂದಿರುವ ಕಾರಣಕ್ಕಾಗಿ. ಇನ್ನು 26 ಉಳಿಯುತ್ತದೆ. 26ರಲ್ಲಿ ಯಾರ್ಯಾರು ಸೇರಿದ್ದರು ಎಂದರೆ ನಮ್ಮ ಅಲ್ಪಸಂಖ್ಯಾತರೂ ಸೇರಿದ್ದರು. 2ನೇ ವರ್ಗದಲ್ಲಿ ಅಲ್ಪಸಂಖ್ಯಾತರೂ ಇದ್ದರು.

ಶ್ರೀ ವೈ.ಕೆ. ರಾಮಯ್ಯ:– ಚಿನ್ನಪ್ಪ ರೆಡ್ಡಿ ಆಯೋಗದಲ್ಲಿ ಹಿಂದುಳಿದವರ ವರ್ಗಕ್ಕೆ ಮೀಸಲಾತಿ ಕೊಡಲಿಕ್ಕೆ ನಿಗದಿ ಮಾಡಿದಂತಹ ಜನಸಂಖ್ಯೆ ಎಷ್ಟು. ಜಾತಿ ಹೆಸರು ಹೇಳುವುದಿಲ್ಲ. ಇವತ್ತು ಈ ಮೀಸಲಾತಿ ಸವಲತ್ತಿಗೆ ಒಳಪಡುವ ಈ ಕರ್ನಾಟಕ ರಾಜ್ಯದ ಜನಸಂಖ್ಯೆ ಎಷ್ಟು ? ಅದನ್ನು ಹೇಳಿದರೆ ನಾನು ತಮಗೆ ತುಂಬಾ ಕೃತಜ್ಞನಾಗುತ್ತೇನೆ. ಯಾವ ಜಾತಿಯನ್ನಾದರೂ ಸೇರಿಸಿ ಯಾವುದಾದರೂ ಬಿಡಿ. ಯಾರ್ಯಾರನ್ನು ಸೇರಿಸಿದ್ದೀರಿ ಎಂದು ತಮಗೆ ಗೊತ್ತಿದೆ ಏತಕ್ಕೆ ಸೇರಿಸಿದಿರಿ ಎನ್ನುವುದೂ ಗೊತ್ತಿದೆ. ನೀವು ಸೇರಿಸಲಿಕ್ಕೆ ನಮ್ಮರು ಅಡ್ಡಿ ಇಲ್ಲ. ಬದಲಾವಣೆ ಮಾಡಲಿಕ್ಕೆ ನಿಮಗೆ ಅಧಿಕಾರವಿಲ್ಲವೆಂದು ಹೇಳುವಷ್ಟು ದಡ್ಡರು ನಾವಲ್ಲ, ಅವಿವೇಕಿಗಳು ನಾವಲ್ಲ. ಆದರೆ ಈ ಬದಲಾವಣೆಯನ್ನು ತಂದಂತಹ ಸಂದರ್ಭ ನಿಮ್ಮ ಮೇಲೆ ಬಂದಂತಹ ಒತ್ತಡ ಇದೆಯಲ್ಲ, ಇದನ್ನು ನೋಡಿ ಇದರ ಅರಿವಿರುವುದರಿಂದ ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಸಾಮಾಜಿಕ ನ್ಯಾಯ ಕೊಡುವಂತಹ ಬದ್ಧತೆಗೆ ಬದ್ಧರಾಗಿ ನೀವು ತೀರ್ಮಾನ ತೆಗೆದುಕೊಳ್ಳಲಿಲ್ಲ. ಒತ್ತಡಕ್ಕೆ ಯಾರನ್ನೋ ಮೆಚ್ಚಿಸಲಿಕ್ಕೆ ಈ ತೀರ್ಮಾನ ತೆಗೆದುಕೊಂಡಿದ್ದೀರಿ ಎಂದು ಅಷ್ಟೇ ಹೇಳುವುದು. ಈ ಹಂತದಲ್ಲಿ ಹೇಳಿ. ಚಿನ್ನಪ್ಪ ರೆಡ್ಡಿ ಆಯೋಗದಲ್ಲಿ ಕೊಟ್ಟಿರುವಂಥಾದ್ದರಲ್ಲಿ ಹಿಂದುಳಿದವರು ಎಷ್ಟು ಜನಸಂಖ್ಯೆ ಇದ್ದರು ಈಗ ತಾವು ಕೊಟ್ಟಿದ್ದೀರಲ್ಲ ಯಾವ್ಯಾವ ಜಾತಿ ಸೇರಿಸಿದ್ದೀರೋ ಈಗಿನ ಜನಸಂಖ್ಯೆ ಎಷ್ಟು ಇದೆ ಅದನ್ನು ದಯಮಾಡಿ ತಿಳಿಸಿ.

ಶ್ರೀ ಕಾಗೋಡು ತಿಮ್ಮಪ್ಪ:– ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಯಾವ ಪ್ರಮಾಣದ ಮೀಸಲಾತಿ ಇಟ್ಟು

20ರಷ್ಟು ಇಷ್ಟು ಮತ್ತು ಶೇಕಡ 6ರಷ್ಟು ಪ್ರಮಾಣವನ್ನು ಅಲ್ಪಸಂಖ್ಯಾತರಿಗೆ ಇಟ್ಟು, ಅದನ್ನು ಶೇಕಡ 26ರಷ್ಟು ಮಾಡಿದ್ದೇವೆ. ಶೇಕಡ 26ರಷ್ಟು ಇಡುವಾಗ ಉದಾಹರಣೆಗೆ, ಈಗ ಹಿಂದುಳಿದವರಿಗೆ ಶೇಕಡ 20ರಷ್ಟು ಇಟ್ಟಿದ್ದು, ನಮ್ಮ ಜನಸಂಖ್ಯೆಯನ್ನು ಅಂದಾಜಿನಲ್ಲಿ ಲೆಕ್ಕ ಹಾಕಿದಾಗ ಸುಮಾರು ಶೇಕಡ 20ರಷ್ಟು ಪ್ರಮಾಣದಲ್ಲಿ ಬರುತ್ತಾರೆ ಮತ್ತು ಯಾವ್ಯಾವ ಜಾತಿಗಳಲ್ಲಿ 2(ಎ) ಗುಂಪಿನಲ್ಲಿ ಸೇರಿಸಿದ್ದೇವೆಯೋ, ಇದರಲ್ಲಿ ಸೇರಿರತಕ್ಕಂಥ ಎಲ್ಲಾ ಜಾತಿಯ ಒಟ್ಟಾರೆ ಜನಸಂಖ್ಯೆ ಇವೊತ್ತು ಶೇಕಡ 20ರಷ್ಟು ಬರುತ್ತದೆ. ಸ್ವಲ್ಪ ಹೆಚ್ಚು–ಕಡಿಮೆಯಾಗಬಹುದು. ಅದಕ್ಕೋಸ್ಕರ ಶೇಕಡ 20ರಷ್ಟು ಇಟ್ಟಿದ್ದೇವೆ. ಮೊದಲನೆಯ ಗುಂಪಿಗೆ ಶೇಕಡ 7ರಷ್ಟು ಇಟ್ಟಿದ್ದು, ಅದರ ಪ್ರಜಾಸಂಖ್ಯೆ ಶೇಕಡ 7ರಷ್ಟು ಬರುತ್ತದೆ ಅಥವಾ ಶೇಕಡ 8ಕ್ಕೆ ಸ್ವಲ್ಪ ಹತ್ತಿರ ಬರಬಹುದು. ಹೆಚ್ಚು–ಕಡಿಮೆಯನ್ನು ಗಮನದಲ್ಲಿಟ್ಟುಕೊಂಡು ಇಷ್ಟು ಶೇಕಡ ಇಟ್ಟಿದ್ದೇವೆ. ಅಲ್ಲದೆ, ಅಲ್ಪಸಂಖ್ಯಾತರು ಶೇಕಡ 11ರಷ್ಟಿದ್ದಾರೆ, ಅವರಿಗೆ ಶೇಕಡ 6ರಷ್ಟು ಮೀಸಲಾತಿ ಇಟ್ಟಿದ್ದೇವೆ. ಅಂದರೆ, ಒಂದನೇ ಮತ್ತು ಎರಡನೇ ಗುಂಪಿನಲ್ಲಿರುವ ಹಿಂದುಳಿದ ವರ್ಗದವರೇನಿದ್ದಾರೆ, ಇವರಿಗೆ ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿ ಏನು ಶಿಫಾರಸ್ಸು ಮಾಡಿದ್ದರು, ಅಷ್ಟು ಪ್ರಮಾಣದ ಮೀಸಲಾತಿಯನ್ನು ನಾವು ಉಳಿಸಿಕೊಂಡು ಹೋಗುವ ಕೆಲಸವನ್ನು ಇಲ್ಲಿ ಮಾಡಿದ್ದೇವೆಯೋ ವಿನಹ ಇದನ್ನು ತಿರುಚಲಾಗಿದೆ. ವಿಕೃತಗೊಳಿಸಿದ್ದಾರೆನ್ನುವ ಭಾವನೆ ಸುಳ್ಳು ಅದನ್ನು ನಂಬತಕ್ಕಂಥದ್ದಲ್ಲ. ಇದನ್ನು ವಿರೋಧ ಪಕ್ಷದವರು ಪ್ರಚಾರಕ್ಕಾಗಿ ಬಳಸಿಕೊಳ್ಳತಕ್ಕ ಮಾತೇ ವಿನಹ ನಿಜವಾಗಿಯೂ ಸರ್ಕಾರದ ಪ್ರಾಮಾಣಿಕತನವನ್ನು ಅಳತೆ ಮಾಡುವ ಕೆಲಸದಲ್ಲಿ ವಿರೋಧ ಪಕ್ಷದವರು ವಿಫಲರಾಗಿದ್ದಾರೆನ್ನುವ ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ.

ಶ್ರೀ ವೈ.ಕೆ. ರಾಮಯ್ಯ:– ನೀವು ಇದನ್ನು ವಿಕೃತಗೊಳಿಸಿಲ್ಲ ಎನ್ನುವುದಾದರೆ ಅಂಕಿ–ಅಂಶವನ್ನು ಕೊಡಿ. ಅಂಕಿ–ಅಂಶ ನನಗೆ ಬೇಡ, ಈ ರಾಜ್ಯದ ಜನತೆಗೆ ಕೊಡಿ. ಬದಲಾವಣೆ ಮಾಡಿಲ್ಲ ಮತ್ತು ವಿಕೃತಗೊಳಿಸಿಲ್ಲ ಎಂದು ನೀವು ಹೇಳುವುದಾದರೆ ಆ ವಾದಕ್ಕೆ ಪುಷ್ಠಿ ಸಿಗುವುದು ನಿಮ್ಮ ಅಂಕಿ–ಅಂಶಗಳಿಂದ. ಅದನ್ನು ಕೊಡಿ.

ಶ್ರೀ ಕಾಗೋಡು ತಿಮ್ಮಪ್ಪ:– ಅಂಕಿ–ಅಂಶವನ್ನು ತರಿಸಿಕೊಡುತ್ತೇನೆ. ಮೊದಲನೆಯ ವರ್ಗಕ್ಕೆ ಶೇಕಡ 7ರಷ್ಟು ಏನು ಇಟ್ಟಿದ್ದೇವೆ. ಅದರ ಜನಸಂಖ್ಯೆಗನುಗುಣವಾಗಿ ಇಟ್ಟಿದ್ದೇವೆ. ಅವರ ಜನಸಂಖ್ಯೆ ಶೇಕಡ 7ರಷ್ಟಿರಬಹುದು ಅಥವಾ ಸ್ವಲ್ಪ ಹೆಚ್ಚೆಂದರೆ ಶೇಕಡ 8ರ ಹತ್ತಿರವಿರಬಹುದು.

ಶ್ರೀ ವೈ.ಕೆ. ರಾಮಯ್ಯ:– ಆ ಪ್ರಶ್ನೆಯನ್ನು ನಾನು ಕೇಳಲಿಲ್ಲ. ಮೂಲಭೂತವಾದ ಪ್ರಶ್ನೆಯೇನೆಂದರೆ, ನಾನು ಇನ್ನೊಂದು ಸಾರಿ ಹೇಳುತ್ತೇನೆ. ಈ ಸವಲತ್ತಿಗೆ ಚಿನ್ನಪ್ಪರೆಡ್ಡಿ ಆಯೋಗದ ವ್ಯಾಪ್ತಿಯಲ್ಲಿ ಕರ್ನಾಟಕದ ಎಷ್ಟು ಜನಸಂಖ್ಯೆ ಸೇರಿಕೊಂಡಿತ್ತು? ಇವೊತ್ತು ನೀವು ತರುತ್ತಿರತಕ್ಕಂಥ ವಿಧೇಯಕದಲ್ಲಿ ಎಷ್ಟು ಜನಸಂಖ್ಯೆ ಅದರ ವ್ಯಾಪ್ತಿಗೆ ಬರುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ:– ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿ ಒಂದು ಮತ್ತು ಎರಡನೇ ಗುಂಪನ್ನು ಸೇರಿಸಿದರೆ ಶೇಕಡ 33ರಷ್ಟು ಪ್ರಮಾಣದ ಮೀಸಲಾತಿಯನ್ನು ಶಿಫಾರಸ್ಸು ಮಾಡಿದ್ದಾರೆ.

ಅವರು ಶಿಫಾರಸ್ಸು ಮಾಡಿರುವ ಒಟ್ಟಾರೆ ಜಾತಿಯ ಪ್ರಜಾ ಸಂಖ್ಯೆಯ ಪ್ರಮಾಣವೂ ಇವತ್ತು ಹೆಚ್ಚು ಕಡಿಮೆ 30–32 ಪರ್‌ಸೆಂಟ್ ಆಗುತ್ತದೆ. ಅವರು ಕಸುಬಿನ ಆಧಾರದ ಮೇಲೆ ಏನು ಮೂರನೆಯ ವರ್ಗವನ್ನಾಗಿ ಮಾಡಿದ್ದಾರೆ ಅದಕ್ಕೆ ಜನಸಂಖ್ಯೆ ಇಲ್ಲ, ಲೆಕ್ಕವಿಡಲು ಆಗುವುದಿಲ್ಲ. ಅದರ ಬಗ್ಗೆ ಜನಸಂಖ್ಯೆಯಲ್ಲಿ ದಾಖಲೆಗಳಿಟ್ಟಿಲ್ಲ. ಮೂರನೆಯ ವರ್ಗದಲ್ಲಿಟ್ಟಿರತಕ್ಕ ಕಸುಬುದಾರರ ಗ್ರೂಪ್ ಏನು ಇದೆ ಅವರೂ ಸಹ ಒಂದಲ್ಲಾ ಒಂದು ಜಾತಿಯಲ್ಲಿ ಸೇರಿಸಿದ್ದಾರೆ. ಆದುದರಿಂದ ಇವತ್ತು ಅವರು ಆ ಜಾತಿಯ ಹೆಸರಿನಲ್ಲಿ ಪತ್ರವನ್ನು ಪಡೆಯುವ ಸೌಲಭ್ಯವು ಆಗುತ್ತದೆ. ಜೊತೆಗೆ ಸುಳ್ಳು

ಜಾತಿಯ ಪತ್ರವನ್ನು ಪಡೆದುಕೊಳ್ಳುವುದು ಅನೇಕ ಸಂದರ್ಭದಲ್ಲಿ ಸರ್ಕಾರದ ಮತ್ತು ನಮ್ಮ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸಾಕಷ್ಟು ಕ್ರಮವನ್ನು ಕೂಡ ತೆಗೆದುಕೊಂಡಿದ್ದೇವೆ. ಅದನ್ನು ತಡೆಯುವ ಅಗತ್ಯವು ಸಹ ಇದೆ. ಕೃಷಿ ಕಾರ್ಮಿಕರು ಯಾರು ಎನ್ನುವ ಬಗ್ಗೆ ದಾಖಲೆ ಇಲ್ಲ. ರಸ್ತೆ ಕೆಲಸ ಮಾಡುವವರ ಬಗ್ಗೆ ದಾಖಲೆ ಇಲ್ಲ. ಮ್ಯಾನ್ಯುಯಲ್ ಲೇಬರರ್ಸ್‌ನ ಬಗ್ಗೆ ದಾಖಲೆಯನ್ನು ಇಟ್ಟಿಲ್ಲ. ಈ ರೀತಿ ದುರುಪಯೋಗಪಡಿಸಿರತಕ್ಕ ಸಂದರ್ಭ ಜಾಸ್ತಿಯಾಗಿ ಕಂಡುಬಂದ ಕಾರಣ ಎಂದಾಗಿ, ಚಿನ್ನಪ್ಪರೆಡ್ಡಿಯವರು ಏನು ಮೂರನೇ ವರ್ಗವನ್ನಾಗಿ ಶಿಫಾರಸ್ಸು ಮಾಡಿದ್ದಾರೆ, ಅದು ನಮ್ಮ ಏಪ್ರಿಲ್ ಮತ್ತು ಜುಲೈನ ಆಜ್ಞೆಯಲ್ಲಿ ಏನು ಇದೆ ಅದನ್ನು ಈಗ ನಾಲ್ಕನೆಯ ವರ್ಗವನ್ನಾಗಿ ವಿಂಗಡಣೆ ಮಾಡಿದ್ದೇವೆ. ಅದನ್ನು ತೆಗೆದುಹಾಕುವುದಕ್ಕೆ ವಿಶೇಷವಾದ ಈ ತೀರ್ಮಾನವನ್ನು ಮಾಡಿದ್ದೇವೆ. ಆದ್ದರಿಂದ 3(ಎ) ಮತ್ತು 3(ಬಿ) ಎನ್ನತಕ್ಕ ಹೊಸದಾಗಿ ವರ್ಗವನ್ನು ಸೃಷ್ಟಿ ಮಾಡಿದ್ದೇವೆ. ಇದರ ಬಗ್ಗೆ ಮಾತನಾಡಿದವರ್ಯಾರು ಸರಿಯಾಗಿ ಹೇಳಲಿಲ್ಲ. ಮಾನ್ಯ ಬಂಗಾರಪ್ಪನವರು ಮಾತನಾಡುತ್ತ ಚುನಾವಣೆ ಬಂದಿದೆ ಎಂದು ಹೇಳಿದರು. ನಾವು ನೇರವಾಗಿ ಹೇಳಿದರೂ ಸಿಟ್ಟಾಗುತ್ತಾರೆ. 'ಅಕ್ಕ ನೀನು ಹೋಗಬೇಡ, ಭಾವನನ್ನು ಬಿಡಬೇಡ' ಎಂದಂತೆ, ಅದೂ ಸರಿ ಇದೂ ಸರಿ. ಇವತ್ತು ನಾವು ಅವರನ್ನು ಯಾವುದಕ್ಕಾಗಿ ಸೇರಿಸಿದ್ದೇವೆಂದರೆ, ಹಿಂದೆ ಹಾವನೂರ್ ವರದಿಯಲ್ಲಿ ಒಕ್ಕಲಿಗರನ್ನು ಸೇರಿಸಿದ್ದಾರೆ. ಸರ್ಕಾರ ತೀರ್ಮಾನವನ್ನು ಮಾಡತಕ್ಕ ಸಮಯದಲ್ಲಿ ಅವರನ್ನು ಸೇರಿಸಿ ಮೀಸಲಾತಿಯನ್ನು ಜಾರಿಗೆ ತಂದಿದೆ. ಅದರಂತೆ ಇವತ್ತಿನ ದಿವಸದವರೆಗೆ ಅವರು ಅದರ ಪ್ರಯೋಜನವನ್ನು ಪಡೆದುಕೊಂಡು ಬಂದಿದ್ದಾರೆ. ಜೊತೆಗೆ ಮಂಡಲ ವರದಿಯ ಆಧಾರದ ಮೇಲೆ. ಕೇಂದ್ರ ಸರ್ಕಾರವು ಹೊರಡಿಸಿರತಕ್ಕ ಆಜ್ಞೆಯಲ್ಲಿ ಗ್ರಾಮೀಣ ಪ್ರದೇಶದ ಒಕ್ಕಲಿಗರನ್ನೂ ಸಹ ಸೇರಿಸಿದ್ದಾರೆ. ಈ ರೀತಿ ಒಂದು ಭಾಗದಲ್ಲಿ ಅವರಿಗೆ ಈ ಪ್ರಯೋಜನವನ್ನು ಕೊಟ್ಟು ಅದರ ಪ್ರಯೋಜನವನ್ನು ಅವರು ಪಡೆದುಕೊಳ್ಳುತ್ತಿರತಕ್ಕ ಸಂದರ್ಭದಲ್ಲಿ ಅವರನ್ನು ಕೈಬಿಟ್ಟರೆ, ಸ್ವಾಭಾವಿಕವಾಗಿ ಜನರು ಸರ್ಕಾರದ ವಿರುದ್ಧ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸತಕ್ಕ ಸಂದರ್ಭ ಬರುತ್ತದೆ. ಸಂಘರ್ಷಕ್ಕೆ ಅವಕಾಶವಾಗುತ್ತದೆ. ಸಮಾಜದ ವಂಚನೆಗೆ ಒಳಗಾಗಿರತಕ್ಕ ಜನರಿಗೆ, ಸಾಮಾಜಿಕ ನ್ಯಾಯವನ್ನು ಕೊಡಬೇಕೆಂದು ಪ್ರಯತ್ನದಲ್ಲಿರುವಾಗ ಈ ಘರ್ಷಣೆಗೆ ಆಹ್ವಾನವನ್ನು ಕೊಟ್ಟರೆ ನಾವು ಎಷ್ಟರಮಟ್ಟಿಗೆ ಸಮಾಜಕ್ಕೆ ನ್ಯಾಯವನ್ನು ಕೋರಲು ಸಾಧ್ಯವಾಗುತ್ತದೆ ಎನ್ನುವ ಬಗ್ಗೆ ಆಲೋಚನೆ ಮಾಡಬೇಕಾಗುತ್ತದೆ. ಜೊತೆಗೆ ಲಿಂಗಾಯಿತ ಸಮಾಜಕ್ಕೆ ಸಂಬಂಧಪಟ್ಟಂತೆ 1986ರ ಆಜ್ಞೆಯಲ್ಲಿ ಆದಾಯದ ಮಿತಿಯ ವ್ಯಾಪ್ತಿಯಲ್ಲಿ ಬರತಕ್ಕ ಲಿಂಗಾಯಿತ ಸಮಾಜದವರು ಮೀಸಲಾತಿಯ ಸೌಲಭ್ಯವನ್ನು ಪಡೆದಿದ್ದಾರೆ. ಚಿನ್ನಪ್ಪರೆಡ್ಡಿಯ ವರದಿಯನ್ನು ಪ್ರಾರಂಭದಿಂದ ಕೊನೆಯವರೆಗೂ ಕಣ್ಣು ಬಿಟ್ಟು ಓದಿದರೆ ಅನೇಕ ಕಡೆ ಗ್ರಾಮಾಂತರ ಪ್ರದೇಶದಲ್ಲಿ ಒಕ್ಕಲಿಗರು ಮತ್ತು ಲಿಂಗಾಯಿತರು ಸಾಕಷ್ಟು ಪ್ರಮಾಣದಲ್ಲಿ ಬಡವರಿದ್ದಾರೆ ಎಂಬುದನ್ನು ವ್ಯಾಖ್ಯಾನ ಮಾಡಿದ್ದಾರೆ. ಅದನ್ನು ಪ್ರಸ್ತಾಪ ಮಾಡಿದ್ದಾರೆ. ಸಾಮಾಜಿಕವಾಗಿ ಈ ಮೀಸಲಾತಿಯ ಸೌಲಭ್ಯವನ್ನು ಯಾವ ಸಂಘರ್ಷಣೆ ಇಲ್ಲದೆ ಕಾರ್ಯರೂಪಕ್ಕೆ ತರಬೇಕು ಎನ್ನತಕ್ಕ ಸದುದ್ದೇಶ ಸರ್ಕಾರಕ್ಕೆ ಇರಬೇಕಾದರೆ, ಅದು ಲಿಂಗಾಯಿತರಿಗೂ ಬಂತು, ಒಕ್ಕಲಿಗರಿಗೂ ಬಂತು, ಅದೇ ರೀತಿ ಚಿನ್ನಪ್ಪರೆಡ್ಡಿ ವರದಿಯಲ್ಲಿ ಕೈಬಿಟ್ಟು, ಹೋದಂಥ, ಕೆಲವು ಸಣ್ಣಪುಟ್ಟ ಸಮಾಜವನ್ನು ಸೇರಿಸಿದ್ದಾರೆ. ಉದಾಹರಣೆಗೆ, ಮರಾಠಿ ಸಮಾಜದವರನ್ನು ಕೈಬಿಟ್ಟಿದ್ದರು. ಅದನ್ನು ಇವತ್ತು ಸೇರಿಸಿದ್ದೇವೆ. ಇಂಥ ಒಂದು ಗುಂಪನ್ನು ಮಾಡಿ ಅವರಿಗೂ ಸಹ ಮೀಸಲಾತಿಯ ಸೌಲಭ್ಯವನ್ನು ಮಾಡಿದ್ದೇವೆ. ಮೊದಲು 12ಪರ್‌ಸೆಂಟ್‌ರಷ್ಟು ಮಾಡಿದ್ದೆವು. ಈಗ ಅದರಲ್ಲಿ ಪ್ರಮುಖವಾದ ಎರಡು ಜಾತಿಗಳನ್ನು ಸೇರಿಸಿದ್ದೇವೆ. ಪ್ರೊ॥ ನಂಜುಂಡಸ್ವಾಮಿಯವರು ಪ್ರತಿಯೊಂದು ಜಾತಿಯ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಮೀಸಲಾತಿಯನ್ನು ಮಾಡಿದರೆ ಇಂಥ ಗೊಂದಲವಾಗುವುದಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ಮುಂದೆ ಚರ್ಚೆ ಮಾಡೋಣ. ಈಗ ತಾತ್ಪೂರಿಕವಾಗಿ ಗುಂಪನ್ನು ಮಾಡಿ, ಅದಕ್ಕೆ ನಿಗದಿತವಾದಂಥ

ಮೀಸಲಾತಿಯನ್ನು ಗೊತ್ತುಮಾಡಿದ್ದೇವೆ. ಅವರುಗಳಲ್ಲಿ ಬೇರೆ ಬೇರೆ ಮಾಡಿದರೆ ಅನುಕೂಲವಾಗುತ್ತದೆ ಎನ್ನತಕ್ಕ ಒತ್ತಾಯ, ಮನವಿ ಮಾಡಿದ್ದರಿಂದ ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡಿ, ಆ ತೀರ್ಮಾನ ಒಳ್ಳೆಯ ತೀರ್ಮಾನವೆಂದು ತಿಳಿದುಕೊಂಡು ಅದನ್ನೇ 3(ಎ) ಮತ್ತು 3(ಬಿ) ಎನ್ನತಕ್ಕ ಎರಡು ಭಾಗ ಮಾಡಿಕೊಟ್ಟಿದ್ದೇವೆ.

ಇವತ್ತು ಒಕ್ಕಲಿಗರ ಪ್ರಜಾಸಂಖ್ಯೆ 12 ರಿಂದ 14ಕ್ಕೆ ಆಗಿದೆ. ಅದರಲ್ಲಿ ಅರ್ಧಕ್ಕೆ ಅಂದರೆ 7ರಷ್ಟು ಪ್ರಮಾಣವನ್ನು ಗುರುತಿಸಿದ್ದೇವೆ. ಹಾಗೆ ಲಿಂಗಾಯಿತರ ಇನ್ನಿತರ ಸಮಾಜದ ಗುಂಪಿನಲ್ಲಿ ಏನು ಸೇರಿಸಿದ್ದೇವೆ. ಅದು ಸುಮಾರು 20 ರಿಂದ 22ರಷ್ಟು ಜನಸಂಖ್ಯೆ ಆಗುತ್ತದೆ. ಇವತ್ತು ಅದನ್ನು ನಾವು 10ರಷ್ಟು ಮಾಡಿದ್ದೇವೆ. ಅದೃಷ್ಟದಿಂದ ನಾವು ಏನು ಚಿನ್ನಪ್ಪರೆಡ್ಡಿ ವರದಿಯನ್ನು ಯಾವುದೇ ದೃಷ್ಟಿಯಿಂದ ವಿಕೃತಗೊಳಿಸಿಲ್ಲ. ಅವರು ಮಾಡಿರುವಂಥ ಶಿಫಾರಸ್ಸನ್ನು ಯಥಾವತ್ತಾಗಿ ಇವತ್ತು ಅಷ್ಟು ಮಾರ್ಗದ ಜನರನ್ನು ಮೀಸಲಾತಿಯ ವ್ಯಾಪ್ತಿಯಲ್ಲಿ ತರದಿದ್ದೇವೆ. ಅದರಲ್ಲಿ ನಾವು ಯಾವ ಬದಲಾವಣೆಯನ್ನು ಮಾಡಿಲ್ಲ. ಬದಲಾವಣೆ ಮಾಡಿರುವುದು ಕೆಲವು ಸಣ್ಣ ಪುಟ್ಟ ಜಾತಿಗಳನ್ನು ಬಿಟ್ಟು ಹೋಗಿರುವುದನ್ನು ಅದರಲ್ಲಿ ಸೇರಿಸಿ ಎರಡನೇ ವರ್ಗದಲ್ಲಿ ಇದ್ದಂತಹ ಕೆಲವು ಜಾತಿಗಳನ್ನು 1ನೇ ವರ್ಗಕ್ಕೆ ತಂದು ಆ ಪ್ರಮಾಣವನ್ನು 5ರಷ್ಟು ಏನಿತ್ತು, ಅದನ್ನು ನಾವು 7ರಷ್ಟಕ್ಕೆ ಏರಿಸಿದ್ದೇವೆ. ಆ ದೃಷ್ಟಿಯಿಂದ ಏನು ವಿರೋಧಪಕ್ಷದವರು ವಿಕೃತಗೊಳಿಸಿದ್ದಾರೆಂದು ಅತ್ಯಂತ ಪ್ರಬಲವಾದಂತಹ ವಾದವನ್ನು ಮಂಡಿಸಿದ್ದಾರೆ. ಅದನ್ನು ಅಷ್ಟೇ ಪ್ರಬಲವಾಗಿ ನಾನು ಅಲ್ಲಗಳೆಯುತ್ತೇನೆ. ಕಾರಣವೇನು ? ಎಂದರೆ ಈ ವಿಧೇಯಕದ ಮೇಲೆ ತಾವು ಚಿನ್ನಪ್ಪರೆಡ್ಡಿ ವರದಿಯಲ್ಲಿ ಸೇರಿಸಿರುವಂತಹ ಜಾತಿಗಳು ಯಾವ ಯಾವುದು ಎಷ್ಟು ಪ್ರಮಾಣದ ಮೀಸಲಾತಿಯನ್ನು ನೀಡಿದ್ದೇವೆ ಎನ್ನುವುದನ್ನು ಅವರು ಓದಿ ಅದನ್ನು ಆಧರಿಸಿ, ಈ ವಿಧೇಯಕದ ಮೇಲೆ ಒಂದು ಪ್ರಾಮಾಣಿಕವಾದ ಚರ್ಚೆ ನಡೆಸಿದ್ದರೆ, ಆಗ ಅದನ್ನು ವಿಕೃತಗೊಳಿಸಿದ್ದೆವೆಯೊ ? ಇಲ್ಲವೊ ? ಎಂಬ ವಸ್ತು ಸ್ಥಿತಿ ಅವರಿಗೆ ಗೊತ್ತಾಗುತ್ತಿತ್ತು. ಆದ್ದರಿಂದ ನಾನು ವಿಷಾದದಿಂದ ಹೇಳಬೇಕಾಗಿದೆ. ಚಿನ್ನಪ್ಪರೆಡ್ಡಿ ವರದಿಯನ್ನು ಯಾರು ಇಲ್ಲಿ ಪ್ರಸ್ತಾಪ ಮಾಡಲೇ ಇಲ್ಲ. ಪ್ರೊ।। ನಂಜುಂಡಸ್ವಾಮಿಯವರು ವಿಶೇಷವಾಗಿ ಪ್ರಸ್ತಾಪ ಮಾಡಿದ್ದಾರೆ. ಆದುದರಿಂದ ವಿಕೃತಗೊಳಿಸಿದ್ದೇವೆ ಎನ್ನುವಂತಹ ವಾದ ಸರಿಯಲ್ಲವೆಂದು ಈ ಸಂದರ್ಭದಲ್ಲಿ ಹೇಳಿ, ಇನ್ನು ನಮ್ಮ ಸರ್ಕಾರ ಕೊಟ್ಟಿರುವಂತಹ ಮಾತನ್ನು ನಾವು ಉಳಿಸಿಕೊಂಡಿದ್ದೇವೆ. ನಮಗೆ ಸಂತೋಷ ಇದೆ ಮತ್ತು ನಮಗೆ ನೈತಿಕವಾದಂಥ ಹೊಣೆಗಾರಿಕೆ ಕೂಡ ಇವತ್ತು ಇದೆ. ಏಕೆಂದರೆ ಮಾನ್ಯ ಬಂಗಾರಪ್ಪನವರು ಬಹಳ ಹೇಳುತ್ತಿದ್ದರು. ಅವರ ಭಾಷಣವನ್ನು ಎಲ್ಲಾ ಬರೆದುಕೊಂಡಿದ್ದೇನೆ. ಅಸಂಖ್ಯ ಸುಳ್ಳುಗಳು ಇದೆ ಎಂದು, ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು; ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿ ಮಾಡುತ್ತೇವೆಂದು ಹೇಳಿದ ಪ್ರಕಾರ ಜಾರಿಗೆ ಕೊಟ್ಟೆವು. ಅವರ ದೃಷ್ಟಿಯಲ್ಲಿ ಸುಳ್ಳು ಆಗುವುದಾದರೆ ಅವರು ಆ ಸ್ಥಾನದಲ್ಲಿ ನಿಂತುಕೊಂಡು ಜಾರಿಗೆ ಕೊಡುತ್ತೇವೆಂದು ಹೇಳಿ, ಇರುವವರೆಗೆ ಜಾರಿಗೆ ಕೊಡದೆ ಹೋದರಲ್ಲ, ಅದು ಅವರ ಡಿಕ್ಷನರಿಯಲ್ಲಿ ಸತ್ಯ ಅಂತ. ಹೇಳಿದಂತೆ ನಡೆದುಕೊಳ್ಳುವವರು ಸುಳ್ಳುಗಾರರು, ಯಾರು ಹೇಳಿದ ಪ್ರಕಾರ ನಡೆದುಕೊಳ್ಳಲಿಲ್ಲ ಅವರು ಸತ್ಯವಂತರು. ಆದುದರಿಂದ ಇವರು ಒಬ್ಬ ಹಿಂದುಳಿದವರವಾಗಿ ಇಂಥ ಒಂದು ಮಸೂದೆ ಚಾರಿತ್ರಾರ್ಹವಾದಂಥ ಘಟನೆ, ಈ ಮೀಸಲಾತಿಯ ಬಗ್ಗೆ ಶಾಸನ ತಂದು ಚರ್ಚೆ ಮಾಡುತ್ತಿರತಕ್ಕಂಥವರು ಅತ್ಯಂತ ಚರಿತ್ರಾರ್ಹ ಸಂದರ್ಭ ಇಂಥ ಸಂದರ್ಭವನ್ನು ಶಾಸಕನೂ ಕೂಡ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಾನು ವಿರೋಧಪಕ್ಷದವನಾಗಿ ಕೆಲಸ ಮಾಡಿದ್ದೇನೆ. ಇಂತಹ ವಿಷಯ ಅಪರೂಪಕ್ಕೆ ಬರುತ್ತದೆ. ಈ ವಿಷಯ ಚರ್ಚೆ ಬಂದಂತಹ ಸಂದರ್ಭದಲ್ಲಿ, ಅದರಲ್ಲೂ ಯಾವುದೋ ಒಂದು ಚರಿತ್ರಾರ್ಹವಾದಂತಹ ಘಟನೆಯೊಂದು ಶಾಸನಸಭೆಯಲ್ಲಿ ನಗೆಯುವಂತಹ ಸಂದರ್ಭದಲ್ಲಿ ಅದನ್ನು ಉಪಯೋಗ ಮಾಡಿಕೊಂಡು ನಮ್ಮ ವಾದವನ್ನು ಇಡಬೇಕೆಂದು ಹೇಳಿ, ನಾವು ಇಟ್ಟಿದ್ದೇವೆ. ಮೊದಲನೆಯ ಗುಂಪಿಗೆ

ನಾವು ಇಷ್ಟು ಪ್ರಮಾಣದ ಮೀಸಲಾತಿಯನ್ನು ಇಟ್ಟಿದ್ದೇವೆ. ಈ ಬಗ್ಗೆ ಒಂದು ಮಾತು ಹೇಳುವುದಕ್ಕಾಗಲಿಲ್ಲ. ಇವತ್ತು ಹರಿಜನ ಗಿರಿಜನರಿಗೆ ಶೇ.18ರಷ್ಟು ಪ್ರಮಾಣವನ್ನು 23ಕ್ಕೆ ನಾವು ಏರಿಸಿದ್ದೇವೆ. ಅವರ ಜನಸಂಖ್ಯೆ 1994ನೇ ಇಸವಿಗೆ ಅದರ ಪ್ರಮಾಣದ ಅನುಗುಣವಾಗಿ ಇವತ್ತು ಅದನ್ನು ಏರಿಸಿದ್ದೇವೆ. ಅದರ ಬಗ್ಗೆ ಇವತ್ತು ಸ್ವಾಗತ ಮಾಡುವಂತಹ ಪ್ರಯತ್ನವನ್ನು ಅವರು ಮಾಡುವುದಕ್ಕಾಗಲಿಲ್ಲವೆಂದರೆ, ಟೀಕೆ ಮಾಡುವುದಕ್ಕೆ ನೈತಿಕ ಹಕ್ಕು ಏನು ಉಳಿದಿದೆ ? ಇವರು ಒಬ್ಬ ಹಿಂದುಳಿದ ನಾಯಕರು. ದೊಡ್ಡ ಪ್ರಚಾರ ಮಾಡುವಂತಹ ಪ್ರಯತ್ನ ನಡೆಯುತ್ತ. ನಮ್ಮ ಮಾಧ್ಯಮದಲ್ಲೂ ನಡೆದಿದೆ. ಇದೆಲ್ಲವನ್ನು ಉಪಯೋಗ ಮಾಡಿಕೊಂಡು ಹೇಳುವಂತಹ ಮನುಷ್ಯರು ಇವತ್ತು ಹಿಂದುಳಿದ ವರ್ಗದ ಭವಿಷ್ಯದ ದೃಷ್ಟಿಯಲ್ಲಿ ಒಂದು ವಿಧೇಯಕದ ಮೇಲೆ ಚರ್ಚೆಯಾಗಬೇಕಾದರೆ ಇವತ್ತು ಸರ್ಕಾರ ಈ ವಿಧೇಯಕದಲ್ಲಿ ಏನು ಸೂಚನೆ ಮಾಡಿದ್ದೇವೆ. ಯಾವ ಪ್ರಮಾಣದ ಮೀಸಲಾತಿಗಳನ್ನು ಯಾವ ಯಾವ ವರ್ಗಗಳಿಗೆ, ಯಾವ ಯಾವ ಜಾತಿಗಳ ಗುಂಪುಗಳಿಗೆ ಇಡಬೇಕು ಎಂದು ಮಾಡಿದ್ದೇವೆ. ಇದು ಸ್ವಾಗತಾರ್ಹವೇ ? ಇಲ್ಲವೇ ? ಎನ್ನುವಂತಹ ಖಚಿತವಾದ ಅಭಿಪ್ರಾಯವನ್ನು ಕೊಡುವುದಕ್ಕೆ ಸಾಧ್ಯವಿಲ್ಲದಿರುವಂತಹ ನಾಯಕರು ಹಿಂದುಳಿದ ವರ್ಗಗಳ ಪ್ರತಿಪಾದಿಸುವಂತಹ ಅರ್ಹತೆ ಪಡೆದಿರುವುದಿಲ್ಲ. ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಇವತ್ತು ಹೇಳಬೇಕಾಗಿದೆ. ಜೊತೆಗೆ ನಮ್ಮ ರಾಮಯ್ಯನವರೂ ಕೂಡ ಸ್ವಲ್ಪ ವ್ಯಂಗ್ಯವಾಗಿ, ಸುತ್ತಿ ಬಳಸಿ ಹೇಳತಕ್ಕಂಥ ಪ್ರಯತ್ನವನ್ನೂ ಕೂಡ ಮಾಡಿದರು. ಹೌದು ನೀವು ಈಗ ಎಷ್ಟು ಜನ ಮಾತನಾಡಿದಿರಲ್ಲ, ಈ ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಲಿಂಗಾಯಿತರನ್ನು ಒಕ್ಕಲಿಗರನ್ನು ಮತ್ತು ಮರಾಠ ಜನಾಂಗವನ್ನು ಸೇರಿಸಿರಲಿಲ್ಲ, ಇವತ್ತು ನಾವು ಸೇರಿಸಿದ್ದೇವೆ. ಇದಕ್ಕೆ ಸಮ್ಮತಿ ಇಲ್ಲ ಎಂದು ಹೇಳದೆ, ನಿಮ್ಮ ಇಡೀ ಭಾಷಣದ ಉದ್ದಕ್ಕೂ ಸುತ್ತಿ ಬಳಸಿದ ಮಾತಿನ ಅರ್ಥ ಇದೆಯೇ ಹೊರತು, ನೇರವಾಗಿ ಇದು ಸರ್ಕಾರ ಮಾಡಿದ ತಪ್ಪು ಎಂದು ಹೇಳುವಂಹ ದಾಷ್ಟ್ಯ ನಿಮಗೆ ಇದೆಯೇನು ? ಇಲ್ಲಾ, ಏಕೆಂದರೆ ಒಂದಲ್ಲ ಒಂದು ರೀತಿಯಿಂದ ಸಾಮಾಜಿಕ ನ್ಯಾಯ ಮಾಡತಕ್ಕಂಥ ಪ್ರಯತ್ನದಲ್ಲಿ ಕೆಲವು ಅಂಶಗಳನ್ನು ಸರ್ಕಾರ ಗಮನಿಸಲೇಬೇಕಾಗುತ್ತದೆ. ಏಕೆಂದರೆ ತಾವೇ ಹೇಳಿದ್ದೀರಿ, ಒಂದು ಸಾರಿ ಒಂದು ಜಾತಿಗೆ ಅಥವಾ ಒಂದು ವರ್ಗಕ್ಕೆ ಸೌಲಭ್ಯವನ್ನು ನೀವು ಕೊಟ್ಟು, ಅದನ್ನು ಮತ್ತೆ ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ಮಾತನ್ನು ನೀವು ಬಳಸಿದ ಮೇಲೆ ಆ ಪ್ರಯತ್ನದಿಂದಲೇ ಇವತ್ತು ಸರ್ಕಾರ ಈ ಎರಡು ವರ್ಗಗಳನ್ನು ತರುವುದಕ್ಕೆ ಸಾಧ್ಯವಾಗಿದೆ. ಚಿನ್ನಪ್ಪ ರೆಡ್ಡಿ ವರದಿಯಲ್ಲಿ ಸೇರಿಸದೆ ಇದ್ದಾಗಲೂ ಕೂಡ ಒಂದು ಹೊಸ ಗುಂಪನ್ನು ಇವತ್ತು ಸೇರಿಸಿ ಅವರಿಗೆ ಮೀಸಲಾತಿಯನ್ನು ಮಾಡಿರತಕ್ಕಂಥಾದ್ದು ನಿಮ್ಮ ಮಾತಿನ ಹಿನ್ನಲೆಯ ಅರ್ಥದಿಂದಲೇ ತಂದಿರತಕ್ಕಂಥಾದ್ದು.

ಶ್ರೀ ವೈ.ಕೆ. ರಾಮಯ್ಯ:- ನೀವು ಒಕ್ಕಲಿಗರನ್ನು ಮತ್ತು ಲಿಂಗಾಯಿತರನ್ನು ಈ ವ್ಯಾಪ್ತಿಯಲ್ಲಿ ತಂದು ಆ ಎರಡು ಜಾತಿಗಳಿಗೆ ಉಪಕಾರ ಮಾಡಿದ್ದೇವೆ ಎಂದು ಹೇಳುವುದಾದರೆ ....

ಶ್ರೀ ಕಾಗೋಡು ತಿಮ್ಮಪ್ಪ:- ಹಾಗೆ ಹೋಗಬೇಡಿ, ನಾನು ನಿಮ್ಮ ಸಾಮಾಜಿಕ ಧರ್ಮ ಇದೇ ಒಂದು ವರ್ಗದ ಅಥವಾ ಜಾತಿಗಳ ಕೆಲವು ಸವಲತ್ತುಗಳನ್ನು ಪಡೆದಂತಹ ಸಂದರ್ಭದಲ್ಲಿ ಅದನ್ನು ಮಧ್ಯದಲ್ಲಿ ಕಿತ್ತು ಹಾಕತಕ್ಕಂಥಾದ್ದು ನ್ಯಾಯವಲ್ಲ, ಸಾಮಾಜಿಕ ಸಮ್ಮತವೂ ಅಲ್ಲ. ಆ ದೃಷ್ಟಿಯಿಂದ ಆ ವರ್ಗಕ್ಕೆ ವಿಶೇಷ ಸೌಲಭ್ಯವನ್ನು ಕಲ್ಪಿಸಿಕೊಡಬೇಕಾದುದು ಸಾಮಾಜಿಕ ನ್ಯಾಯ ಎಂದು ತಿಳಿದುಕೊಂಡು ಈ ಒಂದು ವರ್ಗವನ್ನು ಸೃಷ್ಟಿ ಮಾಡಿದ್ದೇವೆ.

ಶ್ರೀ ವೈ.ಕೆ. ರಾಮಯ್ಯ:- ಈ ಸಾಮಾಜಿಕ ನ್ಯಾಯವನ್ನು ಕೊಡುವಂತಹ ಭದ್ರತೆ ಪ್ರಾಮಾಣಿಕತೆ ಇದೆಯಲ್ಲ, ಇದು ಯಾವುದೇ ಒಂದು ಪಕ್ಷದ ಗುತ್ತಿಗೆ ಅಲ್ಲ, ಯಾವುದೇ ಒಂದು ಜಾತಿಯ ಗುತ್ತಿಗೆ ಅಲ್ಲ, ಅಥವಾ ಯಾವುದೇ ಒಬ್ಬ ವ್ಯಕ್ತಿಯ ಗುತ್ತಿಗೆಯಲ್ಲ. ಏಕೆಂದರೆ ತಮಿಳುನಾಡಿನ

ಮುಂದುವರೆದಂತಹ ಜಾತಿಗೆ ಸೇರಿದ ಮುಖ್ಯಮಂತ್ರಿ ಒಬ್ಬ ಹೆಣ್ಣುಮಗಳಿಂದ ಈ ರಾಜ್ಯದ ಹಿಂದುಳಿದ ವರ್ಗದ ಮುಖ್ಯಮಂತ್ರಿಗಳಿಗೆ ಸ್ಫೂರ್ತಿ ದೊರಕಿದೆ. ಆದುದರಿಂದ ಈ ಭದ್ರತೆ ಇದೆಯಲ್ಲ ಇದು ಯಾರ ಸ್ವತ್ತೂ ಅಲ್ಲ, ಯಾವ ಜಾತಿಗೆ ಸೀಮಿತವೂ ಅಲ್ಲ. ಆದುದರಿಂದ ದಯಮಾಡಿ ನಾವು ಆ ಜಾತಿ ಸೇರಿಸಿ ಅನ್ಯಾಯ ಮಾಡಿದರು, ಈ ಜಾತಿ ಸೇರಿಸಿ ಪುಣ್ಯ ಕಟ್ಟಿಕೊಂಡರು ಎನ್ನುವ ಮಾತು ಏನಿದೆ ಇದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧವಿಲ್ಲ ಸ್ವಾಮಿ. ನೀವು ನಿಮ್ಮ ಭಾಷಣವನ್ನು ಮುಂದುವರೆಸಿ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ದೇವರಾಜ್ ಅರಸುರವರು ಮುಖ್ಯಮಂತ್ರಿತನದಲ್ಲಿ ಇದನ್ನು ಪ್ರಾರಂಭ ಮಾಡಿದಾಗ ನಾವೆಲ್ಲಾ ಇಲ್ಲಿ ಇದ್ದವರು. ಅದಕ್ಕೆಲ್ಲಾ ಆಗಲಿ ಎಂದು ಹೇಳಿ ನಾವು ನಮ್ಮ ಮತವನ್ನು ಕೊಟ್ಟಂತವರು. ಆದುದರಿಂದ ಅವರ ಸ್ಫೂರ್ತಿಯಿಂದ ನಾವೇನೂ ಮಾಡಲಿಲ್ಲ. ಏನೋ ಕಾಕತಾಳೀಯ ನ್ಯಾಯವಾಗಿ ಪರಿಣಮಿಸಿದೆ ಅಷ್ಟೆ.

ಶ್ರೀ ಚಿಕ್ಕಮಾದು:- 1989ರಲ್ಲಿ ಇದ್ದಂತಹ ಸರ್ಕಾರದಲ್ಲಿ ಮಾನ್ಯ ರಾಮಯ್ಯನವರೂ ಕೂಡ ಸಚಿವರಾಗಿದ್ದರು. ಅವತ್ತು ಕೂಡ ಹಿಂದುಳಿದ ವರ್ಗಗಳ ಬಗ್ಗೆ ಏನೂ ಚಕಾರ ಎತ್ತಲಿಲ್ಲ. ವೆಂಕಟಸ್ವಾಮಿ ಆಯೋಗವನ್ನೇ ಈ ರಾಜ್ಯದಲ್ಲಿ ಜಾರಿಗೆ ಕೊಟ್ಟಂತಹ ಸಂದರ್ಭದಲ್ಲಿ ಚರ್ಚೆಗೂ ಕೂಡ ಬಿಡಲಿಲ್ಲ. ವೈಜ್ಞಾನಿಕವಾಗಿ ಮಾಡಿರುವ ಕಾರಣಕ್ಕೋಸ್ಕರವಾದರೂ ಕೂಡ ಸದನದಲ್ಲಿ ತೆಗೆದು ನೋಡಲಿಲ್ಲ. ಅಂದೂ ಕೂಡ ಸನ್ಮಾನ್ಯ ರಾಮಯ್ಯನವರು ಸಚಿವರಾಗಿದ್ದರು. ಇವತ್ತು ನಮ್ಮ ಸರ್ಕಾರ ಏನು ಚುನಾವಣಾ ಪ್ರಣಾಳಿಕೆಯನ್ನು ನಾವು ಜಾರಿಗೆ ಕೊಡುತ್ತೇವೆಂದು ಹೇಳಿ ಕೊಟ್ಟಂತಹ ಮಾತನ್ನೇ ಉಳಿಸಿಕೊಂಡಿದ್ದೇವೆ. ಇದು ಸ್ವಾಗತಾರ್ಹವಾದಂತಹ ವಿಚಾರ. ತಾವು ಹಿರಿಯ ಸದಸ್ಯರಾಗಿದ್ದೀರಿ, ಹಿಂದುಳಿದವರ ಬಗ್ಗೆ ಅವರ ಅಧಿಕಾರ ವ್ಯಾಪ್ತಿಯಲ್ಲಿ ಏನು ಮಾಡಿದ್ದಾರೆ ಎನ್ನುವ ಬಗ್ಗೆ ಅವಲೋಕನ ಮಾಡಬೇಕು.

ಶ್ರೀ ಆರ್. ನಾರಾಯಣ:- ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಪುಕ್ಕಲುತನದ ಮುಖ್ಯಮಂತ್ರಿ ಎಂದು ಹೇಳಿದರು. ಆದರೆ ಚಿನ್ನಪ್ಪ ರೆಡ್ಡಿ ಬಂದು ಎಷ್ಟು ದಿನ ಆಯಿತು. ಅದನ್ನು ಧೈರ್ಯವಾಗಿ ಎಲ್ಲಾ ವರ್ಗದ ಜನತೆಗೆ ಸಮಾಧಾನ ಆಗುವ ರೀತಿಯಲ್ಲಿ ಜಾರಿಗೆ ಕೊಟ್ಟಂಥವರು ಧೈರ್ಯದ ಮುಖ್ಯಮಂತ್ರಿಯೋ ಅಥವಾ ಪುಕ್ಕಲುತನದ ಮುಖ್ಯಮಂತ್ರಿಯೋ ಎಂದು ಅವರು ಹೇಳಬೇಕು ಮತ್ತು ಒಂದು ಅಂಶ ನಾವು ಗಮನಿಸಬೇಕಾಗಿದೆ, ಈ ವರದಿಯನ್ನು ಬಹಳಷ್ಟು ವರ್ಷಗಳ ಕಾಲ ನೆನೆಗುದಿಗೆ ಬಿದ್ದಿದ್ದರೂ ಕೂಡ ಅದನ್ನು ತರಬೇಕೇ ಬೇಡವೇ ಎಂದು ಹೇಳಿ ಹಿಂದಿನ ಮುಖ್ಯಮಂತ್ರಿಗಳಲ್ಲಿ ಯಾವ ರೀತಿ ಒಂದು ರೀತಿಯ ಜಂಜಾಟ ಇತ್ತು ಮತ್ತು ನಮಗೂ ಸಹ ಒಂದು ರೀತಿಯ ಭಯ ಇತ್ತು. ಬಹುಶಃ ಚಿನ್ನಪ್ಪ ರೆಡ್ಡಿ ವರದಿಯನ್ನು ಯಥಾವತ್ತಾಗಿ ನಾವು ಏನಾದರೂ ಇಂಪ್ಲಿಮೆಂಟ್ ಮಾಡಿದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ರಕ್ತಪಾತವಾಗುತ್ತದೆ, ಅಶಾಂತಿ , ಗಲಭೆ ಗೊಂದಲಗಳಾಗಿ, ಇದರಿಂದ ಯಾವ ರೀತಿಯ ಒಂದು ಪರಿಸ್ಥಿತಿ ಉದ್ಭವವಾಗುತ್ತದೆಯೋ ಎನ್ನುವಂತಹ ಭಯ ನಮಗೆ ಇತ್ತು. ರಾಜಕೀಯ ಅಥವಾ ಇನ್ನಿತರ ದೃಷ್ಟಿಯಿಂದ ಇದನ್ನು ಏಕಾದರೂ ಮಾಡುತ್ತಾರೋ ಎಂದು ಸಹ ನಾವು ಗಾಬರಿ ಬಿದ್ದಿದ್ದೆವು. ಆದರೆ ಇದನ್ನು ಕಟ್ಟಕಡೆಯದಾಗಿ ಬಹಳ ಧೈರ್ಯ ಮಾಡಿ ಎಲ್ಲಾ ವರ್ಗದ ಜನರನ್ನು ಸಮಾಧಾನ ಪಡಿಸತಕ್ಕಂಥ ರೀತಿಯಲ್ಲಿ ತಂದಂತಹ ಖ್ಯಾತಿ, ಕೀರ್ತಿ ಧೈರ್ಯ ನಮ್ಮ ಸರ್ಕಾರಕ್ಕೆ ಈ ನಾಯಕರಿಗೆ ಸಲ್ಲಬೇಕು ಎನ್ನುವಂತಹ ಮಾತನ್ನು ಯಾರೂ ಮರೆಮಾಚುವುದಕ್ಕೆ ಸಾಧ್ಯವಿಲ್ಲ. ಇದನ್ನು ಸಮಾಜದಲ್ಲಿ ಸ್ವಾಗತಿಸಬೇಕಾಗುತ್ತದೆ ಎಂದು ಹೇಳಿ ಸನ್ಮಾನ್ಯ ರಾಮಯ್ಯನವರನ್ನು ಒಳಗೊಂಡು ಎಲ್ಲಾ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇಷ್ಟು ವರ್ಷವಾದರೂ ಏಕೆ ತರುವುದಕ್ಕೆ ಆಗಲಿಲ್ಲ. ಇದರಲ್ಲಿ ಅಲ್ಪಸ್ವಲ್ಪ

ಮಾರ್ಪಾಡು ಆಗಿರಬಹುದು. ಆದರೆ ಅದು ವಿಕೃತ - ರೂಪ ತಾಳುವುದಕ್ಕೆ ಸಾಧ್ಯವಿಲ್ಲ. ಇವತ್ತು ರಾಜ್ಯಾಂಗ 40 ಸಾರಿ ತಿದ್ದುಪಡಿಯಾಗಿದೆ. ಮಾರ್ಪಾಡು ಎಂದರೆ ಅದು ಸಂದರ್ಭಕ್ಕೆ ಅನುಗುಣವಾಗಿ ಮಾಡಬೇಕಾಗುತ್ತದೆ. ಯಾವುದೇ ಒಂದು ಕಾನೂನು ಖಾಯಂ ಅಲ್ಲ. ಇವತ್ತು ಇದು ಕಾಲಕಾಲಕ್ಕೆ ಅನುಗುಣವಾಗಿ ಜನಗಳ ಆಸೆ ಆಮಿಷಗಳಿಗೆ ಅನುಗುಣವಾಗಿ ಬದಲಾವಣೆ ತರಬೇಕು ಎನ್ನುವಂಥಾದ್ದು ಪ್ರಜಾಪ್ರಭುತ್ವದ ಒಂದು ವಿಶೇಷ ಲಕ್ಷಣ. ಆದರ ಒಂದು ಹಿನ್ನಲೆಯಲ್ಲಿ ಇವತ್ತು ನಾವು ಮಾರ್ಪಾಡನ್ನು 80 ರಿಂದ 73ರವರೆಗೆ ತಂದಿರಬಹುದು. ಇದು ಎಲ್ಲರಿಗೂ ಚೆನ್ನಾಗಿ ಗೊತ್ತಿದೆ.

ಒಟ್ಟಾರೆ ಇವತ್ತು ವಿರೋಧಪಕ್ಷದವರು ಬಹಳ ತಪ್ಪನ್ನು ಮಾಡಿದ್ದಾರೆ. ಚಿನ್ನಪ್ಪ ರೆಡ್ಡಿ ಆಯೋಗ ಇಷ್ಟು ವರ್ಷಗಳ ಕಾಲ ಇಬ್ಬರು ಮುಖ್ಯಮಂತ್ರಿಗಳಿಂದ ಮಾಡುವುದಕ್ಕಾಗದೆ ನೆನೆಗುದಿಗೆ ಬಿದ್ದಿತ್ತು. ಖಡಾಖಂಡಿತವಾಗಿ ನಾವು ಮಾಡಿಯೇ ಮಾಡುತ್ತೇವೆ ಎಂದು ವಿಧಾನಸಭೆಯಲ್ಲಿ ಭರವಸೆಯನ್ನು ಕೊಟ್ಟು ಇಂಪ್ಲಿಮೆಂಟ್ ಮಾಡಿದಂಥ ಧೈರ್ಯವಂತ ಮುಖ್ಯಮಂತ್ರಿಯನ್ನು ಅಧೈರ್ಯವಂತರು, ಪುಕ್ಕಲರು ಎಂದು ಹೇಳತಕ್ಕಂಥ ರಾಮಯ್ಯನವರ ಹೇಳಿಕೆಯನ್ನು ನಾನು ಖಡಾಖಂಡಿತವಾಗಿ ಖಂಡಿಸಬೇಕಾಗುತ್ತದೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಆದ್ದರಿಂದ ಮಾನ್ಯ ಅಧ್ಯಕ್ಷರೆ, ಈಗ ನಾವು ತಂದಿರತಕ್ಕಂಥ ವಿಧೇಯಕ ಸರ್ಕಾರದ ಆಜ್ಞೆಗೆ ಅನುಗುಣವಾಗಿ ತಂದಿರತಕ್ಕ ವಿಧೇಯಕ. ಮತ್ತು ಈ ಒಂದು ಸರ್ಕಾರದ ತೀರ್ಮಾನವನ್ನು ರಾಜ್ಯದ ಬಹುಪಾಲಿನ ಜನ ಇವತ್ತು ಸ್ವೀಕಾರ ಮಾಡಿದ್ದಾರೆ ಮತ್ತು ಸ್ವಾಗತಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಈ ವಿಧೇಯಕಕ್ಕೆ ಸದನ ಸರ್ವಾನುಮತದಿಂದ ತನ್ನ ಒಪ್ಪಿಗೆ ಕೊಡಬೇಕು ಎಂದು ಕೇಳುತ್ತೇನೆ. ಆದರಲ್ಲೂ ನಮ್ಮ ಸನ್ಮಾನ್ಯ ಸದಸ್ಯರಾದಂಥ ನಂಜುಂಡಸ್ವಾಮಿಯವರ ವಿಚಾರಪೂರಿತವಾದಂಥ ಚರ್ಚೆ ಸ್ವಲ್ಪ ಬೇರೆ ಸಂದರ್ಭದಲ್ಲಾದರೆ ಒಳ್ಳೆಯದು. ಏಕೆಂದರೆ ಅವರು ಹೇಳಿದ ರೀತಿಯಲ್ಲಿ ಇದಕ್ಕೆ ಅನೇಕ ರೀತಿಯ ಇತಿಹಾಸವಿದೆ. ಅವರು ಪ್ರಸ್ತಾಪ ಮಾಡತಕ್ಕ ಕಾಲದಲ್ಲಿ ಚಂಪಕಂ ಕೇಸಿನಿಂದ ಹಿಡಿದು ಇವೊತ್ತಿನವರೆವಿಗೆ ಇದಕ್ಕೆ ಒಂದು ಚರಿತ್ರೆಯೇ ಇದೆ ಎಂದುಹೇಳಿದ್ದಾರೆ. ನಾವೊಂದು ದೊಡ್ಡ ಹೋರಾಟವನ್ನು ರಾಷ್ಟ್ರದ ಮುಂದಿಡಬೇಕಾಗುತ್ತದೆ, ಏಕೆಂದರೆ ಒಂದು ಕಾಲದಲ್ಲಿ ಮೀಸಲಾತಿಯ ಪ್ರಶ್ನೆ ಕೇವಲ ಕೆಲವು ರಾಜ್ಯಗಳಿಗೆ ಸೀಮಿತವಾಗಿತ್ತು, ಇವತ್ತು ರಾಷ್ಟ್ರವ್ಯಾಪ್ತಿ ವ್ಯಾಪಿಸಿದೆ, ಇದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ರಾಷ್ಟ್ರಸಮಸ್ಯೆಯಾಗಿ ಇದು ಪರಿವರ್ತನೆಗೊಂಡಿದೆ. ಅಗತ್ಯ ಬಿದ್ದರೆ ರಾಜ್ಯಾಂಗವನ್ನು ತಿದ್ದುಪಡಿ ಮಾಡುವಂಥ ಸನ್ನಿವೇಶಕ್ಕೆ ನಾವು ಹೋಗಬೇಕಾಗುತ್ತದೆ, ರಾಷ್ಟ್ರದಲ್ಲಿ ಹಿಂದುಳಿದಿರತಕ್ಕ ಜನ ಜಾಗೃತರಾಗಿದ್ದಾರೆ, ಸಂಘಟಿತರಾಗಿದ್ದಾರೆ. ಪ್ರಜ್ಞೆ ಬಂದಿದೆ. ಇವತ್ತು ಜನರ ರಕ್ಷಣೆಗೆ ಯಾವ ಮನುಕುಲವು ಅಥವಾ ಮನುಸ್ಮೃತಿಯ ಬಾಧಕವೂ ಬರುವುದಿಲ್ಲ, ಅವರು ಇವತ್ತು ಎದ್ದುನಿಂತರೆ, ಪ್ರಯತ್ನಪಟ್ಟರೆ ರಾಷ್ಟ್ರದ ರಾಜ್ಯಾಂಗವನ್ನು ಕೂಡ ತಿದ್ದುಪಡಿ ಮಾಡಬೇಕಾದ ಅಗತ್ಯ ಇದೆ. ಅದಕ್ಕೋಸ್ಕರ ಇವತ್ತು ಕೇಂದ್ರಸರ್ಕಾರ ಹೇಗೆ ತಮಿಳುನಾಡಿನ ಸರ್ಕಾರಕ್ಕೆ ಮಾನ್ಯತೆ ಕೊಟ್ಟು ರಾಜ್ಯಾಂಗವನ್ನು ತಿದ್ದುಪಡಿ ಮಾಡಿದೆ, ಇವತ್ತು ನಮಗೂ ಕೂಡ ವಿಶ್ವಾಸ ಇದೆ. ನಾವು ರಾಷ್ಟ್ರದಲ್ಲಿ ಎರಡನೆಯ ರಾಜ್ಯವಾಗಿ ಇಂತಹ ಒಂದು ಪ್ರಮುಖವಾದ ವಿಧೇಯಕವನ್ನು ಇವತ್ತು ಶಾಸನಸಭೆಯಲ್ಲಿ ಇಟ್ಟಿದ್ದೇವೆ, ಚರ್ಚೆ ಮಾಡಿದ್ದೇವೆ. ನಮ್ಮ ಈ ವಿಧೇಯಕಕ್ಕೆ ಕೇಂದ್ರಸರ್ಕಾರ ಒಪ್ಪಿಗೆಯನ್ನು ಕೊಡುತ್ತದೆ ಎಂಬ ವಿಶ್ವಾಸವೂ ಕೂಡ ಇದೆ. ಆದ್ದರಿಂದ ಒಂದು ವೇಳೆ ಯಾವುದೇ ಕೋರ್ಟು ಈ ಒಂದು ವಿಧೇಯಕ ರಾಜ್ಯಾಂಗಕ್ಕೆ ವಿರೋಧವಾಗಿದೆ ಎಂದು ಕಂಡರೆ ಅದನ್ನು ತಳ್ಳಿಹಾಕುವುದಕ್ಕೆ ಕೇಂದ್ರ ಸರ್ಕಾರ ನಮ್ಮ ಪರವಾಗಿರುತ್ತದೆ. ಅಗತ್ಯ ಬಿದ್ದರೆ ರಾಜ್ಯಾಂಗವನ್ನು ಕೂಡ ತಿದ್ದುಪಡಿ ಮಾಡುತ್ತದೆ ಎಂಬ ವಿಶ್ವಾಸವನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಾ, ವಿಶೇಷವಾಗಿ ಕೇಂದ್ರಸರ್ಕಾರಕ್ಕೆ ಈ ಸದನದ ಮುಖಾಂತರ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಪ್ರಾರ್ಥನೆ ಮಾಡಿಕೊಳ್ಳುತ್ತೇವೆ ಕಳೆದ 40 ವರ್ಷಗಳಲ್ಲಿ ನಮಗೆ ಆಗಿರತಕ್ಕಂಥ ಶೋಷಣೆಯನ್ನು ಮುಕ್ತಾಯ

ಮಾಡಬೇಕು. ಇವತ್ತು ರಾಷ್ಟ್ರದಲ್ಲೇ ಒಂದು ಜಾಗೃತಿ ಮೂಡಿದೆ, ಆ ದೃಷ್ಟಿಯಿಂದ ರಾಜ್ಯಾಂಗ ಅಡ್ಡ ಬಂದರೂ ಅದನ್ನು ಬದಲಾವಣೆ ಮಾಡಬೇಕು, ಯಾವ ಕೋರ್ಟ್ ಬಂದರೂ ಕೂಡ ಅದನ್ನು ಅಡ್ಡ ತಳ್ಳಬೇಕು. ಈ ಹೋರಾಟಕ್ಕೆ ಇವತ್ತು ಚಾಲನೆ ಸಿಕ್ಕಿದೆ, ಇದಕ್ಕೆ ಯಶಸ್ವಿ ದೊರತೆ ದೊರೆಯುತ್ತದೆ, ನಮ್ಮ ಕಾನೂನಿಗೆ ಖಂಡಿತವಾಗಿಯೂ ರಾಷ್ಟ್ರದಲ್ಲಿ ಮಾನ್ಯತೆ ಸಿಗುತ್ತದೆ. ಆ ದೃಷ್ಟಿಯಿಂದ ಸದನ ಇದಕ್ಕೆ ಸರ್ವಾನುಮತದಿಂದ ಅಂಗೀಕಾರ ನೀಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರ ಮೂಲಕ ಸದನವನ್ನು ಪ್ರಾರ್ಥನೆ ಮಾಡಿಕೊಂಡು ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸಮಾಜ ಕಲ್ಯಾಣ ಖಾತೆಯ ಸಚಿವರು ಚರ್ಚೆಗೆ ಬಹಳ ವಿಸ್ತೃತವಾದ ಉತ್ತರವನ್ನು ಬಹಳ ಸಮಂಜಸವಾಗಿ ಕೊಟ್ಟಿದ್ದಾರೆ. ನಾನು ಇದೇ ವಿಚಾರವನ್ನು ಹೆಚ್ಚು ಅವಲಂಬಿಸಲಿಕ್ಕೆ ಅಪೇಕ್ಷೆ ಪಡುವುದಿಲ್ಲ ಮತ್ತು ಮಾನ್ಯ ಸಚಿವರು ಹೇಳಿದಂಥ ವಿಚಾರಗಳನ್ನು ನಾನು ಪುನರುಚ್ಚಾರ ಮಾಡುವುದಕ್ಕೆ ಕೂಡ ಅಪೇಕ್ಷೆ ಪಡುವುದಿಲ್ಲ. ಸೈದ್ಧಾಂತಿಕವಾಗಿ ಪರಿಧಿಯಲ್ಲಿ ಏನು ಒಂದು ಮೀಸಲಾತಿ ನೀತಿ ಇದೆ. ಅದನ್ನು ಇವತ್ತು ನಮ್ಮ ರಾಜ್ಯದಲ್ಲಿ ಜಾರಿಗೆ ತರಬೇಕು ಅದಕ್ಕೆ ಶಾಸನಾತ್ಮಕವಾದ ಬೆಂಬಲವನ್ನು ಕೊಡಬೇಕು ಮತ್ತು ಅದನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಬೇಕೆಂದು ಏನು ಇವತ್ತು ಈ ಸದನ ಹೊರಟಿದೆ, ಇದು ಬಹುಶಃ ನಮ್ಮ ಒಂದು ವಿಧಾನಮಂಡಲದ ಇತಿಹಾಸದಲ್ಲಿ ಶಾಶ್ವತವಾಗಿ ಉಳಿಯತಕ್ಕ ಒಂದು ಐತಿಹಾಸಿಕ ಘಟನೆ ಎಂದರೆ ಅದು ಅತಿಶಯೋಕ್ತಿಯಾಗಲಾರದು. ಆದರೆ ಬಹಳ ದುಃಖದ ವಿಚಾರವೆಂದರೆ ಇಂಥ ಒಂದು ಐತಿಹಾಸಿಕ ಘಟನೆಯನ್ನು ಇವತ್ತು ಸ್ವಾಗತ ಮಾಡಲಿಕ್ಕೆ, ಈ ವಿಚಾರದಲ್ಲಿ ಭಾಗವಹಿಸಲಿಕ್ಕೆ ನಮ್ಮ ಅಧಿಕೃತವಾದ ಒಂದು ವಿರೋಧ ಪಕ್ಷ ಜನತಾ ದಳ, ಮತ್ತು ಬಿಜೆಪಿ; ಇನ್ನು ಅದು ಪಕ್ಷ ಅಲ್ಲ ವೈಯಕ್ತಿಕವಾದ ಒಬ್ಬರಿಗೆ ಸೀಮಿತವಾದ ಮತ್ತೊಂದು ಗುಂಪು. ಅವರೂ ಕೂಡ ಭಾಷಣ ಮಾಡಿ ಸಭಾತ್ಯಾಗ ಮಾಡಿ ಹೋದರು. ಆದರೆ ಇತಿಹಾಸ ನಿಲ್ಲುವುದಿಲ್ಲ. That march of events can never be stopped. ಭಾಗವಹಿಸುವವವು ಅದರಲ್ಲಿ ಪಾಲುಗಾರರಾಗುತ್ತಾರೆ. ಈ ಐತಿಹಾಸಿಕ ಘಟನೆಯಲ್ಲಿ ಭಾಗವಹಿಸದೆ ಇದ್ದವರು ಪಾಲುಗಾರರಾಗುವುದಿಲ್ಲ. ಇವತ್ತು ಬಹಳ ಸಂತೋಷದ ವಿಚಾರವೆಂದರೆ, ಸರ್ವಶ್ರೀ ರಾಮಯ್ಯನವರು ಪ್ರೊ।। ನಂಜುಂಡಸ್ವಾಮಿಯವರು, ವಾಟಾಳ್ ನಾಗರಾಜು ಅವರು, ಭಕ್ತವತ್ಸಲಂ ಅವರು ಇಂಥ ಒಂದು ಐತಿಹಾಸಿಕ ಘಟನೆಯಲ್ಲಿ ಪಾಲುಗಾರರಾಗಿದ್ದಾರೆ. ಬಹುಶಃ ಮುಂದೆ ಬರೆಯತಕ್ಕ ಹಿಂದುಳಿದವರ ಇತಿಹಾಸದಲ್ಲಿ ಈ ರಾಜ್ಯದ, ಒಂದು ರಾಜ್ಯ ಮಾತ್ರವಲ್ಲ ಇಡೀ ರಾಷ್ಟ್ರದ ಒಂದು ಸಾಮಾಜಿಕ ಆಂದೋಳನದ ಒಂದು ಇತಿಹಾಸದಲ್ಲಿ ಬರೆಯಲ್ಪಡಬೇಕಾದ ಈ ಘಟನೆಯಲ್ಲಿ ತಮ್ಮ ಹೆಸರು ಕೂಡ ಸೇರುತ್ತದೆಂಬುದನ್ನು ನಾನು ಇವತ್ತು ಜ್ಞಾಪಿಸಿ ಮುಂದೆ ಕೆಲವು ಮಾತುಗಳನ್ನು ಹೇಳಬೇಕೆಂದು ಅಪೇಕ್ಷೆ ಪಡುತ್ತಿದ್ದೇನೆ. ಹಿಂದುಳಿದವರ ಒಂದು ಇತಿಹಾಸದಲ್ಲಿ ಕರ್ನಾಟಕಕ್ಕೆ ಒಂದು ವಿಶಿಷ್ಟವಾದ ಸ್ಥಾನ ಇದೆ. ಇದು ರಾಷ್ಟ್ರದ ಯಾವ ರಾಜ್ಯಗಳಿಗೆ ಕೂಡ ಇಂಥ ಒಂದು ವಿಶಿಷ್ಟವಾದ ಸ್ಥಾನ ಇಲ್ಲವೆಂದರೆ ಅದು ಅತಿಶಯೋಕ್ತಿ ಆಗಲಿಕ್ಕೆ ಇಲ್ಲ. ಏಕೆಂದರೆ ನಮ್ಮ ಹಿಂದುಳಿದ ವರ್ಗದವರ ಆಂದೋಳನ ಹಿಂದುಳಿದ ವರ್ಗದವರ ಮೀಸಲಾತಿಯ ಪ್ರಕ್ರಿಯೆ ಅದು 1918ರಿಂದ ಪ್ರಾರಂಭವಾಯಿತು.

ತಮಿಳ್ನಾಡಿನಲ್ಲಿ ಪೆರಿಯಾರ್ ಮೂವ್‌ಮೆಂಟ್‌ನಿಂದ ಪ್ರಾರಂಭವಾಗಿರಬಹುದು ಅಥವಾ ಅದಕ್ಕಿಂತ ಮೊದಲು ಪ್ರಾರಂಭವಾಗಿರಬಹುದು. ಆದರೆ ಕರ್ನಾಟಕದಲ್ಲಿ 1918ರಲ್ಲಿ ಜ. ಮಿಲ್ಲರ್ಸ್ ಕಮಿಟಿ ಎಂದು ಅಲ್ಲಿಂದ ಪ್ರಾರಂಭವಾಯಿತು. ಜ. ಮಿಲ್ಲರ್ಸ್ ಅವರು ಮೈಸೂರಿನ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದರು. ಅವರು ಒಂದು ವರದಿಯನ್ನು ಕೊಟ್ಟ ಮೇಲೆ ಅಧ್ಯಕ್ಷರೆ ಇವತ್ತು 75 ಪರ್ಸೆಂಟ್ 80 ಪರ್ಸೆಂಟ್ ಎಂದು ಹೇಳಬಹುದು. ಅಂದುಸಂಪ್ರದಾಯಗಳು ಜಾಸ್ತಿ ಇದ್ದ

ಸಮಯದಲ್ಲಿ ಪ್ರಗತಿಯ ಹೆಜ್ಜೆಗಳು ಮಸುಕಾಗಿರತಕ್ಕ ಸಂದರ್ಭದಲ್ಲಿ 75 ಪರ್ಸೆಂಟ್ ರಿಸರ್ವೇಷನ್‌ನ್ನು ಜ. ಮಿಲ್ಲರ್ಸ್‌ರ್ ಎಂಬ ಮುಖ್ಯ ನ್ಯಾಯಾಧೀಶರು ಮಾಡಿದರು. ಬಹುಶಃ ಅವರು ಮೂರ್ಖರಾಗಿದ್ದರು ಎಂದು ಅನೇಕ ಸ್ನೇಹಿತರು ತಮ್ಮ ಭಾಷಣದಲ್ಲಿ ಹೇಳುವುದಾದರೆ, ಅವರು ಮೂರ್ಖರಾಗಿದ್ದರೆ ನಾವು ಮೂರ್ಖರಾಗಿದ್ದೇವೆ. ಹಿಂದುಳಿದ ವರ್ಗದವರ ವಿಚಾರದಲ್ಲಿ ಯಾರು ಮೀಸಲಾತಿ ಮಾಡಿದ್ದಾರೆ ಅವರೆಲ್ಲರು ಮೂರ್ಖರು ಎಂದು ಹೇಳತಕ್ಕ ನಾಮಧೇಯಗಳನ್ನು ಇವತ್ತು ಹಾಕುವುದು ಇದ್ದರೆ ಬಹುಶಃ ಇತಿಹಾಸದ ಒಂದು ನಡವಳಿಕೆಯ ವಿರುದ್ಧ ನಡವಳಿಕೆಯ ಪ್ರವಾಹದ ವಿರುದ್ಧ ಈಜಾಡತಕ್ಕ ಬುದ್ಧಿವಂತರು ನಮ್ಮ ರಾಜ್ಯದಲ್ಲಿ ಇದ್ದಾರಲ್ಲ ಎಂದು ಒಂದು ರೀತಿ ನಮಗೆ ನಗಬೇಕೋ ಅಳಬೇಕೋ ಇವತ್ತು ಅರ್ಥವಾಗುತ್ತಿಲ್ಲ.

ಮಿಲ್ಲರ್ಸ್ ಕಮಿಟಿಯಲ್ಲಿ ಏನು ಒಂದು ಮೀಸಲಾತಿಯನ್ನು 75 ಪರ್ಸೆಂಟ್ ಮಾಡಿದರು. ಬ್ರಾಹ್ಮಣರು ಮತ್ತು ಆಂಗ್ಲೋ ಇಂಡಿಯನ್ ಬಿಟ್ಟು ಉಳಿದವರೆಲ್ಲಾ ಹಿಂದುಳಿದವರು ಎಂದು ಮಿಲ್ಲರ್ಸ್ ಕಮಿಟಿಯಲ್ಲಿ ವರದಿಯನ್ನು ಕೊಟ್ಟರು. ಅದನ್ನು ಅನುಷ್ಠಾನ ಮಾಡಿದರು. ಆಮೇಲೆ ನಾಗನಗೌಡ ಕಮಿಟಿ ಬಂತು. ನಾಗನಗೌಡ ಕಮಿಟಿಯಲ್ಲಿ 45 ಪರ್ಸೆಂಟ್ ಮಾತ್ರ ರಿಸರ್ವೇಷನ್ ಇತ್ತು 1963 ರಿಂದ 1977ರವರೆಗೆ. ವೃತ್ತಿಯನ್ನು ಹೊಂದಿಕೊಂಡು ನಮ್ಮ ಕರ್ನಾಟಕ ರಾಜ್ಯದಲ್ಲಿ ಮೀಸಲಾತಿಯನ್ನು ಮಾಡಿದರು. ಆ ಸಂದರ್ಭದಲ್ಲಿ ಬ್ರಾಹ್ಮಣರು, ಲಿಂಗಾಯಿತರು, ಒಕ್ಕಲಿಗರು ಅವರೆಲ್ಲಾ ಹಿಂದುಳಿದವರು ಎಂದು ಆಗಿತ್ತು. ಪ್ರೊಫೆಸರ್ ಸಾಹೇಬರೆ ಬ್ರಾಹ್ಮಣರನ್ನೂ ಸೇರಿಸಿದ್ದರು. ಆಮೇಲೆ ಹಾವನೂರ್ ಕಮಿಷನ್ ವರದಿ ಕರ್ನಾಟಕದಲ್ಲಿ ಜಾರಿಗೆ ಬಂತು. ಈ ಎಲ್ಲ ವಿದ್ಯಾಮಾನಗಳನ್ನು ನೋಡಿದರೆ ಅದ ನಾಗನಗೌಡ ಸಮಿತಿ ಇರಬಹುದು, ಸರ್ಕಾರ ಯಥಾವತ್ತಾಗಿ ಆಗಲೂ ಸ್ವೀಕಾರ ಮಾಡಲಿಲ್ಲ. 1963ರಲ್ಲಿ ನಾಗನಗೌಡರದ್ದು ಏನಾಯಿತು ? ಆಗ ಯಥಾವತ್ತಾಗಿ ವರದಿಯನ್ನು ಅನುಷ್ಠಾನ ಮಾಡಲಿಲ್ಲ. ಅದಕ್ಕೆ ಸಾಕಷ್ಟು ತಿದ್ದುಪಡಿ ಆಗಲೂ ಕೂಡ ಆಯಾ ಸರ್ಕಾರಗಳು ಮಾಡಿವೆ. ಹಾವನೂರು ಆಯೋಗದ ವರದಿ ಬಂದಾಗಲೂ ಕೂಡ ಆ ಆಯೋಗದ ಶಿಫಾರಸ್ಸುಗಳನ್ನು ಯಥಾವತ್ತಾಗಿ ಅನುಷ್ಠಾನ ಮಾಡಲಿಲ್ಲ. ಅದರಲ್ಲೂ ಕೂಡ ಸಾಕಷ್ಟು ತಿದ್ದುಪಡಿಗಳನ್ನು ಮಾಡಿ ಅನುಷ್ಠಾನ ಮಾಡಿದ್ದಾರೆ. ಆಮೇಲೆ ವೆಂಕಟಸ್ವಾಮಿ ಕಮಿಷನ್ ವರದಿ ಬಂತು. ವೆಂಕಟಸ್ವಾಮಿ ವರದಿ ಬಂದಿದ್ದು ತಮ್ಮ (ಶ್ರೀ ವೈ.ಕೆ. ರಾಮಯ್ಯನವರನ್ನು ಕುರಿತು) ಕಾಲದಲ್ಲಿ. ಆಗ ಬಹುಶಃ ತಾವು ಜನತಾ ಪಕ್ಷದಲ್ಲಿದ್ದೀರಿ ಎಂದು ಕಾಣುತ್ತದೆ. ಬಹುಶಃ ಈ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಯಾವುದಾದರೂ ಹಿಂದುಳಿದವರ ಆಯೋಗದವರ ಶಿಫಾರಸ್ಸುಗಳ ವರದಿಯನ್ನು ರದ್ದು ಮಾಡಿದಂಥ ಒಂದು ಕಪ್ಪು ದಿನ ಹಿಂದುಳಿದವರ ಇತಿಹಾಸದಲ್ಲಿ ಇದ್ದರೆ ಅದು ರಾಮಯ್ಯನವರು ಇದ್ದಂಥ ....

ಶ್ರೀ ವೈ.ಕೆ. ರಾಮಯ್ಯ:– ನಾನೇ ಹೇಳಿದ್ದೇನೆ ಸ್ವಾಮಿ ಆ ಮಾತನ್ನು. ಕೇಳಿ ತಿಮ್ಮಪ್ಪನವರನ್ನು. ಅವರು ಒಪ್ಪಿಕೊಂಡಿದ್ದಾರೆ ಕೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ:– ತಾವು ಎರಡೂವರೆ ಗಂಟೆ ಸಾಕಷ್ಟು ಮಾತನಾಡಿದ್ದೀರಿ. ದಯಮಾಡಿ ಬಿಡಿ. ಇವತ್ತು ಕರ್ನಾಟಕ ರಾಜ್ಯದಲ್ಲಿ 1918 ರಿಂದ 1994ರವರೆಗೆ ಎಷ್ಟು ವರ್ಷ ಆಯಿತು ? ಸುಮಾರು 75–76 ವರ್ಷಗಳು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಹಿಂದುಳಿದವರ ಆಯೋಗದ ಶಿಫಾರಸ್ಸುಗಳನ್ನು ತಿರಸ್ಕಾರ ಮಾಡಿದಂಥ, ಧೂಳೀಪಟ ಮಾಡಿದಂಥ, ಗಟಾರಕ್ಕೆ ಎಸೆದಂಥ ಒಂದು ಪಕ್ಷ, ಸರ್ಕಾರ ಈ ರಾಜ್ಯದಲ್ಲಿ ಇದ್ದರೆ ಅದು ಜನತಾದಳ ಪಕ್ಷದ ಸರ್ಕಾರ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:– ಈಗ ತಾವು ಹೇಳಿದ್ದುದು ಸರಿಹೋಯಿತು. ರಾಮಯ್ಯನವರಿಗೆ ಏತಕ್ಕೆ ಹೇಳುತ್ತೀರಿ ? ನಾನು ಕಳೆದ ಒಂದು ಅಧಿವೇಶನದಲ್ಲಿ ಹೇಳಿದೆ, ಒಬ್ಬ ವೈದಿಕ ಮುಖ್ಯಮಂತ್ರಿ

ಮಾಡಿದಂಥ ಒಂದು ಕಾನೂನು ಎಂದು. ಒಬ್ಬ ವೈಧಿಕ ಮುಖ್ಯಮಂತ್ರಿ ಮಾಡಿದ ಕಾನೂನು ಎಂದು ಹೇಳಿದರೂ ತಪ್ಪಾಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ:- ರಾಮಯ್ಯನವರಿಗೆ ಏತಕ್ಕೆ ಹೇಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:- ವೈಧಿಕ ಮುಖ್ಯಮಂತ್ರಿ ಮಾಡಿದ್ದರೆ ....

ಶ್ರೀ ವೈ.ಕೆ. ರಾಮಯ್ಯ:- ನಾನು ಇನ್ನೂ ಮುಂದೆ ಹೋಗಿ ಹೇಳಿದ್ದೆ. ನಮ್ಮ ಹಿತಾಸಕ್ತಿಗಳೇ ಅದಕ್ಕೆ ಅಡ್ಡಿ ಬಂದವು ಎಂದು ಹೇಳಿದ್ದೆ. ಮಂಡ್ಯದಿಂದ ಶುರುವಾಯಿತು ವಿರೋಧ ಎಂದು ಹೇಳಿದ್ದೆ. ಸಮಾಧಾನ ಆಯಿತೇ ?

ಶ್ರೀ ಎಂ. ವೀರಪ್ಪ ಮೊಯಿಲಿ:- ಆ ವರದಿಯನ್ನು ರದ್ದು ಮಾಡುವಂಥ ಪಾಪದ ಕೆಲಸ ಮಾಡಿದಂಥ ಒಬ್ಬ ವ್ಯಕ್ತಿ ನಮ್ಮ ಪಕ್ಷದಲ್ಲಿ ಕೂಡ ಇದ್ದರು. ಅವರೇ ಸನ್ಮಾನ್ಯ ಬಂಗಾರಪ್ಪನವರು. ವೆಂಕಟಸ್ವಾಮಿ ವರದಿಯನ್ನು ರದ್ದು ಮಾಡಲಿಕ್ಕೆ, ಗಟಾರಕ್ಕೆ ಎಸೆಯಲಿಕ್ಕೆ ಸಕ್ರೀಯವಾದ ಒಬ್ಬ ಪಾತ್ರಧಾರಿ ಇದ್ದರೆ ಈ ಕರ್ನಾಟಕ ರಾಜ್ಯದ 75 ವರ್ಷದ ಇತಿಹಾಸದಲ್ಲಿ, ಇವತ್ತು ಹಿಂದುಳಿದ ವರ್ಗದವರ ಬಗ್ಗೆ ಮೊಸಳೆ ಕಣ್ಣೀರು ಸುರಿಸತಕ್ಕ ಮಾಜಿ ಮುಖ್ಯಮಂತ್ರಿಗಳಾದವರು ನಿನ್ನೆ ಮಾತನಾಡಿದಂಥವರು. ಇದು ಕರ್ನಾಟಕ ರಾಜ್ಯದ ಜನರಿಗೆ, ಹಿಂದುಳಿದ ವರ್ಗದವರಿಗೆ, ಅಲ್ಪಸಂಖ್ಯಾತರಿಗೆ ಸ್ಪಷ್ಟವಾದ ಪರಿಚಯ ಬೇಕಾಗುತ್ತದೆ. ಏಕೆಂದರೆ ನಮಗ ಅನೇಕರಿಗೆ ಏನು ತಿಳಿದುಕೊಳ್ಳುತ್ತೇವೆ ಎಂದರೆ ಒಮ್ಮೆ ನಾವು ಮಾತನಾಡಿದಂಥ ಮಾತು ಮರುದಿವಸ ಮರೆತುಬಿಡುತ್ತಾರೆ. ಇವತ್ತು ನಾನು ಮರೆಯುವುದಲ್ಲ. ಬೆಳಗ್ಗೆ ಮಾತನಾಡಿದ್ದು ಮಧ್ಯಾಹ್ನ ಮರೆಯುವುದು. ಮಧ್ಯಾಹ್ನ ಮಾತನಾಡಿದ್ದು ಸಂಜೆ ಮರೆಯುವುದು ನಾನಲ್ಲ. ಸನ್ಮಾನ್ಯ ಅಧ್ಯಕ್ಷರೆ, ನಿನ್ನೆ ಮಾತನಾಡಿದಂಥ ಮಹಾ ಮುಖಂಡರು ಏನಿದ್ದರು ಅವರು ವೆಂಕಟಸ್ವಾಮಿ ರಿಪೋರ್ಟನ್ನು ರದ್ದುಮಾಡಲಿಕ್ಕೆ ನಡೆದ ಚಳುವಳಿಯಲ್ಲಿ ಕಬ್ಬನ್‌ಪಾರ್ಕ್‌ನಲ್ಲಿ ಭಾಗವಹಿಸಿದ್ದರು.

ಇದೇ ಕಬ್ಬನ್‌ಪಾರ್ಕ್‌ನಲ್ಲಿ ಅನಂತರ ಇದೇ ಮಹನೀಯರು, 1986ರಲ್ಲಿ ರಾಮಕೃಷ್ಣ ಹೆಗಡೆಯವರು ಇದೇ ರಿಸರ್ವೇಷನ್ ಪಾಲಿಸಿ ಜಾರಿ ಮಾಡಿದಾಗ ಏನು ಹೇಳಿದರು. ಹಾಗೂ ನಿನ್ನೆ ಏನು ಹೇಳಿದರು, 1986ರ ವರದಿಯ ಬಗ್ಗೆ. ಇದನ್ನು ನಾವು ಜನತೆಗೆ ನೆನಪು ಮಾಡಿ ಕೊಡಬೇಕು. ಏಕೆಂದರೆ 1986ರಲ್ಲಿ ಹೊಸ ನೀತಿಯನ್ನು ಯಾವುದೇ ಆಧಾರ ಇಲ್ಲದೇ ಜಾರಿಗೆ ತಂದಾಗ ಇವರು ಏನು ಹೇಳಿದರು ಎಂದರೆ, ರಾಮಕೃಷ್ಣ ಹೆಗ್ಡೆಯವರು he has hetrayed the cause of backwardclasses, ಎಂದು ಹೇಳಿದರು, 1986ರ ಮೀಸಲಾತಿ ನೀತಿ ಏನು ಇದೆ ಅದರ ಬಗ್ಗೆ ಅವರ ಶಬ್ದದಲ್ಲೇ ನಾನು ಹೇಳುತ್ತೇನೆ. ಅದನ್ನು ಟೀಕೆ ಮಾಡಿದರು 1986ರಲ್ಲಿ. ನಿನ್ನೆ 1986ರ ಮೀಸಲಾತಿ ನೀತಿಯೇ ಸರಿಯಿತ್ತು, ಅದನ್ನೇ ನೀವು ಮುಂದುವರಿಸಿಕೊಂಡು ಹೋಗಬೇಕಾಗಿತ್ತು ಎಂಬ ಮಾತನ್ನು ಹೇಳಿದರೆ ಇವತ್ತು ಎರಡು ನಾಲಿಗೆ ಯಾರಿಗೆ ಇದೆ ? ಇವತ್ತು ಡಬಲ್ ಸ್ಟಾಂಡರ್ಡ್ ಯಾರು ಮಾಡುತ್ತಿದ್ದಾರೆ ? ನಿನ್ನೆ ಮಾತನಾಡಿದ ಮಹನೀಯರ ಬಗ್ಗೆ ಹೇಳುತ್ತಿದ್ದೇನೆ. I will give that statement, ಆ ಸ್ಟೇಟ್‌ಮೆಂಟನ್ನು ನಾನು ಕೊಡುತ್ತೇನೆ. ನನ್ನ ಹತ್ತಿರ ಅದು ಇದೆ. ಆದ್ದರಿಂದ ಇವತ್ತು ಯಾರು ಡಬಲ್ ಸ್ಟ್ಯಾಂಡರ್ಡ್ ಉಪಯೋಗ ಮಾಡುತ್ತಿದ್ದಾರೆ ? ಏಕೆಂದರೆ ಇದು ರಾಜಕೀಯಕ್ಕೆ ಅವರಿಗೆ ಅನುಕೂಲ ಆಗುತ್ತದೆ. ನನಗೆ ಗೊತ್ತಿದೆ. ರಾಜಕೀಯಕ್ಕೆ ಅನುಕೂಲ ಆಗುವುದು ಇದ್ದರೆ, ತನ್ನ ಸ್ವಾರ್ಥಕ್ಕೆ ಅನುಕೂಲ ಆಗುವುದು ಇದ್ದರೆ ನಾವು ಎಂತಹ ಸಂದರ್ಭದಲ್ಲಿ ಏನು ಮಾಡುತ್ತೇವೆ ಎನ್ನುವುದಕ್ಕೆ ತಾವು ಒಂದು ಕೋತಿಯ ಕತೆಯನ್ನು ಕೇಳಿರಬಹುದು. ನೆರೆ ಬಂದಾಗ ಆದಷ್ಟು ಕೋತಿ ತನ್ನ ಮರಿಯನ್ನು ತಲೆಯ ಮೇಲೆ ಇಟ್ಟುಕೊಂಡಿರುತ್ತಂತೆ ಮತ್ತೂ ನೀರು ಮೇಲೆ ಮೇಲೆ ಬಂದಾಗ ಕೋತಿ ತನ್ನ ಮರಿಯನ್ನು ಕೆಳಗಡೆ ಇಟ್ಟು ತಾನು ಮೇಲೆ ನಿಂತು ಪಾರಾದಂತಹ

ಕಥೆ ಇವತ್ತು ನಮಗೆ ನೆನಪು ಆಗುತ್ತಾ ಇದೆ. ಆದ್ದರಿಂದ ಅನುಕೂಲಕ್ಕಾಗಿ, ಸಂದರ್ಭ ಬಂದಾಗ ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ ಹಿತಾಸಕ್ತಿಯನ್ನುಬಲಿ ಕೊಟ್ಟು, ಆ ಬಲಿಗಂಬದ ಮೇಲೆ ತನ್ನ ಅಧಿಕಾರ, ರಾಜಕೀಯವನ್ನು ಮಾಡತಕ್ಕ ಮೀರ್‌ಸಾಧಕನಂಥ ಜನ ಕರ್ನಾಟಕ ರಾಜ್ಯದಲ್ಲಿ ಈಗಲೂ ಕೂಡ ಅಂತಹ ರಾಜಕಾರಣಿಗಳು ಇದ್ದಾರೆ. ಅದು ವಸ್ತುಸ್ಥಿತಿ ಇರತಕ್ಕಂತಹದ್ದು. ಜನತಾ ದಳದ ಮುಖಂಡರು ಬಹಳ ಮಾತನಾಡುತ್ತಾರೆ. ಬಂಗಾರಪ್ಪನವರದ್ದು ಸ್ಟೇಟ್‌ಮೆಂಟ್ ಇಲ್ಲೇ ಇದೆ. ಅಕ್ಟೋಬರ್ 7, 1986. 'Cabinet decision is a betrayal of Backward classes. In city he said, Government has completely failed to ensure social justice by depriving the benefits of reservation granted by Devaraj Urs under the guide of rejecting the report'.....

ಒಂದು ಕಡೆಯಲ್ಲಿ ರಿಜೆಕ್ಟ್ ಮಾಡಿ ಎಂದು ಹೇಳಿ ಚಳುವಳಿ ಮಾಡಿದರು. ರಿಸರ್ವೇಷನ್ ಪಾಲಿಸಿ 1986ರಲ್ಲಿ ಅದೇ ಜನತಾ ದಳದವರು ಮಾಡಿದ ಮೇಲೆ ಅದು ಬಿಟ್ರೇಯಲ್ ಎಂದು ಹೇಳಿದರು. ನಿನ್ನೆ ಭಾಷಣದಲ್ಲಿ ಏನು ಹೇಳಿದರು ? ನಿನ್ನೆಯ ಭಾಷಣದಲ್ಲಿ 86ರ ಮೀಸಲಾತಿ ಸಮಂಜಸವಾಗಿತ್ತು, ಅದರಲ್ಲಿ ಒಂದು ಸಾಮಾಜಿಕ ನೀತಿ ಹಾಗೂ ನ್ಯಾಯ ಇತ್ತು ಎಂದು ಭಾಷಣ ಮಾಡಿದರು. ನಾಳೆ ಏನು ಭಾಷಣ ಮಾಡುತ್ತಾರೋ ಗೊತ್ತಿಲ್ಲ. 1986ರ ನೀತಿ ಬಗ್ಗೆ ಅಷ್ಟೇ ಅಲ್ಲ ನನ್ನ ನೀತಿ ಬಗ್ಗೆಯೂ ಕೂಡ ಎಡಿಟೋರಿಯಲ್ಸ್ ಇರಬಹುದು. ಪ್ರತಿಕ್ರಿಯೆಗಳು ಇರಬಹುದು. 1986ರಲ್ಲಿ ಯಾವುದೇ ಒಂದು ಆಯೋಗದ ಆಧಾರವಿಲ್ಲದೇ, ಕರ್ನಾಟಕ ರಾಜ್ಯದಲ್ಲಿ ಒಂದು ಮೀಸಲಾತಿಯನ್ನು ತಂದಂತಹ ಒಂದು ಬೇಜಾವಾಬ್ದಾರಿ ಪಕ್ಷ ಈ ರಾಜ್ಯದಲ್ಲಿ ಇದ್ದರೆ ಅದು ಜನತಾದಳ ಸರ್ಕಾರ. ಕರ್ನಾಟಕ ರಾಜ್ಯದಲ್ಲಿ ಯಾವುದೇ ಆಧಾರ ಇಲ್ಲದೆ ಮೀಸಲಾತಿ ಕರ್ನಾಟಕ ರಾಜ್ಯದಲ್ಲಿ ಬೇರೆ ಸಮಯದಲ್ಲಿ ಬರಲಿಲ್ಲ. ಬೇರೆ ಯಾವ ರಾಜ್ಯಗಳಲ್ಲಿ ಕೂಡ ಈ ರೀತಿಯ ಪರಿಸ್ಥಿತಿ ಯಾವಾಗಲೂ ಬಂದಿದ್ದು ಇಲ್ಲ. 1986ರ ಆಜ್ಞೆಗೆ ಯಾವುದೇ ಆಧಾರ ಇಲ್ಲ. ಅನುಕೂಲದ ಶಾಸ್ತ್ರವೇ ಆಧಾರ. ಸಮಯಸಾಧಕತನವೇ ಆಧಾರ. ರಾಜಕೀಯದಲ್ಲಿ ಕುರ್ಚಿಯನ್ನು ಇವತ್ತು ಉಳಿಸಿಕೊಳ್ಳುವುದೇ ಆಧಾರ. ಇವತ್ತು ಆ ಪ್ರಕ್ರಿಯೆಯನ್ನು ನಾವು ಮಾಡಲಿಲ್ಲ. ಆಗ ಅನೇಕ ಎಡಿಟೋರಿಯಲ್ಸ್ ಬಂತು. ರಾಮಕೃಷ್ಣ ಹೆಗ್ಡೆಯವರ ಏನು ನೀತಿ ಇದೆ, backward march. It was not a forward march 'Karnataka achieved ultimate or its nearest approximacy in social progress. It has declared 92% of the population as backward on criterion or another. It was a backward march..... ಇವರು ನಮಗೆ ಪಾಠ ಹೇಳಿಕೊಡುತ್ತಾರೆ, ಏನೋ ಪ್ರಭಾವಕ್ಕೆ ಒತ್ತಡಕ್ಕೆ ಒಳಗಾಗಿದ್ದಾರೆ ಎಂದು ಹೇಳಿ. This is on 9–10–86. 'Buckling under pressure', This has appeared in 'Hindu'. Virtual rejection of Venkataswamy Commision Report – that set of virbulent controversy created has not only decided against scaling down of reservation in professional, teaching institutions in public reservation but has chosen to retain vokkaligas list in backwardclasses., Then Indian Express dated 9.10.86, 'Mr. Hegde has taken retrograde step. He has takenretrograde step on the question of reservation for specific cause. Then, 'Hegde Surrenders'. Times of India, dt. 8.10.86., 'Hegde surrenders face with the contravening demands. Hegde climb down through fresh controversy'. 9.10.86, worse than capitulation. Rejection of the Venkataswamy commission Report. This is new Star dt. 10.10.1986.,

'Reservation for the backwardclassesand enlargement label of backwardclasses to 92%.'

ಆದುದರಿಂದ, ಇವತ್ತು ಯಾವುದೇ ಒಂದು ಮಾನದಂಡವನ್ನು ನೋಡಿದರೂ ಕೂಡ 1986ರ ಆಜ್ಞೆ ಅದು ನಾವು ಅನುಷ್ಠಾನ ಮಾಡತಕ್ಕ, ಸಾಮಾಜಿಕ ನ್ಯಾಯವನ್ನು ಕೊಡತಕ್ಕ ರಿಸರ್ವೇಷನ್ ಆರ್ಡರ್ ಅಲ್ಲ. ಆದರೆ ಇದರ ಬಗ್ಗೆ ಯಾವತ್ತೂ ಕೂಡ ಅದರ ಪರವಾಗಿ ಯಾರು ಸಪೋರ್ಟ್ ಮಾಡುತ್ತಾರೆ ಅವರಲ್ಲಿ ನಿಜವಾಗಿಯೂ ಹಿಂದುಳಿದ ವರ್ಗದವರ ಬಗ್ಗೆ ಸಹಾನುಭೂತಿ ಅಥವಾ ಸೈದ್ಧಾಂತಿಕವಾದ ಈ ಒಂದು ನೆಲೆಯಲ್ಲಿ ಅವರಿಗೆ ಯಾವುದೇ ರೀತಿಯಾದ ತಳಹದಿ ಇಲ್ಲ. ಅವರ ಹಾಲೋನೆಸ್‌ನ್ನು, ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ಅವರಲ್ಲಿ ಇರತಕ್ಕ ಶೂನ್ಯತೆಯನ್ನು ಇವತ್ತು ಇದು ಸ್ಪಷ್ಟವಾಗಿ ಎತ್ತಿ ತೋರಿಸುತ್ತದೆ. ಹೌದು ನನಗೆ ಗೊತ್ತಿತ್ತು. ಇಂತಹ ಒಂದು ಅನುಕೂಲ ಶಾಸ್ತ್ರಕ್ಕಾಗಿ 2 ವರ್ಷಗಳ ಕಾಲ ಏನು ನಿನ್ನೆ ಮಾತನಾಡಿದ ಮಹನೀಯರು, ಮಾಜಿ ಮುಖ್ಯಮಂತ್ರಿಗಳು ಅಲ್ಲಿ ಭಾಷಣವನ್ನು ಕೊಟ್ಟರು ಅವರ ಅಧ್ಯಕ್ಷತೆಯಲ್ಲೇ ಒಂದು ಕ್ಯಾಬಿನೆಟ್ ಸಬ್ ಕಮಿಟಿ ಆಗಿತ್ತು. ಇದೆಲ್ಲಾ ರೆಕಾರ್ಡ್ಸ್ ಇದೆ. ಎಲ್ಲಾ ಮರೆಯುತ್ತಾರೆ ಎಂದು ತಿಳಿದುಕೊಂಡಿದ್ದಾರೆ. ವೀರೇಂದ್ರ ಪಾಟೀಲರು ಕಡಿಮೆ ಸಮಯ ಮುಖ್ಯಮಂತ್ರಿಗಳಾಗಿದ್ದರು. ನಾನು ಅವರನ್ನು ದೂರುವುದಕ್ಕೆ ಹೋಗುವುದಿಲ್ಲ. 8.7.90ರಲ್ಲಿ ಒಂದು ಮೀಟಿಂಗ್ ಮಾಡಿದರು. ಬಂಗಾರಪ್ಪನವರು ಇರುವಾಗ ವರ್ಷಕ್ಕೆ ಒಂದು ಮೀಟಿಂಗ್ ಮಾಡಿದರು. 27.8.90ಕ್ಕೆ ಒಂದು ಮೀಟಿಂಗ್ 19.10.91ಕ್ಕೆ ಒಂದು ಮೀಟಿಂಗ್ 8.4.92ಕ್ಕೆ ಮತ್ತೊಂದು ಮೀಟಿಂಗ್. ಅಲ್ಲಿ ಯಾವ ಪ್ರೊಸೀಡಿಂಗ್ಸ್ ಕೂಡ ಆಗಿಲ್ಲ. ಯಾವ ಮಿನಿಟ್ಸ್ ಕೂಟ ಆ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ, ಸಾಧನೆ ಆ ಮಿಟಿಂಗ್‌ದ್ದು it lead to nothing. ಆದದ್ದು ಏನೂ ಇಲ್ಲ. ವರ್ಷಕ್ಕೆ 1 ಮೀಟಿಂಗ್ ಪ್ರಕಾರ 3 ಮೀಟಿಂಗ್ ಮಾಡಿದರು.

ವರ್ಷಕ್ಕೆ 1 ಮೀಟಿಂಗ್ ಹರಕೆ ಸಲ್ಲಿಸಲಿಕ್ಕೆ ಮಾಡಿದರು cause of the backwardclasses, just a lip sympathy. ಇದು ಲಿಪ್ಸ್ ಸಿಂಪತಿ ಅಷ್ಟೇ. ನಿಜವಾದಂತಹ, ಪ್ರಾಮಾಣಿಕವಾದಂತಹ ಒಂದು ಹಿಂದುಳಿದ ವರ್ಗದವರ ಬಗ್ಗೆ, ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಬಗ್ಗೆ ಮತ್ತು ಅಲ್ಪಸಂಖ್ಯಾತರ ಬಗ್ಗೆ ಅವರಿಗೆ ಆಸಕ್ತಿ ಎಷ್ಟು ಇತ್ತು ಎಂಬುದನ್ನು ಬಹುಶಃ ಈ ಅಂಕಿ ಸಂಖ್ಯೆ ನೋಡಿದರೆ ಜನರು ತಿಳಿದುಕೊಳ್ಳುತ್ತಾರೆ. ನಾನು ಮುಖ್ಯಮಂತ್ರಿ ಆದ ಮೇಲೆ ನನ್ನ ಮೀಟಿಂಗ್ಸ್ ನೋಡಿ. 11.5.93, 10.9.93, 22.12.93, 19.4.94, ಹೆಜ್ಜೆಹೆಜ್ಜೆಯಲ್ಲಿ ನಾವು ಮೀಟಿಂಗ್ಸ್ ಮಾಡಿದ್ದೇವೆ. ಈ ಬಗ್ಗೆ ಸನ್ಮಾನ್ಯ ಹಿರಿಯ ಸಚಿವರಾದಂತಹ ರಂಗನಾಥ್ ಅವರೂ ಸಹ ಹೇಳಿದರು. ಮೀಟಿಂಗ್ ಮಾಡುವಾಗ ನಾವು ಚರ್ಚೆ ಮಾಡಿದ್ದೇವೆ. ಏಕೆಂದರೆ ಆಗತಾನೇ ಮಂಡಲ ಆಯೋಗದ ಶಿಫಾರಸ್ಸನ್ನು ಕೇಂದ್ರ ಸರ್ಕಾರ ಅನುಷ್ಠಾನಕ್ಕೆ ತಂದಿತ್ತು; ನಾವು ಮೀಟಿಂಗ್‌ಗಳನ್ನು ಮಾಡತಕ್ಕ ಸಮಯದಲ್ಲಿ ಅದರ ಮೇಲೆ ಸುಪ್ರೀಂ ಕೋರ್ಟಿಗೆ ಹೋದ ಮೇಲೆ ಇಂದಿರಾಸಹಾನಿ ಜಡ್ಜಮೆಂಟ್ ಅದು ಇನ್ನೊಂದು ಅದು ಡಿಸೆಂಬರ್ 93ರಲ್ಲಿ ಬಂತು. ಡಿಸೆಂಬರ್ 93ರಲ್ಲಿ ಬಂದ ಮೇಲೆ ನಾವು ಚುರುಕಾಗಿ ವರದಿಗೆ ಅಂತಿಮ ಸ್ವರೂಪವನ್ನು ಕೊಟ್ಟು ತಕ್ಷಣ ನಾವು ಅನುಷ್ಠಾನ ಮಾಡಿದ್ದೇವೆ. ಯಾವುದೇ ಒಂದು ದಿನವಾಗಲೀ, ತಿಂಗಳಾಗಲೀ, ನಾವು ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ ಮತ್ತು ಪರಿಶಿಷ್ಟ ವರ್ಗ ಮತ್ತು ಜನಾಂಗದವರ ವಿಚಾರದಲ್ಲಿ ಚಿಂತನೆ ಮಾಡದೆ ನಮ್ಮ ಸರ್ಕಾರ ಎಂದೂ ಬಿಟ್ಟಿಲ್ಲ. We have conceded for it..... ಅದರ ಬಗ್ಗೆ ಗಂಭೀರವಾದಂಥ ಚಿಂತನೆಯನ್ನು ನಡೆಸಿದ್ದೇವೆ, ಪ್ರಕ್ರಿಯೆಯನ್ನು ಮಾಡಿದ್ದೇವೆ. ಅದನ್ನು ಅನುಷ್ಠಾನ ಮಾಡತಕ್ಕಂಥ ದಿಸೆಯಲ್ಲಿ ಪ್ರಾಮಾಣಿಕವಾದಂಥ ಅನುಷ್ಠಾನವನ್ನು ಇವತ್ತು ನಾವು ಮಾಡಿದ್ದೇವೆ. ಇದು ಸತ್ಯದರ್ಶನ. ಹಿಂದುಳಿದ ವರ್ಗದವರ ಬಗ್ಗೆ ನಾವು ಏನು ಮಾಡಿದ್ದೇವೆ, ಮತ್ತೊಬ್ಬರು ಏನು ಮಾಡಿದ್ದಾರೆ, ಅದು ಮುಖ್ಯ. ಈಗ ಯಾವ ರೀತಿಯಲ್ಲಿ ಚಿನ್ನಪ್ಪರೆಡ್ಡಿಯವರ ವರದಿಯ ಅನುಷ್ಠಾನಕ್ಕೆ ಸಿಕ್ಕಿತು, ಎಂಬುದು ಇವತ್ತು

ಬಹಳ ಮುಖ್ಯ. ಏಕೆಂದರೆ ಈಗ ಹೇಳಬಹುದು, ಚುನಾವಣೆ ಬರುತ್ತಾ ಇದೆ ಆದ್ದರಿಂದ ಇವತ್ತು ಆಳುವ ಪಕ್ಷಕ್ಕೆ ಏನಾದರೂ ಮಸಿ ಬಳಿಯಬೇಕು ಎಂಬ ವಿಚಾರ ಒಂದು ಕಡೆ. ಆದರೆ ಹಿಂದೆ ಚಿನ್ನಪ್ಪರೆಡ್ಡಿ ವರದಿ ಜಾರಿಗೆ ಜನತಾದಳ, ಬಿಜೆಪಿಗೆ ಸ್ವಾಗತ ಎಂದು ಇದೆ. ಹಾಗಾದರೆ ಈಗೇಕೆ ಬಾಯಕಾಟ್ ಮಾಡುತ್ತೀರಿ? ಈಗ ಏಕೆ ಬಹಿಷ್ಕಾರ ಮಾಡುತ್ತೀರಿ? ಇದೇನು ಏಪ್ರಿಲ್‌ನಲ್ಲಿ ತಂದಿದ್ದೇವೆ, ಈಗ 73 ಪರ್ಸೆಂಟ್ ಜಾರಿಗೆ ಈ ಮಸೂದೆಯನ್ನು ತರುತ್ತಿದ್ದೇವೆ, ನೀವು ಸ್ವಾಗತ ಮಾಡಿದ್ದೀರಿ, ದೇಶಪಾಂಡೆಯವರು ಸ್ವಾಗತ ಮಾಡಿದ್ದಾರೆ. ಚಿನ್ನಪ್ಪರೆಡ್ಡಿ ವರದಿಯನ್ನು ಜಾರಿಗೊಳಿಸುವ ರಾಜ್ಯಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದ್ದಾರೆ. ಜನತಾದಳ ಮತ್ತು ಬಿ.ಜೆ.ಪಿಗಳು ಎಂಟು ಹೆಕ್ಟೇರ್ ನೀರಾವರಿ ಅಥವಾ ಅದಕ್ಕೆ ಸರಿಸಮಾನವಾದ ಮಳೆಯಾಧರಿತ ಭೂಮಿಯನ್ನು ಹೊಂದಿದ ರೈತರಿಗೆ ಮೀಸಲಾತಿಯನ್ನು ನಿರಾಕರಿಸುವ ನಿಬಂಧನೆಯನ್ನು ರದ್ದು ಮಾಡಲು ಒತ್ತಾಯ ಮಾಡಿದ್ದಾರೆ. ಅದಕ್ಕೂ ಕೂಡ ಇವತ್ತು ನಾವು We are so much responsive, ಇವತ್ತು ಜನತೆಯ ಬೇಡಿಕೆಗಳಿಗೆ ನಾವು ಎಷ್ಟು ಸ್ಪಂದನ ಕೊಡುತ್ತಿದ್ದೇವೆ ಎಂದರೆ, ಅದನ್ನು ತಿದ್ದುಪಡಿ ಮಾಡಿದ್ದೇವೆ.

"ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಅನುಷ್ಠಾನಗೊಳಿಸುವ ಸರ್ಕಾರದ ತೀರ್ಮಾನವನ್ನು ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಆರ್.ವಿ. ದೇಶಪಾಂಡೆಯವರು ಸ್ವಾಗತಿಸಿ ಇದು ಜನತಾದಳಕ್ಕೆ ಸಂದ ಜಯ ಎಂದಿದ್ದಾರೆ....... ಇವತ್ತು ಏಕೆ ಪ್ಲೇಟ್ ಬದಲಾವಣೆ ಮಾಡಿದ್ದೀರಿ? ಏಕೆಂದರೆ ಇದು ಕಾಂಗ್ರೆಸ್‌ಗೆ ಸಲ್ಲುವಂಥ ಜಯ, ಆದ್ದರಿಂದ ಇದನ್ನು ಅವರು ವಿರೋಧ ಮಾಡುತ್ತಿದ್ದಾರೆ. ಎರಡೂ ಪ್ಲೇಟ್‌ಗಳು ಇವರ ಹತ್ತಿರವೇ ಇರುವುದು. ಮೊದಲನೆಯ ಒಂದು ಪ್ಲೇಟ್‌ನ ಕೆಳಗೆ ಇನ್ನೊಂದು ಪ್ಲೇಟು. ಆ ಮಾಜಿ ಮುಖ್ಯಮಂತ್ರಿಗಳಂತೂ ಅವರಿಗೆ ಹಿಂದುಳಿದ ವರ್ಗಗಳ ಬಗ್ಗೆ ಸೆನ್ಸಿಟಿವಿಟಿಯೇ ಇಲ್ಲ. ಆ ಸ್ಪಂದನ ಕೊಡತಕ್ಕಂಥ, ಆ ಹೃದಯಸ್ಪಂದನ ಇಲ್ಲದ, ಹಿಂದುಳಿದವರ್ಗಗಳ ಬಗ್ಗೆ ತುಡಿಯತಕ್ಕಂಥ ಹೃದಯಶೂನ್ಯತೆಯನ್ನು ಅವರು ನಿನ್ನೆಯ ತಮ್ಮ ಭಾಷಣದಲ್ಲಿ ತೋರಿಸಿಕೊಟ್ಟಿದ್ದಾರೆ. ಈ ಹೃದಯಶೂನ್ಯತೆ ಇಲ್ಲದ್ದರಿಂದ ಹಿಂದುಳಿದ ವರ್ಗಗಳ ಬಗ್ಗೆ ಅವರು ಆವಾಗಲೂ ಸ್ಪಂದಿಸಲಿಲ್ಲ. ಆವಾಗಲೂ ಕೂಡ ಸ್ಪಂದನ ಮಾಡತಕ್ಕಂಥ ಶಕ್ತಿ, ಚೈತನ್ಯ ಆ ಕಡೆಯಲ್ಲಿ ಉಳಿದಿಲ್ಲ. ಈಗ ಅದನ್ನು ಹೇಗೆ ನಿರೀಕ್ಷೆ ಮಾಡುತ್ತೀರಿ? ಆದ್ದರಿಂದ ಇವತ್ತು ನಾವು ಆ ಕ್ರೆಡಿಟ್‌ನ್ನು ತೆಗೆದುಕೊಳ್ಳುವಂಥ ಜನ 73 ಪರ್ಸೆಂಟ್ ಮೀಸಲಾತಿಯನ್ನು ಒಂದು ಕಾನೂನು ಮಾಡುವುದಕ್ಕೆ ಹೊರಟಾಗ ಬಹಿಷ್ಕಾರ ಮಾಡುತ್ತಿದ್ದಾರಲ್ಲ, ಈ ಜನ ತೋರಿದಷ್ಟು ಆಷಾಢಭೂತಿತನ ಕರ್ನಾಟಕದ, ದೇಶದ ಇತಿಹಾಸದಲ್ಲಿ ಇನ್ನೊಂದಿಲ್ಲ. ಇಂತಹ ಪಕ್ಷ, ಜನತೆ ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರುವುದನ್ನು ವಿರೋಧ ಏನು ಮಾಡುತ್ತಿದ್ದಾರೆ, ಇದು ಬರುವ ಚುನಾವಣೆಗಾಗಿ ಈ ಶಾಸನವನ್ನು ವಿರೋಧ ಮಾಡುತ್ತಿದ್ದಾರೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಪುರಾವೆ ಮತ್ತೊಂದು ಇಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರೇ, ಇದಕ್ಕೆ ಪ್ರಾಮಾಣಿಕತೆ ಬೇಕಾಗುತ್ತದೆ. ....

ಶ್ರೀ ವಾಟಾಳ್ ನಾಗರಾಜ್:- ನೀವು ಏನು ಹೇಳುತ್ತಿದ್ದೀರೋ ದೇವರೇ ಬಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ಈ ಪ್ರಾಮಾಣಿಕತೆಯ ಕೊರತೆ ಇದ್ದಾಗ, ಇದೆಲ್ಲ ವಿಕೃತ ಮನೋಭಾವ, ವಿಕೃತ ಪ್ರಕ್ರಿಯೆ ಎಲ್ಲಾ ಕಡೆಗೂ ಉದ್ಭವವಾಗುತ್ತದೆ. ನಿಮ್ಮಲ್ಲಿ ಕ್ಲಿಯರ್ ಥಿಂಕಿಂಗ್ ಇಲ್ಲ, ಸೈದ್ಧಾಂತಿಕವಾದಂಥ ಬದ್ಧತೆ ಇಲ್ಲ. ಅದು ಇಲ್ಲದಿದ್ದಾಗ ಈ ರೀತಿಯ ವಿಕೃತಿ ಎಲ್ಲ ಕಡೆಯೂ ಉದ್ಭವವಾಗುತ್ತದೆ. ಇದು ಕೊನೆಗೆ ಏನಾಗುತ್ತದೆ ಎಂದರೆ, ಆಯಾಯ ವ್ಯಕ್ತಿಗಳನ್ನೇ, ಶಕ್ತಿಗಳನ್ನೇ, ಪಕ್ಷಗಳನ್ನೇ ಅದು ನಶಿಸಿಬಿಡುತ್ತದೆ; ಅದು ನಶಿಸುತ್ತದೆ. ಅದಕ್ಕಾಗಿ ಉತ್ತರ ಭಾರತದಲ್ಲಿ ಇವತ್ತು ಬಿ.ಜೆ.ಪಿ. ಮತ್ತೆ ಬೆಳೆಯುತ್ತದೆ, ಏಕೆಂದರೆ ಉತ್ತರ ಭಾರತದಲ್ಲಿ ಬಿ.ಜೆ.ಪಿ. ವಿಜಯ ಮಾಡುತ್ತದೆ, ಅಲ್ಲಿಂದ ದಕ್ಷಿಣ ಭಾರತಕ್ಕೆ ನಾವು ವಿಜಯರಥವನ್ನು ನಡೆಸುತ್ತೇವೆ ಎಂದು ಹೇಳಿದರು. ಆ ವಿಜಯರಥ

ಮಧ್ಯಪ್ರದೇಶದ ವಿಂಧ್ಯಪರ್ವತಕ್ಕೆ ಬಂದಾಗ ಮುಗ್ಗರಿಸಿಹೋಯಿತು. ಪಾಪ, ಬರೀ ರಥದ್ದು ಏನೋ, ಒಂದು ಕಡ್ಡಿಯನ್ನು ಹಿಡಿದುಕೊಂಡು ಮಾನ್ಯ ಯಡಿಯೂರಪ್ಪನವರು ಇಲ್ಲಿ ಹೊರಟಿದ್ದಾರೆ. ಅದು ಎಲ್ಲಿ ಹೋಗುತ್ತದೆಯೋ, ಎಲ್ಲಿಗೆ ಬರುತ್ತದೆಯೋ ಎಂದು ಹೇಳುವುದಕ್ಕೆ ಆಗುವುದಿಲ್ಲ. ಅದೇ ರೀತಿ ಜನತಾದಳ ಕೂಡ ಉತ್ತರದಲ್ಲಿ ಒರಿಸ್ಸಾದಲ್ಲಿ ಆಯಿತು. ಅವರೂ ಕೂಡ ನಾಡದ್ದು ಚುನಾವಣೆಗೆ ಬರುತ್ತಾರೆ. ಬಿಹಾರದಲ್ಲಿ ಕೂಡ ಅವರು ತತ್ತರಿಸತಕ್ಕಂಥ ಪರಿಸ್ಥಿತಿ ಇದೆ. ಮೊನ್ನೆ ಜನತಾದಳದ್ದು ಏನು ಗತಿಯಾಯಿತು? ಆಷಾಡಭೂತಿತನಕ್ಕೆ ಜನತೆಯ ಬೆಂಬಲ ಈ ದೇಶದಲ್ಲಿ ಸಿಗುವುದಿಲ್ಲ ಎಂಬುದು ನಮಗೆ ಸ್ಪಷ್ಟವಾಗಿ ಕಾಣುತ್ತದೆ. ಅದೇ ರೀತಿಯಲ್ಲಿ ರೆಡ್ಡಿ ವರದಿ ಜಾರಿಗೆ ಪಕ್ಷಗಳ ಸ್ವಾಗತ ಇವತ್ತು ಬಂದಿದೆ.

'ಶತಮಾನಗಳಿಂದ ಈ ಸಾಮಾಜಿಕವಾಗಿ ಹಿಂದುಳಿದವರಿಗೆ ಅನ್ಯಾಯ ಆಗದಂತೆ ಚಿನ್ನಪ್ಪ ರೆಡ್ಡಿ ವರದಿಯ ಶಿಫಾರಸ್ಸುಗಳನ್ನು ಜಾರಿಗೊಳಿಸಬೇಕು. – ಇದೆಲ್ಲ ಪತ್ರಿಕೆಗಳ ಸಾಲುಗಳನ್ನು ತಾವು ನೋಡಿದರೆ ಏನು 1986ರಲ್ಲಿ ಪ್ರತಿಕ್ರಿಯೆ ಬಂತು, ಅದಕ್ಕೆ ವಿರುದ್ಧವಾದಂಥ ಪ್ರತಿಕ್ರಿಯೆಯನ್ನು ಈಗ ನೋಡಿದರೆ, ಇವತ್ತು ಅದನ್ನು ನಾವು ಅನುಷ್ಠಾನ ಮಾಡುವಂಥ ಮೀಸಲಾತಿ ನೀತಿಗೆ ವಿರೋಧ ಖಂಡಿತವಾಗಿಯೂ ಬರಲಿಲ್ಲ. ಇಲ್ಲಿ Even in Sunday Times. They have written only this much. Two steps forward one back. That means one step forward. Even on the most conservative estimate, they never said, we have gone backward they said. Two steps forward and one back. That is, one step is already there. ಹೊಂದಾಣಿಕೆ ಸೂತ್ರ. ಅದರಲ್ಲೂ ಕೂಡ Another editorial dated 21.4.1994. ಇದರಲ್ಲಿ ಆದರೂ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಮುಂಚೆ ಹೊಸ ಮೀಸಲಾತಿ ನೀತಿಯನ್ನು ಪ್ರಕಟಿಸಿ ನಿಜವಾಗಿ ಹಿಂದುಳಿದ ಜಾತಿ, ಪಂಗಡಗಳಿಗೆ ಪೂರ್ತಿ ನ್ಯಾಯವನ್ನು ದೊರಕಿಸಿಕೊಡಲು ಸಾಧ್ಯವಾಗದೇ ಹೋದರೂ, ಹಿಂದಿಗಿಂತ ಹೆಚ್ಚು ನ್ಯಾಯ ದೊರಕಿಸಿಕೊಡಲು ಪ್ರಯತ್ನಿಸಿದ್ದಕ್ಕೆ ಮಾನ್ಯ ಮೊಯಿಲಿಯವರಿಗೆ ಅಭಿನಂದನೆ ಸಲ್ಲಬೇಕು.

These are all the editorials. ಆಮೇಲೆ Adhocism. ಎಂಟು ಹತ್ತು ವರ್ಷ ಕಾಲ ಕರ್ನಾಟಕ ರಾಜ್ಯದಲ್ಲಿ ಮೀಸಲಾತಿ ನೀತಿಗೆ ಆದರಲ್ಲೂ ಕೂಡ The state Cabinet decision on Tuesday to implement with certain modification recommendations of the Backward Classes Commission headed by Justice Chinnappa Reddy has come after inordinate delay of four years. It was welcomed by all cross section of the people. ಆದ್ದರಿಂದ ಇವತ್ತು ತಾವು ದಯಮಾಡಿ ಇದರ ಬಗ್ಗೆ ಆಲೋಚನೆ ಮಾಡಬೇಕು. ಏನು ಮೀಸಲಾತಿ ನೀತಿಯನ್ನು ಏಪ್ರಿಲ್‌ನಲ್ಲಿ ಕೊಟ್ಟಿದ್ದೇವೆ, ಅದನ್ನು ಇನ್ನಷ್ಟು ಪರವಾಗಿ ನಾವು ಬದಲಾವಣೆ ಮಾಡಿದ್ದೇವೆ, ಇದನ್ನು ಸಾರ್ವತ್ರಿಕವಾಗಿ ಜನರು ಸ್ವಾಗತ ಮಾಡಿದ್ದಾರೆ. ಎಲ್ಲಾ ವಿರೋಧ ಪಕ್ಷಗಳೂ ಸ್ವಾಗತ ಮಾಡಿದ್ದಾರೆ. ಆದರೆ ಇದನ್ನು ಶಾಸನಾತ್ಮಕವಾಗಿ ಬೆಂಬಲ ಕೊಡಬೇಕೆಂದು ಹೇಳಿ ನಾವು ಈಗ ಹೊರಟಾಗ ಅದನ್ನು ವಿರೋಧ ಮಾಡತಕ್ಕಂಥ ಒಂದು ಪರಿಸ್ಥಿತಿ ಹೇಗೆ ಉದ್ಭವವಾಯಿತು? ಇದು ಆಷಾಡಭೂತಿತನ. ಏಕೆಂದರೆ ಅವರು ತಿಳಿದುಕೊಂಡಂತೆ ಕಣ್ಣೊರೆಸುವ ಕೆಲಸವನ್ನು ಕಾಂಗ್ರೆಸ್ ಪಕ್ಷದವರು ಮಾಡುವುದಕ್ಕೆ ಹೊರಟಿಲ್ಲ. ನಾವು ಅದಕ್ಕೆ ಸಂವಿಧಾನತ್ಮಕವಾದ ಬೆಂಬಲ ಕೊಟ್ಟು, ಇವತ್ತು ನಾವು ಇರಬಹುದು, ನಾಳೆ ಹೋಗಬಹುದು, ಅದು ಮುಖ್ಯವಲ್ಲ. ಆದರೆ ಶಾಶ್ವತವಾದಂಥ ಒಂದು ಸಂವಿಧಾನಾತ್ಮಕವಾದಂಥ ಬದಲಾವಣೆ ಮಾಡುವಂಥ ಮೀಸಲಾತಿ ನೀತಿಯನ್ನು ನಮ್ಮ ಪಕ್ಷ ಅಥವಾ ತಾವೆಲ್ಲರೂ ಕೂಡಿ ಮಾಡುವಂಥ ಈ ಮೀಸಲಾತಿ ನೀತಿ ಇವತ್ತಿಗೆ ಸರಿ, ನಾಳೆಗೆ ಸರಿಯಲ್ಲವೆಂದು ಅನ್ನಿಸಬಾರದು. ಈ ಮೀಸಲಾತಿ ನೀತಿಯು ಮುಂದೆ

ಯಾವುದೇ ಸರ್ಕಾರ ಬರಲಿ, ಯಾರೇ ಬರಲಿ ಅದು ಶಾಶ್ವತವಾದ ಮನೋಭೂಮಿಕೆಯಿಂದ ಕೂಡಿರಬೇಕೆನ್ನುವ ಶಾಸನವನ್ನು ತರುತ್ತಿದ್ದೇವೆ. ಬರೀ ಚುನಾವಣೆಗಾಗಿ ಮಾಡಬೇಕಾದರೆ ಶಾಸನಾತ್ಮಕವಾದಂಥ ಬೆಂಬಲ ಕೊಡುವಂಥ ಅವಶ್ಯಕತೆ ಇರಲಿಲ್ಲ. ಇದರ ಮೂಲಕವೇ ನಾವು ಹೋಗಬಹುದಿತ್ತು. ಏಕೆಂದರೆ ಈ ಚುನಾವಣೆ ಬರಬಹುದು, ಹೋಗಬಹುದು.

ಆದರೆ ನಾವು ಇವತ್ತು ಯಾವ ಮೀಸಲಾತಿ ನೀತಿಯನ್ನು ಈ ಸದನದ ಮುಂದೆ ತಂದಿದ್ದೇವೆ ಇವತ್ತು ಯಾವ ಮೀಸಲಾತಿ ನೀತಿಯನ್ನು ಜನತೆಗೆ ಕೊಡುತ್ತೇವೆ ಎಂದು ಕಾಲಾತೀತವಾಗಿ ಇರಬೇಕಾಗುತ್ತದೆ. ಅದಕ್ಕೆ ಯಾವುದೇ ರೀತಿಯಾದಂತಹ ಚುನಾರಣೆಯ ಬಣ್ಣ ಇನ್ನೊಂದನ್ನು ನಾವು ಹಾಕತಕ್ಕಂಥ ಪರಿಸ್ಥಿತಿಯಲ್ಲಿ ಮನಸ್ಸು ಮಾಡಬಾರದು. ಈಗ ನಾವು ಮಾಡಿದಂತಹ ಮೀಸಲಾತಿ ನೀತಿಯಲ್ಲಿ ತಮಗೆ ಗೊತ್ತಿದ್ದ ಪ್ರಕಾರ, ಬಹಳ ಮುಖ್ಯವಾಗಿ ಚಿನ್ನಪ್ಪರೆಡ್ಡಿಯವರು ಎರಡು ಮುಖ್ಯವಾದ ತತ್ವವನ್ನು ಹೇಳಿದ್ದಾರೆ. ಈಗ ವಿವರಗಳ ವಿಚಾರ ನಾವು ಹೇಳಬೇಕಾಗಿಲ್ಲ ಮತ್ತು ಮುಖ್ಯವಾದ ಕೋಡ್ ಅಬ್ಜೆಕ್ಟೀವ್ ಆಫ್ ದಿ ಚಿನ್ನಪ್ಪರೆಡ್ಡಿ ಸಮಿತಿ ಅದು ಏನು ಎಂದು ಹೇಳಿದರೆ To discourage forward elements in Backward Classes interest. Forward Classes elements, the essence of Chinnappa Reddy Commission is to discourage all forward elements from Backward Classes. ಅದನ್ನು Creamy Layer ಅನ್ನು ಹಾಕಿ ನಾವು ಇವತ್ತು ಯಾರು ಅನುಕೂಲ ಇದ್ದಾರೆ, ಫಾರ್‌ವರ್ಡ್ ಎಲಿಮೆಂಟ್ಸ್ ಅಂತ ಹೇಳಿ ಯಾವುದೇ ಕೆಟಗರಿಯಲ್ಲಿ ಇದ್ದಾರೆ ಅದನ್ನು ಹೊರಗೆ ಇಟ್ಟಿದ್ದೇವೆ. ನಿಜವಾದ ಹಿಂದುಳಿದ ವರ್ಗದವರನ್ನು ನಾವು ಹಾಕಿದ್ದೇವೆ ಇದರಲ್ಲಿ ಒಂದು ಸತ್ಯ ನಿಷ್ಠುರತೆ ಇದೆ. ಈ ಒಂದು ಸಿದ್ಧಾಂತದಲ್ಲಿ ಯಾವುದೇ ರೀತಿಯಾದಂತಹ ಒಂದು ಆಷಾಡಭೂತಿತನ ಇಲ್ಲ. ಎಲ್ಲರನ್ನು ಮೆಚ್ಚಿಸಬೇಕು ಎನ್ನತಕ್ಕಂಥ ವಿಚಾರ ಇದರಲ್ಲಿ ಎಲ್ಲೂ ಕೂಡ ನೀವು ಕಾಣಲಿಕ್ಕೆ ಸಾಧ್ಯ ಇಲ್ಲ. ಯಾರ ಕಡೆಗೆ ನಾವು ನಮ್ಮ ಗಮನ ಕೊಡಬೇಕು, ಯಾರಿಗೆ ಹಿಂದುಳಿದ ವರ್ಗದವರ ಮೀಸಲಾತಿ ಸೌಲಭ್ಯ ಕೊಡಬೇಕು, ಅದನ್ನು ನೇರವಾಗಿ ತಲುಪಿಸತಕ್ಕಂಥ ನಿಚ್ಚಳವಾದಂತಹ ಒಂದು ನೀತಿ ಇವತ್ತು ನಿಮ್ಮ ಮುಂದೆ ಇರತಕ್ಕಂಥ ನೀತಿ. ಇದರಲ್ಲಿ ಮಿಕ್ಸ್‌ಆಫ್ ಇಲ್ಲ. ಅದೂ ಕೂಡ ನಾವು ಈ Creamy Layer ನ್ನು ಅನ್ವಯಿಸುವಾಗ ನಾವು ಕಣ್ಣು ಮುಚ್ಚಿ Creamy Layer ನ್ನು ಅನ್ವಯಿಸಲಿಲ್ಲ. ಹಿಂದೆ ಕ್ರೀಮ್ ಇರಲಿಲ್ಲ, ಲೇಯರ್ಸ್ ಇರಲಿಲ್ಲ. ಹಿಂದೆ ಬಂದಂತಹ ಮೀಸಲಾತಿ ನೀತಿಯಲ್ಲಿ. ಆದರೆ ಇದನ್ನು ನಾವು ಸರಿಯಾದ Creamy layerನ್ನು ಹಾಕತಕ್ಕಂಥಾದ್ದರಲ್ಲಿ ಆಕ್ಷೇಪಣೆ ಬಂತು ಈಗ ನಮ್ಮ ಕಾಂಗ್ರೆಸ್ ಶಾಸಕಾಂಗ ಪಕ್ಷದಲ್ಲಿ ಕೂಡ ಚರ್ಚೆಗೆ ಬಂತು. 8 ಹೆಕ್ಟೇರ್ ವೆಟ್ ಲ್ಯಾಂಡ್‌ನಿಂದ ನಿಜವಾಗಿ ಅನೇಕ ಬಡವರು ಬಿಟ್ಟು ಹೋಗುತ್ತಾರೆ ಎಂಬ ವಾದ ನಿನ್ನೆ ಬಂತು ಇವತ್ತು ಬಂತು ಇದು ಸಾರ್ವಜನಿಕವಾಗಿ ಬಂದಂತಹ ವಿಚಾರಗಳಿಗೆ ನಾವು ಮನ್ನಣೆ ಕೊಟ್ಟಿದ್ದೇವೆ, ನಾವು ಸ್ಪಂದಿಸಿದ್ದೇವೆ. ಅದಕ್ಕಾಗಿ ನಾವು ತಿದ್ದುಪಡಿ ತಂದಿದ್ದೇವೆ. Ten hectares of rainfed wet land or its equivalent. ಇದನ್ನು ಇವತ್ತು ನಾವು ಭೂಸುಧಾರಣಾ ಕಾಯ್ದೆಯ ಪರಿಮಿತಿ ಏನು ಇದೆ ಅದನ್ನು ನಾವು ಇವತ್ತು ತಂದಿದ್ದೇವೆ. ಡಾಕ್ಟರ್ಸ್, ಲಾಯರ್ಸ್ ಅವರನ್ನು ನಾವು ಬಿಟ್ಟಿದ್ದೇವೆ. ಏಕೆಂದರೆ ಇನ್‌ಕಮ್ ಟ್ಯಾಕ್ಸ್ ಅಸ್ಸೆಸಿ, ಸೇಲ್ಸ್ ಟ್ಯಾಕ್ಸ್ ಅಸ್ಸೆಸಿ ಯಾರು ಬರುತ್ತಾರೆ ಅವರನ್ನು ಮಾತ್ರ ಕ್ರಿಮಿಲೇಯರ್ ಅಂತ ಇಟ್ಟುಕೊಂಡಿದ್ದೇವೆ ಬಾಕಿಯುವರನ್ನು ಕೂಡ ನಾವು ಬಿಟ್ಟಿದ್ದೇವೆ. ಇನ್ನು ಅರ್ಬನ್ ರೂರಲ್ ಅಂತ ಒಂದು ಡಿವೈಡ್ ಇತ್ತು. ಅದನ್ನೂ ಕೂಡ ನಾವು ಇವತ್ತು ಏನು ಮಾಡಿದ್ದೇವೆ ಅಂತ ಹೇಳಿದರೆ To ensure Backward Classes in forward communities. ಫಾರ್‌ವರ್ಡ್ ಕಮ್ಯುನಿಟಿಯಲ್ಲಿರತಕ್ಕಂಥ ಹಿಂದುಳಿದವರ್ಗದವರು ಬಡವರು ಏನು ಇದ್ದಾರೆ ಅದಕ್ಕೂ ಕೂಡ ಒಂದು ಲಕ್ಷ್ಮಣ ರೇಖೆಯನ್ನು ಹಾಕಿ ಅಲ್ಲಿರತಕ್ಕಂಥ ದಲಿತರು ಬಡವರು ಹಿಂದುಳಿದವರನ್ನು ಕೂಡ ನಾವು ಈಗ ಕಕ್ಷೆಯಲ್ಲಿ

ಸೇರಿಸಿಕೊಂಡಿದ್ದೇವೆ. ಇದರಲ್ಲಿ ಏನು ತಪ್ಪು ಇದೆ? ವಾಟಾಳ್‌ನಾಗರಾಜ್‌ರವರೇ? ನಿಮ್ಮ ಲಿಂಗಾಯತರಲ್ಲಿ ಬಡವರು ಇಲ್ಲ ಅಂತ ತಮ್ಮ ತೀರ್ಮಾನ ಇದೆಯೋ? ಅಥವಾ ಒಕ್ಕಲಿಗರಲ್ಲಿ ಬಡವರು ಇಲ್ಲ ಅಂತ ತೀರ್ಮಾನ ಮಾಡುತ್ತೀರೋ?

ಶ್ರೀ ವಾಟಾಳ್ ನಾಗರಾಜ್:– ಲಿಂಗಾಯಿತರಲ್ಲಿ ಬಡವರು ಇಲ್ಲ ಎಂದು ಯಾರು ಹೇಳಿದರು.

ಶ್ರೀ ಎಂ. ವೀರಪ್ಪ ಮೊಯಿಲಿ:– ನೀವಲ್ಲ. ಒಟ್ಟು ಅಭಿಪ್ರಾಯ. ಆದ್ದರಿಂದ ಇದನ್ನು ಕೂಡ ಇವತ್ತು ಸ್ಪಷ್ಟವಾಗಿ ನಾವು ಗುರುತಿಸಿ ಅದನ್ನು ಬೇರ್ಪಡಿಸತಕ್ಕಂಥ ಒಂದು ಕೆಲಸ ನಾವು ಮಾಡಿದ್ದೇವೆ. ಇನ್ನು ನಮ್ಮಲ್ಲಿ ಈ ಒಂದು ಬ್ಯಾಕ್‌ವರ್ಡ್ ಕ್ಲಾಸ್‌ಗಳನ್ನು ಇದು ಒಕ್ಕಲಿಗರು ತಮಗೆ ಗೊತ್ತಿದೆ ಮಂಡಳ ಸಮಿತಿಯಲ್ಲಿ ರೂರಲ್ ಒಕ್ಕಲಿಗಾಸ್ they are classified as Backward Class. ಅದನ್ನು ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈಗ ರೂರಲ್ ಒಕ್ಕಲಿಗಾಸ್ ಬ್ಯಾಕ್‌ವರ್ಡ್ ಕ್ಲಾಸ್ ಅಂತ ಹೇಳಿ ವಿಂಗಡಿಸಿದ ಮೇಲೆ ರೂರಲ್ ಒಕ್ಕಲಿಗರಿಗೂ ರೂರಲ್ ಲಿಂಗಾಯತರಿಗೂ ಏನು ವ್ಯತ್ಯಾಸ ಇದೆ ಅದಕ್ಕೆ ನಾವು ಏಪ್ರಿಲ್ 94ರಲ್ಲಿ ರೂರಲ್ ಬಯಾಸ್ ಅನ್ನು ನಾವು ಇಬ್ಬರಿಗೂ ಅನ್ವಯಿಸಿದ್ದೇವೆ. ಆದ್ದರಿಂದ ಯಾರೇ ಬಡವರು ಇರಲಿ ಅವರನ್ನು ಒಂದೇ ಮಾನದಂಡದಲ್ಲಿ ನೋಡತಕ್ಕಂಥ ನಿಷ್ಪಕ್ಷಪಾತವಾದಂತಹ ಮನೋಭೂಮಿಕೆಯಿಂದ ನಾವು ಮಾಡಿದ್ದೇವೆ. ಇಲ್ಲಿ ಯಾರೊಬ್ಬರನ್ನು ಒಲಿಸತಕ್ಕಂಥ, ಒತ್ತಡಕ್ಕೆ ಮಣಿಯತಕ್ಕ ಪ್ರಶ್ನೆ ಉಳಿದೇ ಇಲ್ಲ. ಆಮೇಲೆ ಈ ರೂರಲ್ ಅರ್ಬನ್ ಅಂತ ಏನು ವಿಂಗಡಣೆ ಆಗಿದೆ ಅದು ಕೃತ್ರಿಮ ವಿಂಗಡಣೆ ಆಗುತ್ತದೆ. ಬಡವರು ಅರ್ಬನ್ ಏರಿಯಾದಲ್ಲಿ ರೂರಲ್ ಏರಿಯಾದಲ್ಲಿ ಇದ್ದರೂ ಬಡವರು ಬಡವರೇ. ಬಡವರ ಬಗ್ಗೆ ವ್ಯತ್ಯಾಸ ಏಕೆ ಮಾಡಬೇಕು ಅಂತ ಹೇಳಿ ನಾವು ಅದನ್ನು ಜುಲೈನಲ್ಲಿ ಕೈ ಬಿಟ್ಟೆವು. ಜುಲೈನಲ್ಲಿ ಕೈ ಬಿಟ್ಟ ಕೂಡಲೇ ನೀವು ಒತ್ತಡಕ್ಕೆ ಒಳಗಾಗಿದ್ದೀರಿ.

ಒಕ್ಕಲಿಗರು ಒಂದು ಮಹಾ ಸಮಾವೇಶ ಮಾಡಿದರು. ಮತ್ತೊಬ್ಬರು ಒಂದು ಮಹಾಸಮಾವೇಶ ಮಾಡಿದರು. ಆ ಒತ್ತಡಕ್ಕೆ ಬಿದ್ದಿದ್ದೀರಿ ಇಲ್ಲ. ನಮಗೂ ಅನ್ನಿಸಿತು ಅದು ಅರ್ಬನ್ ರೂರಲ್ ಡಿವೈಡ್ It is an artificial barrier . ಆದ್ದರಿಂದ ಅದನ್ನು ತೆಗೆದು ಹಾಕಬೇಕು ಅಂತ ಹೇಳಿ ನಿರ್ಣಯ ನಾವು ಅಬ್ಜಕ್ಟೀವ್ ಆಗಿ ಮಾಡಿದರೆ, in all fairness ಮಾಡಿದರೆ ನೀವು ಒತ್ತಡಕ್ಕೆ ಬಲಿಯಾಗಿ ಮಾಡಿದಿರಿ ಅಂತ ಹೇಳಿದರೆ ಹೇಗೆ? ಹಾಗಾದರೆ ನಾವು ಎಲ್ಲಾ ಸಂದರ್ಭದಲ್ಲಿ ಒಂದು ನೀತಿಯನ್ನು ಮಾಡಿದ ಮೇಲೆ ಎಲ್ಲಾ ಕೈ ಕಟ್ಟಿ ಕಣ್ಣು ಮುಚ್ಚಿ ಅಥವಾ ಬಾಯಿಮುಚ್ಚಿ ಕುಳಿತುಕೊಳ್ಳಬೇಕು ಅಂತ ತಮ್ಮ ಇಚ್ಛೆ ಇದ್ದರೆ, ಅದು ಪ್ರಜಾಪ್ರಭುತ್ವದ ಲಕ್ಷಣ ಅಲ್ಲ. ಪ್ರಜಾಪ್ರಭುತ್ವದ ಲಕ್ಷಣ responsiveness is an important criteria to react to the situation.

ಇದರಲ್ಲಿ ಏನು ತಪ್ಪು ಇದೆ. ತಾವು ದಯಮಾಡಿ ಇದನ್ನು ಇವತ್ತು ಹೇಳಬೇಕಾಗುತ್ತದೆ. ಮಂಡಲ್ ಕಮೀಷನ್ ರಿಪೋರ್ಟ್‌ನಲ್ಲಿ ತಾವು ಸ್ವಲ್ಪ ನೋಡುವುದು ಇದ್ದರೆ ಅದರಲ್ಲಿಯೇ ಬೇರೆ ಬೇರೆ ರೂರಲ್ ಏರಿಯಾದಲ್ಲಿರತಕ್ಕಂಥ ಒಕ್ಕಲಿಗರು ಮತ್ತು ಲಿಂಗಾಯತರು ಅವರು ಸಾಮಾನ್ಯವಾಗಿ ಬಡವರು ಇರುತ್ತಾರೆ ಎಂಬ ಒಂದು ವಿಚಾರವನ್ನು ಮಂಡಲ ಸಮಿತಿಯ ವರದಿಯಲ್ಲಿ ಹೇಳಿದ್ದಾರೆ. ಇದನ್ನು ನಾವು ಪ್ರತ್ಯೇಕವಾಗಿ ಉಚ್ಚರಿಸಿ ಹೇಳಬೇಕಾದಂತಹ ಅವಶ್ಯಕತೆ ಇಲ್ಲ ಅಂತ ಹೇಳಿ ನಾನು ತಿಳಿದುಕೊಂಡಿದ್ದೇನೆ. ಮುಖ್ಯವಾಗಿ ಏನು ಒಂದು ನಿರ್ಣಯ ಷೆಡ್ಯೂಲ್ ಕ್ಯಾಸ್ಟ್, ಷಡ್ಯೂಲ್ ಟ್ರೈಬ್ ಬಗ್ಗೆ ಮಾಡಿದ್ದೇವೆ ಬಹುಶಃ ದೇಶದ ಯಾವುದೇ ರಾಜ್ಯದಲ್ಲಿ ಮಾಡಿಲ್ಲ 18 ಪರ್ಸೆಂಟಿನಿಂದ 23 ಪರ್ಸೆಂಟ್‌ಗೆ ಏರಿಸಿದಂತಹ ಇತಿಹಾಸ ನನಗೆ ಗೊತ್ತಿದ್ದ ಮಟ್ಟಿಗೆ ಈ ರಾಷ್ಟ್ರದಲ್ಲಿ ಯಾವ ರಾಜ್ಯದಲ್ಲೂ ಇಲ್ಲ. ಅದನ್ನು ಕರ್ನಾಟಕ ರಾಜ್ಯದಲ್ಲಿ ಮಾಡಿದ್ದೇವೆ. ಇದರಲ್ಲಿ ಬಾಲಿಶತನ ಏನಿದೆ? ನ್ಯಾಯವಾಗಿ ಸಂವಿಧಾನಾತ್ಮಕವಾಗಿ ಸಿಗಬೇಕಾದಂತಹ ಒಂದು ಹಕ್ಕನ್ನು ನಾವು ಕೊಟ್ಟಿದ್ದೇವೆ. ಈ ಕಮಿಟ್‌ಮೆಂಟ್

ನಾವು ಚುನಾವಣೆ ಬರುತ್ತದೆಂದು ಮಾಡಿದ್ದಲ್ಲ. ನಮ್ಮ ಪಂಚಾಯತ್ ಆಕ್ಟ್‌ನಲ್ಲಿ ಷೆಡ್ಯೂಲ್ ಕ್ಯಾಸ್ಟ್‌ಗೆ ಷೆಡ್ಯೂಲ್ ಟ್ರೈಬ್‌ಗೆ 23 ಪರ್ಸೆಂಟ್ ರಿಜರ್ವೇಶನ್ ಅನ್ನು ನಾವು ಕೊಟ್ಟಿದ್ದೇವೆ ಈ ರಾಷ್ಟ್ರದ ಯಾವ ರಾಜ್ಯದವರು ಕೂಡ ಮಾಡಲಿಲ್ಲ. ತಮಿಳುನಾಡಿನಲ್ಲಿ ಕೂಡ ಮಾಡಲಿಲ್ಲ. ಇದಕ್ಕೂ ಕೂಡ ಇವತ್ತು ಆಕ್ಷೇಪಣೆ ಇದೆ ಅಂತ ಈಗ ಜನತಾ ದಳ ಬಿ.ಜೆ.ಪಿ ಮತ್ತು ಇತರರು ಹರಿಜನ ಮತ್ತು ಗಿರಿಜನ ಮತ್ತು ಹಿಂದುಳಿದ ವರ್ಗಗಳ ಬಗ್ಗೆ ಬರೀ ಭಾಷಣ ಮಾಡತಕ್ಕಂಥ ಕೆ.ಸಿ.ಪಿ., ಸಿ.ಪಿ.ಇ, ಪಿ.ಸಿ.ಪಿ., ಯಾವುದು ನನಗೆ ಗೊತ್ತಿಲ್ಲ ಅದು ಯಾವ ಪಕ್ಷವೋ ಅದು ಯಾರೋ ಆ ಪರಮಾತ್ಮನಿಗೆ ಗೊತ್ತು. ನಿನ್ನೆ ಬಹುಶಃ ಒಂದೂವರೆ ಎರಡು ಗಂಟೆಗಳವರೆಗೂ ಮಾತನಾಡಿದರು. ಒಂದು ಶಬ್ದ ಪರಿಶಿಷ್ಟ ವರ್ಗ ಜನಾಂಗದವರ ಬಗ್ಗೆ 18 ರಿಂದ 23 ಪರ್ಸೆಂಟ್ ಆಗಿದೆ. ಇದನ್ನು ನಾನು ಸ್ವಾಗತ ಮಾಡುತ್ತೇನೆಂದು ಹೇಳತಕ್ಕಂಥ ಒಂದು ಸೌಜನ್ಯತೆ ಕೂಡ ಇಲ್ಲದಂತಹ ಈ ವ್ಯಕ್ತಿಗಳು ಹರಿಜನ ಮತ್ತು ಗಿರಿಜನಗಳ ವಿಚಾರದಲ್ಲಿ ಏನು ಭಾಷಣ ಮಾಡುತ್ತಾರೆ ? ಜನ ಯಾವ ರೀತಿಯಲ್ಲಿ ಇವರ ಭಾಷಣ ಕೇಳುತ್ತಾರೋ ನನಗೆ ಅರ್ಥವಾಗುವುದಿಲ್ಲ. ಒಂದು ಮಾತು ನನಗೆ If I am not incorrect, I don't think that it has gone on record. 18 ರಿಂದ 23 ಪರ್ಸೆಂಟ್ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗದವರಿಗೆ ಮಾಡಿದ್ದೀರಿ. ಇದು ನನ್ನ ಒಂದು ಇಚ್ಛೆ ಕೂಡ ಇತ್ತು ಅಂತ ಹೇಳಬಹುದಾಗಿತ್ತು. ಅವರು ಮಾಡದೇ ಇದ್ದದ್ದನ್ನು ಅನೇಕ ಸಾರಿ ನಾನೇ ಮಾಡಿದ್ದೇನೆಂದು ಹೇಳುತ್ತಾರೆ. ಏಕೆಂದರೆ ಆಶ್ರಯ ನಾನೇ ಮಾಡಿದ್ದೇನೆ. ಆಶ್ರಯ ಬಂಧು ಎಲ್ಲಿ ಗೋಡೆಯಲ್ಲಿ ಇವತ್ತು ಏನು ಮಾಡಿದ್ದಾರೆ. ಅದಕ್ಕೆ ಬರುತ್ತೇನೆ, ಆ ಪಟ್ಟಿಯನ್ನು ನಾನು ಓದಿ ಹೇಳುತ್ತೇನೆ. ಇದು ನೋಡಿ ಯಾವ ರೀತಿಯ ಮನೋಭೂಮಿಕೆ ಇದೆ. ನಿಜವಾದತಂಹ ಅಂತರಾತ್ಮ ಯಾವ ರೀತಿಯಲ್ಲಿ ತುಡಿಯುತ್ತಾ ಇದೆ. ಈ ಜನತೆಯ ಬಗ್ಗೆ ಎಂಬ ವಿಚಾರ ನಮ್ಮ ಎಲ್ಲಾ ಬರೀ ಭಾಷಣದಲ್ಲಿ ಅಲ್ಲ, ನಮ್ಮ ನಡವಳಿಕೆಯಲ್ಲಿ ಕಾಣಬೇಕು ನಾವು ಡ್ರೆಸ್ ಮಾಡುವಾಗಲೇ ನೋಡುತ್ತಾರೆ ನಾವು ಡ್ರೆಸ್ ಮಾಡುವಾಗಲೇ ಗೊತ್ತಾಗುತ್ತದೆ. ನೀವು ಎಷ್ಟು ಸೋಶಿಯಲಿಸ್ಟ್ ಎಷ್ಟು ನಿಮ್ಮ ನಡವಳಿಕೆ ನಿಮ್ಮ ರೀತಿ ರಿವಾಜು ನೋಡಿದ ಕೂಡಲೇ ಗೊತ್ತಾಗುತ್ತದೆ. ಅಲ್ಲ ಅದಕ್ಕೆ ಒಂದು ಸರಿಯಾದ ಒಂದು ಕನ್ಸರನ್ ಬೇಕಲ್ಲ ನಿಮಗೆ ಎಷ್ಟು ಸಮಯ ನೀವು ಬಡವರಿಗಾಗಿ ಕಳೆಯುತ್ತೀರಿ ನಾನು ವಾಟಾಳ್ ನಾಗರಾಜ್‌ರವರಿಗೆ ಹೇಳತಕ್ಕಂಥಾದ್ದು ಅಲ್ಲ. ನನಗೆ ನಾನೇ ಪ್ರಶ್ನೆ ಮಾಡಿಕೊಳ್ಳತಕ್ಕಂಥಾದ್ದು ಈಗ ಎಷ್ಟು ಸಮಯ ನಾವು ಬಡವರಿಗಾಗಿ ಕಳೆಯುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ನಿಮ್ಮ ಎದುರಿಗೆ ನಾವೇ ಕುಳಿತಿರುವುದು ನೀವು ಯಾರಿಗೆ ಹೇಳುತ್ತೀರಿ ಅಂತ ಸ್ಪಷ್ಟಪಡಿಸಿರಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಮಾನ್ಯ ಅಧ್ಯಕ್ಷರೇ ಈಗ ನಾವು ಈ ಶಾಸನವನ್ನು ತರದಿದ್ದರೆ 50 ಪರ್ಸೆಂಟಿಗೆ ಸೀಮಿತಗೊಳಿಸಿದರೆ ಇದಕ್ಕೆ ನಾವು ಸಿದ್ಧರಿಲ್ಲ. ಈಗ 23 ಪರ್ಸೆಂಟ್ ನಾವು ತಂದಿದ್ದೇವೆ ಇಲ್ಲದಿದ್ದರೆ I must say that the person who has opposed here today and yesterday. ಯಾವುದನ್ನು ಜನತಾದವರು ಬಿಜೆಪಿಯವರು ಮತ್ತು ಆ ವ್ಯಕ್ತಿಗತ ಪಕ್ಷಗಳು ಯಾವುದಿದೆ I must say by opposing this Bill and by bycotting they have demonstrated that they are the betrayers of the cause of the backward classes. ಹೊರಗಿನಿಂದ ಹೇಳಿಕೆ ಬರುತ್ತಿಲ್ಲ. ಅಟ್‌ಲೀಸ್ಟ್ ಹೇಳಬಹುದಿತ್ತು, 23 ಪರ್ಸೆಂಟಿಗೆ ಮಸೂದೆ ಇವತ್ತು ಬರುತ್ತಿದೆ. ಇದಕ್ಕೆ ನಮಗೆ ಒಪ್ಪಿಗೆ ಇದೆ ಇದನ್ನು ಮಾಡಬೇಕು ಎಂದು ಒಂದು ಶಬ್ದ ಪತ್ರಿಕೆಯಲ್ಲಿ ಬರಲಿಲ್ಲ. ಇದು ಯಾವ ಸಮಾಜ ಕಲ್ಯಾಣ ? ಇದ್ಯಾವ ರಾಷ್ಟ್ರೀಯ ಪಕ್ಷಗಳು ? ರಾಷ್ಟ್ರದ ಸಮಸ್ಯೆಗಳಿಗೆ ಮೂಲಭೂತ ಸಂಕಷ್ಟಗಳಿಗೆ ಸ್ಪಂದಿಸದಿರುವ ಪಕ್ಷ ಅದು ರಾಷ್ಟ್ರೀಯ ಪಕ್ಷ ಅಲ್ಲ ಅಥವಾ ಪ್ರಾದೇಶಿಕ ಪಕ್ಷವಾಗಲೂ ಸಾಧ್ಯವಿಲ್ಲ. ಬರೀ ಸಮಯಸಾಧಕ ಪಕ್ಷಗಳಾಗುತ್ತವೆ. ಇದಕ್ಕೆ

ಜನ ಉತ್ತರ ಕೊಡುತ್ತಾರೆ. ಆದ್ದರಿಂದ ಇವತ್ತು ಏನು ಮೀಸಲಾತಿ ಇದೆ. ಹಿಂದೆ ಒಂದು ಕಾಲದಲ್ಲಿ ನಮ್ಮ ರಾಜ್ಯಕ್ಕೆ ಸೀಮಿತವಾಗಿರಬಹುದು. ಈಗ ನಮ್ಮ ಪ್ರಧಾನಿಗಳಾದ ಪಿ.ವಿ. ನರಸಿಂಹರಾವ್ ಸ್ವಾತಂತ್ರ್ಯ ಸಿಕ್ಕಿದ ಮೇಲೆ ಪ್ರಥಮ ಬಾರಿಗೆ ರಾಷ್ಟ್ರಮಟ್ಟದಲ್ಲಿ ಮೀಸಲಾತಿ ಜಾರಿಗೆ ತಂದ ಒಬ್ಬ ಪ್ರಧಾನಿ ಈ ರಾಷ್ಟ್ರದಲ್ಲಿದ್ದರೆ ಅದು ಪಿ.ವಿ. ನರಸಿಂಹರಾವ್. ಯಾವುದೇ ಒಂದು ರಾಜ್ಯದ ಮೀಸಲಾತಿ ಶಾಸನವನ್ನು ಇವತ್ತು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಿ ರಕ್ಷಣೆಯನ್ನು ಕೊಟ್ಟ ಪ್ರಧಾನಿ ಒಬ್ಬರು ಈ ರಾಷ್ಟ್ರದಲ್ಲಿದ್ದರೆ ಅದು ಸನ್ಮಾನ್ಯ ಶ್ರೀ ಪಿ.ವಿ. ನರಸಿಂಹರಾವ್. ಇವತ್ತು ಆಲೋಚನೆ ಮಾಡಿಕೊಳ್ಳಬೇಕಾಗುತ್ತದೆ. ಯಾರು ಬಡವರ ಪರವಾಗಿದ್ದಾರೆ, ಯಾರು ಹಿಂದುಳಿದವರ ಪರವಾಗಿದ್ದಾರೆ, ಯಾರು ಅಲ್ಪಸಂಖ್ಯಾತರ ಪರವಾಗಿದ್ದಾರೆ, ಭಾಷಣದಿಂದ ಪರವಾಗಿದ್ದಾರೆ ಎಂದು ಅಳೆಯುವ ಆಷಾಢಭೂತಿತನ ಈ ರಾಷ್ಟ್ರಕ್ಕೆ ಬಂದರೆ ಅದೇ ಪ್ರಜಾಪ್ರಭುತ್ವಕ್ಕೆ ಕುತ್ತು ಮತ್ತು ದುರಂತ. ಇವತ್ತು ಅದನ್ನು ನಮ್ಮ ಮಾತಿನಲ್ಲಿ, ನಡೆನುಡಿಯಲ್ಲಿ ತೋರಿಸಬೇಕಾಗುತ್ತದೆ. ನಾವು ಅಧಿಕಾರಕ್ಕೆ ಬಂದಾಗ ಈ ಸಮಸ್ಯೆಗಳಿಗೆ ಈ ಸಂಕಷ್ಟಗಳಿಗೆ ಹೇಗೆ ಪ್ರತಿಕ್ರಿಯಿಸುತ್ತೇವೆಂಬ ಮಾನದಂಡದಿಂದ ಹಿಂದುಳಿದವರ ಅಲ್ಪಸಂಖ್ಯಾತರ ಹರಿಜನ ಗಿರಿಜನರ ಬೆಂಬಲಕ್ಕಿದ್ದಾರೆ ಎಂದು ಅಳೆಯಬೇಕಾದರೆ ಪರಿಸ್ಥಿತಿ ಇದೆ. ಇವತ್ತು ಮೀಸಲಾತಿ ನೀತಿ ಇದೊಂದು ವಿಶ್ವಪ್ರಕ್ರಿಯೆ. ಅಮೇರಿಕದಲ್ಲಿ ಕೂಡ ಅಲ್ಲಿರುವ ಬ್ಲಾಕ್ಸ್‌ಗೆ ಅಲ್ಲಿ ಮೀಸಲಾತಿ ಎಂದು ಹೇಳುವುದಿಲ್ಲ, ಅಫರ್ಮೇಟಿವ್ ಆಕ್ಷನ್ ಎಂದು ಹೇಳುತ್ತಾರೆ. ಅಲ್ಲೂ ಇದು ಇವತ್ತಿಗೂ ಜಾರಿಯಲ್ಲಿದೆ.

ಹೌದು ಇವತ್ತು ನಾವು ಶಾಸನ ಮಾಡಲು ಅಥವಾ 83 ಅಥವಾ 73 ಪರ್ಸೆಂಟ್ ಜಾರಿ ಮಾಡಲಿಕ್ಕೆ ಅಥವಾ ಚಿನ್ನಪ್ಪರೆಡ್ಡಿ ವರದಿಯನ್ನು ಅನುಷ್ಠಾನ ಮಾಡಲಿಕ್ಕೆ ನಮಗೆ ಸ್ಫೂರ್ತಿ ಸನ್ಮಾನ್ಯ ಶ್ರೀ ಪಿ.ವಿ. ನರಸಿಂಹರಾವ್. ಏಕೆಂದರೆ ರಾಷ್ಟ್ರಮಟ್ಟದಲ್ಲಿ ಮಂಡಲ ಆಯೋಗದ ವರದಿಯನ್ನು ಜಾರಿಗೆ ತಂದರು. ಆ ಸ್ಫೂರ್ತಿಯಿಂದಲೇ ನಾನು ಮಾಡಿದ್ದೇನೆ. ಶಾಸನಾತ್ಮಕವಾಗಿ ಸಂವಿಧಾನದ 9ನೇ ಪರಿಚ್ಛೇದದಲ್ಲಿ ಕರ್ನಾಟಕದ ಕಾನೂನನ್ನು ಕೂಡ ಸೇರಿಸಲಿಕ್ಕೆ ಹೌದು, ನಮಗೆ ಸ್ಫೂರ್ತಿ ಸನ್ಮಾನ್ಯ ಶ್ರೀ ಪಿ.ವಿ. ನರಸಿಂಹರಾಯರು. ಏಕೆಂದರೆ ಅಲ್ಲಿ ಪರಿಚ್ಛೇದಕ್ಕೆ ಸೇರಿಸಿದ್ದಾರೆ. ಇದರಲ್ಲಿ ಏನು ತಪ್ಪಿದೆ ? ತಾವು ಹೇಳಿದ್ದೀರಿ ರೈಲು ಓಡುತ್ತಿದೆ ಎಂದು, ಹೌದು ರೈಲು ಓಡುತ್ತಿರುವಾಗಲೇ ಹಿಡಿಯುವುದೇ ಜಾಣ್ಮೆ ಬುದ್ಧಿವಂತಿಕೆ. ನಿಲ್ಲತಕ್ಕಂತಹ ಜಗತ್ತು ಇಲ್ಲ. ತಾವು ತಿಳಿದುಕೊಳ್ಳಬೇಕಾಗುತ್ತದೆ. Yes, there is no status. ಯಥಾಸ್ಥಿತಿಗೆ ಶಾಮೀಲಾಗಿ ಶರಣಾಗುವ ಪ್ರವೃತ್ತಿ ನಮಗಿಲ್ಲ. ಆ ಅರ್ಥದಲ್ಲಿ 'ನಾನು ಹೇಳಿದ್ದುದು. ನಿನ್ನೆ ಭಾಷಣದಲ್ಲಿ ಹೇಳಿದರು, ಪಂಚಾಯತಿ ಮತ್ತು ಜಿಲ್ಲಾಪರಿಷತ್ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಗಾಗಿ ನೀವು ಈ ಮೀಸಲಾತಿ ತಂದಿದ್ದೀರೆಂದು. ನನಗೆ ಇದರ ಅಗತ್ಯವೇ ಇರಲಿಲ್ಲ. ನನಗೆ ಗೊತ್ತಿದೆ, ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ 54 ಪರ್ಸೆಂಟ್ ಸೀಟು ನಮಗೆ ಬಂದಿದೆ. 24 ಪರ್ಸೆಂಟ್ ಜನತಾ ದಳಕ್ಕೆ ಹೋಗುತ್ತದೆ. ಅಗ ಗೊತ್ತಿರಲಿಲ್ಲ ಇವರ ಬಣ್ಣ, ಈಗ ಬಣ್ಣ ಬಯಲಾಗಿದೆ. ಈಗ ಗೊತ್ತಾಗುತ್ತದೆ ಎಷ್ಟು ಬರುತ್ತದೆ ಎಂದು. ಆದರೆ ನನ್ನ ಕಂಪ್ಯೂಟರ್‌ನಲ್ಲಿ ನಿನ್ನೆ ವೈಯಕ್ತಿಕ ಭಾಷಣ ಮಾಡಿದ ಪಕ್ಷ ರಿಜಿಸ್ಟರೇ ಆಗಲಿಲ್ಲ. ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ನಾನ್ ಎಕ್ಸಿಸ್ಟಿಂಗ್. ಕಂಪ್ಯೂಟರ್‌ನಲ್ಲಿ 54 ಪರ್ಸೆಂಟ್ ರಿಜಿಸ್ಟರಾಯಿತು. 24 ಪರ್ಸೆಂಟ್ ಜನತಾ ದಳದ್ದು ರಿಜಿಸ್ಟರಾಯಿತು, 9 ಪರ್ಸೆಂಟ್ ಬಿಜೆಪಿಯದು ರಿಜಿಸ್ಟರ್ ಆಯಿತು. ಆದರೆ ಈ ಮಹಾನಾಯಕರು ಮುಂದೆ ನಾವು ಮುಖ್ಯಮಂತ್ರಿಯಾಗುತ್ತೇನೆಂದು ಕನಸು ಕಾಣುವ ವ್ಯಕ್ತಿಯ ಪಕ್ಷ ನನ್ನ ಕಂಪ್ಯೂಟರ್‌ನಲ್ಲಿ ರಿಜಿಸ್ಟರೇ ಆಗಲಿಲ್ಲ. ಮುಂದೆ ಹೇಗೆ ರಿಜಿಸ್ಟರ್ ಆಗುತ್ತದೆ ತಾವೇ ನೋಡಿ. ಆದ್ದರಿಂದ ಅದಕ್ಕಾಗಿ ಚುನಾವಣೆಯನ್ನು ಮುಂದುವರೆಸಿದ್ದಲ್ಲ. ಈಗಾಗಲೇ ನಾನು ಹೇಳಿದಂತೆ ನಮಗೆ ಅಡ್ಮಿಶನ್ಸ್ ಬೇಕಾಗಿತ್ತು. ಇಂಜಿನಿಯರಿಂಗ್ ಮೆಡಿಕಲ್ ಕಾಲೇಜ್‌ಗಳಲ್ಲಿ ಮೀಸಲಾತಿ ತರುತ್ತೇವೆ ಎಂಬ ಆತುರ ಕಳಕಳಿಯಿಂದ ನಾವು ಮೀಸಲಾತಿ ನೀತಿಯನ್ನು ಬದಲಾವಣೆ ಮಾಡಿದ್ದೇವೆ. ಇವತ್ತು ನೀವು ಪ್ರೆಶರ್‌ಗೆ

ಗುರಿಯಾಗಿದ್ದೀರೆಂದು ಜನತಾದಳದ ಶ್ರೀ ರಾಮಕೃಷ್ಣ ಹೆಗಡೆಯವರು ಹೇಳುತ್ತಾರೆ. ಅವರ ನಾಯಕರು ಶ್ರೀ ಎಚ್.ಡಿ. ದೇವೇಗೌಡರನ್ನು ಈಗ ನಾಯಕರು ಎಂದು ಒಪ್ಪಿಕೊಂಡು ಬಿಟ್ಟಿದ್ದಾರೆ ಹೆಗಡೆಯವರು. ಅಲ್ಲಿ ಒಕ್ಕಲಿಗರ ಮೆರವಣಿಗೆ ಪ್ರಾರಂಭ ಮಾಡುವಾಗ ದೊಡ್ಡ ಭಾಷಣ ಹೊಡೆದರು, ಒಕ್ಕಲಿಗರ ನಾಯಕರು, ಕರ್ನಾಟಕದ ನಾಯಕರು ಅಲ್ಲ ಎಂದು ಘೋಷಣೆ ಮಾಡಿ ಅಲ್ಲಿ ಒಂದು ಕಡೆ ಪ್ರೆಶರ್ ಹಾಕುವುದು ಮತ್ತೊಂದು ಕಡೆ ನೀವು ಪ್ರೆಶರ್‌ಗೆ ಒಳಗಾಗಿದ್ದೀರೆಂದು ಹೇಳುವುದು. ಈ ಬಡಾಯಿ ರಾಜಕೀಯ ನಾವು ನೋಡಿದರೆ ಅನೇಕ ಸಾರಿ, ನನಗೆ ಈ ಗತಿಗೆ ಕೆಲವು ನಾಯಕರು ಬರುತ್ತಾ ಇದ್ದಾರಲ್ಲ, ಇಂತಹ ನಾಯಕರು ಕೂಡ ಬಹಳ ತಲೆತಗ್ಗಿಸಿ ಎದೆಯುಬ್ಬಿಸಿ ತಲೆಯೆತ್ತಿ ಈ ರಾಷ್ಟ್ರದಲ್ಲಿ ರಾಜ್ಯದಲ್ಲಿ ತಿರುಗುತ್ತಿದ್ದಾರಲ್ಲ ಇದಕ್ಕಿಂತ ದೊಡ್ಡ ಪ್ರಜಾಪ್ರಭುತ್ವದ ವಿಪರ್ಯಾಸ ಬೇರೆ ಯಾವುದೂ ಇರಲಿಕ್ಕಿಲ್ಲ ಎಂದು ನನಗನ್ನಿಸುತ್ತದೆ. ನ್ಯಾಷನಲ್ ಗ್ರೌಂಡ್‌ನಲ್ಲಿ ಭಾಷಣ ಮಾಡುವುದು ನೀವು ಪ್ರೆಶರ್‌ಗೆ ಬಲಿಯಾಗಿದ್ದೀರೆಂದು ಹೇಳುವುದು. ಇದರ ಬಗ್ಗೆ ಮಾತನಾಡಿ ಮಾತನಾಡಿ ಅಭ್ಯಾಸವಾಗಿದೆ. ಪುಟ್ಟಸ್ವಾಮಿಗೌಡರದು ಏನಾದರೂ ಕಾಮೆಂಟ್ ಇದೆಯಾ ?

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಅವರು ನಾಯಕರಲ್ಲ, ಅವರು ಅಶ್ವಮೇಧಯಾಗದ ಕುದುರೆ.

ಶ್ರೀ ವೈ.ಕೆ. ರಾಮಯ್ಯ:- ಪುಟ್ಟಸ್ವಾಮಿಗೌಡರ ಪ್ರತಿಕ್ರಿಯೆಯನ್ನೇ ಏಕೆ ನೀವು ಕೇಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯಿಲಿ:- ಅಶ್ವಮೇಧಯಾಗದಲ್ಲಿ ಕುದುರೆ ಹೆಸರಿನಲ್ಲಿ ಜೇರೆ ಕತ್ತೆ ಏನಾದರೂ ಬಿಟ್ಟಿದ್ದಿರಾ ಎಂದು ನನಗೆ ಭಯವಾಗುತ್ತದೆ (ನಗು) ಅವರ ನಡವಳಿಕೆ ನೋಡಿದಾಗ ಕುದುರೆ ತಪ್ಪಿ ಈಗ ಕತ್ತೆ ಬಿಟ್ಟುಬಿಟ್ಟಿದ್ದಾರೆ ಅಂತ ಅನ್ನಿಸುತ್ತದೆ. ಅದನ್ನು ಕಟ್ಟಿಹಾಕಲು ಹೋಗಬೇಡಿ. ಪುಟ್ಟಸ್ವಾಮಿಗೌಡರು ಆ ಕತ್ತೆಯನ್ನು ಕಟ್ಟಿಹಾಕಲಿಕ್ಕೆ ಹೋಗಬೇಡಿ. ಅದು ಎಲ್ಲಿಗೂ ಹೋಗುವುದಿಲ್ಲ, ಅಲ್ಲೇ ನಿಲ್ಲುತ್ತದೆ ಗುರಂ ಗುರಂ ಎಂದು.

ಶ್ರೀ ವಾಟಾಳ್ ನಾಗರಾಜ್:- ಕತ್ತೆ ಬಹಳ ಒಳ್ಳೆಯ ಪ್ರಾಣಿ. ಅಶ್ವಮೇಧಯಾಗ ಹೋಗಿ ಕತ್ತೆಮೇಧಯಾಗ ಆಗಬಹುದು. ಆದರೆ ಕತ್ತೆ ಬಹಳ ಒಳ್ಳೆಯ ಪ್ರಾಣಿ. ಆದ್ದರಿಂದ ಕತ್ತೆಗೂ ನೀವು ಏನು ಅಪಮಾನ ಮಾಡುವುದು ಬೇಕಾಗಿಲ್ಲ. ಮೊನ್ನೆ ಏನಾಯಿತು ಎಂದರೆ ಕೇಂದ್ರದಲ್ಲಿ ನಮ್ಮ ರಾಜ್ಯದ ಬಗ್ಗೆ ಕೆಲಸ ಮಾಡಿಲ್ಲ ಎಂದು ಲೋಕಸಭಾ ಸದಸ್ಯರ ಬಗ್ಗೆ ಕತ್ತೆ ಮೆರವಣಿಗೆ ಮಾಡುವುದಕ್ಕೆಂದು ಹೋದಾಗ ಮಾಡಬೇಡಿ ಎಂದು ಹೇಳಿದರು. ಈಗ ಅದಕ್ಕೆ ನಾನು ಯೋಚನೆ ಮಾಡಿ ಎಮ್ಮೆಗಳ ಮೆರವಣಿಗೆ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ನಾವೆಲ್ಲ ಈಗ ಏನು ತಿಳಿದುಕೊಂಡಿದ್ದೇವೆಂದರೆ ನಮ್ಮ ಹಿಂದಿನ ಮುಖ್ಯಮಂತ್ರಿಗಳು, ನಮ್ಮ ಅನೇಕರಿಗೆ ಬಹಳ ನಿರೀಕ್ಷೆ ಇತ್ತು, ಹಿಂದುಳಿದ ವರ್ಗದಿಂದ ಬಂದವರು, ಹಿಂದುಳಿದ ವರ್ಗದವರ ಬಗ್ಗೆ ಬಹಳ ಜೋರಾಗಿ ಭಾಷಣ ಮಾಡುತ್ತಾರೆಂದು ಎಲ್ಲರೂ ನಿರೀಕ್ಷೆ ಮಾಡಿದ್ದೆವು. ಅವರು 86ಆರ್ಡರ್ ಅನ್ನು ಯಾವುದು ರೆಟ್ರೊಗ್ರೇಡ್ ಅಂತಾರೆ, ಅದನ್ನೇ ಆನಂದವಾಗಿ ಮುಂದುವರೆಸಿಕೊಂಡು ಬಂದರು, ಅದನ್ನು ಅನುಷ್ಠಾನ ಮಾಡಲಿಲ್ಲ. ಮತ್ತೆ ನೋಡಲಿಕ್ಕೆ ಹೋದಾಗ there are some people who are backward. ಬ್ಯಾಕ್‌ವರ್ಡ್ ಕ್ಲಾಸ್ ಚಿಂತನೆ ಯಾರಿಗಾಗಿ ಎಂದರೆ ಅವರಿಗಾಗಿ, ಅವರ ಉದ್ದೇಶಕ್ಕಾಗಿ. ಒಟ್ಟು 2 ವರ್ಷಗಳ ಬ್ಯಾಕ್‌ವರ್ಡ್ ಕ್ಲಾಸ್‌ಗಾಗಿ ಕಟ್ಟಿದ್ದು 600 ಮನೆಗಳು. ಈಗ ನಾವು 1 ಲಕ್ಷ ಮನೆಗಳನ್ನು ಒಂದು ವರ್ಷ ಹತ್ತು ತಿಂಗಳಲ್ಲಿ ಕಟ್ಟಿ ಬಡವರಿಗೆ ಬಿಟ್ಟು ಕೊಟ್ಟಿದ್ದೇವೆ. ಪುನಃ 1 ಸಾವಿರ ಮನೆಗಳನ್ನು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಕಟ್ಟಿದ್ದೇವೆ. ನೀವು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ನಾನು ಪಟ್ಟಿ ಕೊಡುತ್ತೇನೆ.

3.15 ಪಿ.ಎಂ.

ಶ್ರೀ ವೈ.ಕೆ. ರಾಮಯ್ಯ:– ಇದೊಂದು ವಿಷಯದಲ್ಲಿ ಸಂಪೂರ್ಣವಾಗಿ ಸಮ್ಮತಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್:– ಇಲ್ಲವೆಂದು ನಾವು ಹೇಳಲೇ ಇಲ್ಲವೇ ಸುಮ್ಮನೆ ನೀವು ನಮ್ಮನ್ನು ಜಗಳಕ್ಕೆ ಕರೆಯುತ್ತಿದ್ದೀರಿ. ಇದು ಸರಿಯಲ್ಲ.

ಶ್ರೀ ವೈ.ಕೆ. ರಾಮಯ್ಯ:– ಹಿಂದಿನ ಮುಖ್ಯ ಮಂತ್ರಿಗಳು ಮೊದಲು ಮಾಡಿದಂತಹ ಮನೆಗಳು ಅರ್ಧಂಬರ್ಧವಾಗಿ ಹಾಗೇ ನಿಂತಿದೆ. ನಿಮ್ಮ ಹಿಂದಿನ ಮುಖ್ಯ ಮಂತ್ರಿಗಳು ಕೆ.ಹೆಚ್.ಬಿ. ಮುಖಾಂತರ ಮಾಡಿದ ಮನೆಗಳು ಅದೇ ಹಂತದಲ್ಲಿ ಸಾವಿರಾರು ನಿಂತಿವೆ. ನೀವು ಮಾಡಿರುವುದು ಪೂರ್ಣವಾಗಿದೆ. ಮಾಡಿರುವುದನ್ನು ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ರಾಮಯ್ಯನವರಿಗೆ ಗೊತ್ತಿದೆ. ಅಭಿನಂದನೆಗಳು, ಅದೇ ಪ್ರಕಾರ ತಮಗೂ ಕೂಡ ಗೊತ್ತಿದೆ. ಹೇಮಾವತಿ ನದಿ ನೀರು ಎಲ್ಲಿ ನಿಂತಿತ್ತು ಎಂದು. ಇವತ್ತು ಬೆಂಗಳೂರಿಗೆ, ತಿಪಟೂರಿಗೆ ತುಮಕೂರಿಗೆ ಬರುತ್ತದೆ.

ಶ್ರೀ ವೈ.ಕೆ. ರಾಮಯ್ಯ:– ನಾನು ಅದಕ್ಕಾಗಿ ಅಭಿನಂದಿಸಿದ್ದೇನೆ. ವಿರೋಧ ಮಾಡಿದಾಗಲೂ ಅಷ್ಟೇ ವಿಶ್ವಾಸದಿಂದಿರಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ:– ಬರಗಾಲದಿಂದ ಕಮರಿ ಹೋದಂತಹ 4–5ಲಕ್ಷ ಎಕರೆ ಜಮೀನಿಗೆ ನೀರನ್ನು ಕೊಡತಕ್ಕಂತಹ ಕೆಲಸವನ್ನು 1 ವರ್ಷ 10 ತಿಂಗಳಲ್ಲಿ ನಾವು ಮಾಡಿದ್ದೇವೆ. ನಮ್ಮ ಪುಟ್ಟಸ್ವಾಮಿಗೌಡರ ಕ್ಷೇತ್ರದಲ್ಲಿ ಮೊನ್ನೆ ಕೆ.ಆರ್. ಸರ್ಕಲ್‌ಗೆ ಹೋಗಿದ್ದೆ. ಕಳೆದ ವರ್ಷ ಈ ವರ್ಷ 48 ಕೋಟಿ 1 ಭಾಗಕ್ಕೆ ಖರ್ಚಾಗಿದೆ. 1 ಲಕ್ಷ 10 ಸಾವಿರ ಎಕರೆ ಜಮೀನಿಗೆ ಅನುಕೂಲವಾಗಿ ಕೆ.ಆರ್. ಸರ್ಕಲ್‌ನಲ್ಲಿ ಹೇಮಾವತಿ ನೀರು ಬಂದಿದೆ. ಇದು ಸತ್ಯ. ಸುಳ್ಳಿನ ಸರಮಾಲೆ ಎಂದು ಭಾಷಣ ಮಾಡಿದರಲ್ಲ್ ಅವರು ಇರಬೇಕಿತ್ತು ಇಲ್ಲಿ. ಪುಕ್ಕಲುತನದಿಂದ ಪಲಾಯನ ಮಾಡುವುದು ಅಲ್ಲ. ಖಡಾಖಡಿಯಾಗಿ ಎದುರು ನಿಂತು ಸತ್ಯದ ದರ್ಶನ ಮಾಡತಕ್ಕಂತಹ ಎದೆಗಾರಿಕೆ ಬೇಕು. ಇಲ್ಲದಿದ್ದರೆ ರಾಜಕಾರಣಿಯಾಗಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಕರ್ನಾಟಕದಂತಹ ಒಂದು ಶೌರ್ಯ ಭೂಮಿಯಲ್ಲಿ ಉತ್ತರ ಕುಮಾರರ ಪೌರುಷ ನಡೆಯುವುದಿಲ್ಲ, ಅದನ್ನು ತಿಳಿದುಕೊಳ್ಳಬೇಕು. ಸುಳ್ಳಿನ ಸರಮಾಲೆ ಎಲ್ಲಿದೆ ಎಂದು ತಾವು ಆಲೋಚನೆ ಮಾಡಬೇಕು. 92–93ರಲ್ಲಿ 8 ತಿಂಗಳಿಗೆ ಯೋಜನೆಗೆ 770 ಕೋಟಿ ಖರ್ಚು ಮಾಡಿದ್ದರೆ ನಾನು ಅಧಿಕಾರ ತೆಗೆದುಕೊಂಡ 5 ತಿಂಗಳಲ್ಲಿ ಮಾರ್ಚ್ 93ರಲ್ಲಿ 1250 ಕೋಟಿ ಖರ್ಚು ಮಾಡಿದ್ದೇನೆ. ಇದು ಸುಳ್ಳ ? ಲೆಕ್ಕ ತರಿಸಿ ನೋಡಿ. ಪ್ಲಾನಿಂಗ್ ಕಮಿಷನ್‌ರಿಂದ, ಅಕೌಂಟೆಂಟ್ ಜನರಲ್‌ರವರಿಂದ ಲೆಕ್ಕ ತರಿಸಿ. ಪ್ಲಾನ್ ಪರ್ಫಾರ್ಮೆನ್ಸ್ ಪರ್ ಕ್ಯಾಪಿಟಾ ಪ್ಲಾನ್ ಔಟ್‌ಲೇಯಲ್ಲಿ 5ನೇ ಜಾಗದಲ್ಲಿದ್ದಂತಹ ಕರ್ನಾಟಕ ಜಾಗ ಇವತ್ತು 1ನೇ ಸ್ಥಾನ ಪಡೆದಿದೆ. ಇವತ್ತು ಪ್ಲಾನಿಂಗ್ ಕಮಿಷನ್ ರೆಕಾರ್ಡ್ ತರಿಸಿ ನೋಡಿ. ಹನುಮೇಗೌಡರು ಹೇಳುತ್ತಾರೆ. ಇದು ಸುಳ್ಳ, ಆಲೋಚನೆ ಮಾಡಿ. ನಿನ್ನೆ ಮಾತನಾಡಿದ ಮಾಜಿ ಮುಖ್ಯಮಂತ್ರಿಗಳು ಎದೆ ತಟ್ಟಿ ಹೇಳುತ್ತಿದ್ದರೆ ಅದನ್ನು ನಂಬಬಹುದು. ಇದನ್ನು ಆಡಲಿಲ್ಲ. ಅದನ್ನು ಬಿಟ್ಟು ಕಂಪ್ಯೂಟರಿನಲ್ಲಿ 5 ಕೋಟಿ ವ್ಯವಹಾರ ಮಾಡಿ ಒಂದೂವರೆ ಕೋಟಿ ರೂಪಾಯಿ ರಾತ್ರಿ ಹಗಲಿನಲ್ಲಿ ಕ್ಯಾಶ್ ತೆಗೆದುಕೊಂಡು, ಇವತ್ತು ಕರ್ನಾಟಕ ರಾಜ್ಯದ ಯಾವುದೇ ಮುಖ್ಯ ಮಂತ್ರಿ ಒಂದು ಸಿ.ಬಿ.ಐ. ಚಾರ್ಜ್‌ನಲ್ಲಿ ಕರಪ್‌ಷನ್ ಚಾರ್ಜ್‌ನಲ್ಲಿ ಅನ್ ಇಂಪೀಚ್ಡ್ ಎವಿಡೆನ್ಸ್ ಇಟ್ಟುಕೊಂಡು ಎದುರಿಸತಕ್ಕಂತಹ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಬರಲಿಲ್ಲ. ಅಂತಹ ಹಿಂದುಳಿದ ವರ್ಗದ ಮುಖ್ಯ ಮಂತ್ರಿಯನ್ನು ಪಡೆಯಬೇಕಾದಂತಹ

ದೌರ್ಭಾಗ್ಯ ನಮ್ಮಂತಹ ಹಿಂದುಳಿದ ವರ್ಗಕ್ಕೆ ಸೇರಿದ ನಮ್ಮೆಲ್ಲರ ಪಾಲಿಗೆ ಬಂದುಬಿಟ್ಟಿದೆ. ಇದು ಬಂದಿದೆ ಅದನ್ನು/ಎದುರಿಸಬೇಕಾದ ಪರಿಸ್ಥಿತಿ ಬಂದಿದೆ.

ಶ್ರೀ ಪ್ರ.ಕೆ. ರಾಮಯ್ಯ:-- ನಾನು ಮಾನ್ಯ ಬಂಗಾರಪ್ಪನವರನ್ನು ಡಿಫೆಂಡ್ ಮಾಡಿಕೊಳ್ಳುತ್ತೇನೆಂದು ಅಲ್ಲ. ಅವರ ಅವಶ್ಯಕತೆಯೂ ಇಲ್ಲ. ಆದರೆ ಈ ಸಂದರ್ಭದಲ್ಲಿ ಇದು ಅಪ್ರಕೃತವೆಂದು ಅನಿಸುತ್ತದೆ. ಮುಂದೆ ಹೇಳುವುದು ನಿಮಗೆ ಬಿಟ್ಟದ್ದು. ನಾನೇನು ಅವರನ್ನು ಡಿಫೆಂಡ್ ಮಾಡಿಕೊಳ್ಳುತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:-- ಡಿಫೆಂಡ್ ಮಾಡಲಿಕ್ಕೆ ಏನೂ ಇಲ್ಲವಲ್ಲ. ಏನು ಅಪ್ರಕೃತವಾಗುತ್ತದೆ.

ಶ್ರೀ ಆರ್. ದಯಾನಂದರಾವ್:-- ರಾಮಯ್ಯನವರೇ ಮಾನ್ಯ ಮುಖ್ಯ ಮಂತ್ರಿಗಳು ಆಗ ಇರಲಿಲ್ಲ. So we have to give printing reply.

ಶ್ರೀ ಎಂ. ವೀರಪ್ಪ ಮೊಯಿಲಿ:-- ಹಿಂದುಳಿದ ವರ್ಗದವರಲ್ಲಿ ಆ ಎರಡು ವರ್ಷಗಳ ಕಾಲದಲ್ಲಿ ಯಾವುದು ಪ್ರಗತಿಯಾಗಿದೆ. ಆರ್ಥಿಕವಾಗಿ ಲಾಭವಾಗಿದೆ. ಮೀಸಲಾತಿಯ ನೀತಿಯನ್ನು ಹೊಸದಾಗಿ ಅವರು ಯಾವ ಕಾಲದಲ್ಲಿ ತಂದಿದ್ದಾರೆ. ಹಿಂದುಳಿದ ವರ್ಗದ ಸ್ಟ್ಯಾಂಡರ್ಡ್ ಆಫ್ ಲಿವಿಂಗ್ ಎಷ್ಟರ ಮಟ್ಟಿಗೆ ಮೇಲೇರಿದೆ ಎಷ್ಟರ ಮಟ್ಟಿಗೆ ಅವರ ಹಕ್ಕನ್ನು ರಕ್ಷಣೆ ಮಾಡತಕ್ಕಂತಹ ಕೆಲಸ ಆ ಕಾಲದಲ್ಲಿ ಆಗಿದೆ. ಇದಕ್ಕಾಗಿ ನಾನು ಹೇಳುತ್ತಿದ್ದೇನೆ. ಇವತ್ತು ಬ್ಯಾಕ್‌ವಾರ್ಡ್ ಕ್ಲಾಸ್, ಮೈನಾರಿಟಿ ಬಗ್ಗೆ ಎಸ್.ಸಿ ಎಸ್.ಟಿ ಬಗ್ಗೆ ನಾವು ಏನು ಹೇಳುತ್ತೇವೆ. ಇದನ್ನು ಲೆಜಿಸ್ಲೇಷನ್‌ನಿಂದು ಮುಂದೆ ತಂದಿದ್ದೇವೆ. To protect their right ಇವತ್ತು ಲೆಜಿಸ್ಲೇಷನ್ ಮತ್ತು ಕಾನ್‌ಸ್ಟಿಟ್ಯೂಷನಲ್ ಪವರ್ ನಾವು ಮೀಸಲಾತಿ ನೀತಿಗೆ ಪ್ರಥಮವಾಗಿ ಕರ್ನಾಟಕ ರಾಜ್ಯದಲ್ಲಿ ಈ ಸಂವಿಧಾನತ್ಮಾಕವಾದಂಥ, ಶಾಸನಾತ್ಮಕವಾದಂಥ ಒಂದು ರಕ್ಷಣೆಯನ್ನು ಕೊಡುವಂಥ ಒಂದು ದೊಡ್ಡ ಹೆಜ್ಜೆಯನ್ನು ಕರ್ನಾಟಕ ರಾಜ್ಯದಲ್ಲಿ ನಾವು ಇಟ್ಟಿದ್ದೇವೆ. ಆದ್ದರಿಂದ ನಮ್ಮ bonafides, ನನ್ನ ಸದಿಚ್ಛೆಯನ್ನು ಪ್ರಶ್ನೆ ಮಾಡತಕ್ಕಂಥ ಅಥವಾ ನಮ್ಮ ಸರ್ಕಾರದ ಸದಿಚ್ಛೆಯನ್ನು ಪ್ರಶ್ನೆ ಮಾಡತಕ್ಕಂಥ ಸಂದರ್ಭ ಇವತ್ತು ಉದ್ಭವವಾಗುವುದಿಲ್ಲ. ನಮಗೆ ಆ ಬದ್ಧತೆ ಇದೆ. ಬರೀ ಮುಖ್ಯಮಂತ್ರಿಯಾಗಿ ಅಲ್ಲ ಅಥವಾ ಬರೀ ನಾನು ಮಂತ್ರಿಯಾಗಿ ಅಲ್ಲ ಈ ಬದ್ಧತೆ ಬಂದದ್ದು ಅಥವಾ ಬರೀ ರಾಜಕೀಯ ಸೇರಿ ಈ ಬದ್ಧತೆ ಬಂದದ್ದಲ್ಲ. ಇವತ್ತು ತಮಗೆ ಗೊತ್ತಿದೆ, ಕಿಸಾನ್ ಸಭಾ ಎಂದು ಹೇಳಿ ಕರೆದೆವು. ನಾನು ರಾಜಕೀಯಕ್ಕೆ ಸೇರುವ ಮೊದಲೇ ಕಿಸಾನ್ ಸಭಾ ಕಟ್ಟಿ ಗೇಣಿದಾರರ ಹಕ್ಕಿಗಾಗಿ ನಾವು ಹೋರಾಟ ಮಾಡಿದ್ದೇವೆ. ಇಷ್ಟು ಮಾತ್ರವಲ್ಲ ನನ್ನ ಕಾದಂಬರಿ ನೋಡಿ. ''ಸಾಗರದೀಪ ತೆಗೆದುಕೊಳ್ಳಿ'' ಸುಳಿಗಾಳಿ, ಗೇಣಿದಾರರ ಸಂಘರ್ಷಣೆಯ ಕಥೆ ಅದು. ಸಾಗರದೀಪ, ಮೀನುಗಾರರ ಸಂಘರ್ಷಣೆಯ ಕಥೆ. ದೊಡ್ಡ ಪರಿಶಿಷ್ಟ ಪಂಗಡಕ್ಕೆ ಸೇರಿದಂಥ ವ್ಯಕ್ತಿಗಳ ಹೋರಾಟದ ಕಥೆ. ನಾವು ಹಿಂದುಳಿದ ವರ್ಗದವರ, ಬಡವರ ಚಿಂತನೆಯಲ್ಲಿ ಉಸಿರಾಡುತ್ತಿದ್ದೇವೆ. ನನ್ನ ಸದಿಚ್ಛೆಯನ್ನು ಪ್ರಶ್ನೆ ಮಾಡತಕ್ಕಂಥ ಒಂದು, ಅಧಿಕಾರ ಈ ಜನರಿಗೆ ಖಂಡಿತವಾಗಿಯೂ ಇಲ್ಲ ಎಂದು ಹೇಳಿ ನಾನು ಇವತ್ತು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಈಗ ಮೀಸಲಾತಿ ನೀತಿ ನಮಗೆ ರಾಜಕೀಯವಲ್ಲ. ಮೀಸಲಾತಿ ನೀತಿ ಒಂದು ಸಾಮಾಜಿಕ ನ್ಯಾಯಕ್ಕಾಗಿ, ನೀತಿಗಾಗಿ ಹೋರಾಟ ಮಾಡತಕ್ಕಂಥ ಹೋರಾಟದ ಒಂದು ಹೆಜ್ಜೆ. ಇದೇ ಪರಮ ಹೆಜ್ಜೆ ಎಂದು ಹೇಳುವುದಿಲ್ಲ. ಇದೇ ಕೊನೆಯ ಹೆಜ್ಜೆ ಎಂದು ಹೇಳುವುದಿಲ್ಲ. ಚುನಾವಣೆ ಬರಲಿ, ಬರದೇ ಇರಲಿ ಇದು ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ, ಪರಿಶಿಷ್ಟ ಜನಾಂಗ, ವರ್ಗದವರ ದೃಷ್ಟಿಯಲ್ಲಿ It is a necessity, but not a luxuary.

ಅವರ ಜೀವನದಲ್ಲಿ ಅತ್ಯಂತ ಅವಶ್ಯಕವಾದಂಥ ಒಂದು ಪ್ರಕ್ರಿಯೆ. ಅದನ್ನು ಯಾವುದೇ ಸಂದರ್ಭದಲ್ಲಿ ನಿಲ್ಲಿಸತಕ್ಕಂಥ ಒಂದು ಹಕ್ಕು ನಮಗೂ ಇಲ್ಲ ಅಥವಾ ಈಗ ಭಾಷಣ ಮಾಡಿ ಇಲ್ಲಿಂದ

ಹೋದಂಥ ಆ ವ್ಯಕ್ತಿಗೂ ಕೂಡ ಇಲ್ಲ ಎಂಬುದನ್ನು ನಾವು ಇವತ್ತು ಸ್ಪಷ್ಟವಾಗಿ ಈ ಸದನದ ಮುಂದೆ ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ; ಬಹಳ ಚರ್ಚೆಗಳು ನಡೆದಿದೆ. ನಾನು ಕೆಲವು ವಿಚಾರಗಳನ್ನು ಮಾತ್ರ ಸದನದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಏಕೆಂದರೆ ಹಿಂದುಳಿದ ವರ್ಗದವರ ವಿಚಾರದಲ್ಲಿ, ಅಲ್ಪಸಂಖ್ಯಾತರ ವಿಚಾರದಲ್ಲಿ ಇವತ್ತು ಮೈನಾರಿಟಿಗೆ 6 ಪರ್ಸೆಂಟ್ ರಿಸರ್ವೇಷನ್ ಕೊಟ್ಟಿದ್ದೇವೆ. ಇವತ್ತು ಹೇಳುತ್ತಾರಲ್ಲ ಭಾಷಣ ಮಾಡಿ, ಮೈನಾರಿಟೀಸ್ ಅನ್ನು ವೋಟನ್ನು ಗಳಿಸಬೇಕು ಎಂದು ಹೇಳಿ ಹೋಗುವ ಈ ವ್ಯಕ್ತಿಗಳು, ಒಂದೂವರೆ, ಎರಡು ಪರ್ಸೆಂಟ್ ಕೂಡ ಮೀಸಲಾತಿಯನ್ನು ದೊರಕಿಸಿ ಕೊಡುವುದಕ್ಕೆ ಕರ್ನಾಟಕ ರಾಜ್ಯದಲ್ಲಿ ಇಷ್ಟರವರೆಗೆ ಸಾಧ್ಯವಾಗಲಿಲ್ಲ. ಇವತ್ತು ಒಂದೂವರೆ ಪರ್ಸೆಂಟ್‌ನಿಂದ, ಆರು ಪರ್ಸೆಂಟ್‌ಗೆ ಅಲ್ಪಸಂಖ್ಯಾತ ಮುಸಲ್ಮಾನ ಜನಾಂಗಕ್ಕೆ ಇವತ್ತು ಮೀಸಲಾತಿಯನ್ನು ನಾವು ಕೊಟ್ಟಿದ್ದೇವೆಲ್ಲ, ಇದರ ಬಗ್ಗೆ ಒಂದು ಶಬ್ದ ಈ ಸದನದ ಹೊರಗೆ, ಈ ಸದನದ ಒಳಗೆ ಮಾಜಿ ಮುಖ್ಯಮಂತ್ರಿಯಾಗಲೀ ಅಥವಾ ರಾಮಕೃಷ್ಣ ಹೆಗಡೆ ಆಗಲಿ, ದೇವೇಗೌಡ ಆಗಲಿ, ದೇಶ್‌ಪಾಂಡೆ ಆಗಲಿ ಇವರ್‍ಯಾರೂ ಕೂಡ ಬಂತೇ ? Do you think they are the champions of weaker sections, minorities and Schedule Castes/Scheduled Tribes? Not even a single gesture of response for having given this kind of reservation which is first of its kind in the State, first of its kind in the entire country.

ಇದನ್ನು ತಡೆಹಿಡಿಯುತಕ್ಕಂಥ ಯಾವ ಶಕ್ತಿ ಯಾರಾದರೂ ಇದ್ದರೂ ಕೂಡ ಇದನ್ನು ತಡೆಹಿಡಿಯಬೇಕು, ಈ ಶಾಸನ ಬರಬಾರದು, ಈ ಮೀಸಲಾತಿ ಅನುಷ್ಠಾನಕ್ಕೆ ಬರಬಾರದು ಎಂದು ಹೇಳಿ ಯಾವ ಶಕ್ತಿ ಕೂಡ ನಮ್ಮನ್ನು ನಿಲ್ಲಿಸಲಾರದು. ನಮ್ಮ ಬದ್ಧತೆ ಅಖಂಡ ಇವತ್ತು. ಇವತ್ತು ಇದರ ಬಗ್ಗೆ ನಾಳೆ ಜನ ಚರ್ಚೆ ಮಾಡಲಿ. ತಮಗೆ ಒಂದೇ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ಇವತ್ತು ನಾವು ಬ್ಯಾಕ್‌ವಾರ್ಡ್ ಕ್ಲಾಸ್ ಬಗ್ಗೆ ಕಾರ್ಪೊರೇಷನ್ ಮತ್ತೊಂದು ಇನ್ನೊಂದು ಕಡೆ ಅಲ್ಲ ಬ್ಯಾಕ್‌ವಾರ್ಡ್ ಕ್ಲಾಸ್ ಡಿಪಾರ್ಟ್‌ಮೆಂಟ್ ತಾವು ನೋಡಿ, ಇದೇ 91–92ರಲ್ಲಿ 31 ಕೋಟಿ ರೂಪಾಯಿ ಖರ್ಚು ಮಾಡಿದ್ದರೆ ನಾನು 93–94ರಲ್ಲಿ 49 ಕೋಟಿ 75 ಲಕ್ಷ ರೂಪಾಯಿಗಳನ್ನು ಬರೀ ಸ್ಕಾಲರ್‌ಷಿಪ್ ಮತ್ತು ಹಾಸ್ಟೆಲ್ ಮತ್ತು ಇನ್ನಿತರ ಸವಲತ್ತುಗಳಿಗೆ ನಾವು ಖರ್ಚು ಮಾಡಿದ್ದೇವೆ. ಇದಕ್ಕೆ ಎಷ್ಟು ಅಂತರ ಇದೆ. ತಾವೇ ಇದನ್ನು ಸ್ಪಷ್ಟವಾಗಿ ಇವತ್ತು ನೋಡುವುದಕ್ಕೆ ಸಾಧ್ಯ ಇದೆ. ಅದೇ ಪ್ರಕಾರ ಎಲ್ಲಾ ಕಾರ್ಯಕ್ರಮಗಳಲ್ಲಿ ನಾನು ಪ್ರತ್ಯೇಕವಾಗಿ ಹೇಳುವುದಕ್ಕೆ ಹೋದರೆ ಬಹಳ ಸಮಯ ಹೋಗುತ್ತದೆ. ಆದರೆ ಮೈನಾರಿಟೀಸ್ ಬಗ್ಗೆ ನೀವು ಒಂದು ಅಂಕಿ ಸಂಖ್ಯೆಯನ್ನು ಮಾತ್ರ ಕೊಡುತ್ತೇನೆ. ಇವತ್ತು 7–2–86ರಿಂದ 15–12–94ರ ವರೆಗೆ ಆರೂವರೆ ವರ್ಷದಲ್ಲಿ to number of beneficiaries minorities 658/– ಆರೂವರೆ ವರ್ಷದಲ್ಲಿ the number of beneficiaries 15ನೇ ಡಿಸೆಂಬರ್ 92, 31–3–94 ಅಂದರೆ ಒಂದು ವರ್ಷ ಮೂರು ತಿಂಗಳಲ್ಲಿ 8192 ಫಲಾನುಭವಿಗಳು. ಆರೂವರೆ ವರ್ಷದಲ್ಲಿ 6581 ಆದರೆ ಒಂದು ವರ್ಷದ ಮೂರು ತಿಂಗಳಲ್ಲಿ 8192 ಫಲಾನುಭವಿಗಳಿಗೆ ಮೈನಾರಿಟೀಸ್‌ಗೆ ಕೊಟ್ಟಂಥದ್ದು ನಮ್ಮ ಸರ್ಕಾರ. ಹಿಂದೆ ಏತಕ್ಕೆ ಆಗಲಿಲ್ಲ ? ಆಮೇಲೆ ನೋಡಿ, ಮಾರ್ಜಿನ್ ಮನಿ ಆರೂವರೆ ವರ್ಷದಲ್ಲಿ 2ಕೋಟಿ 5ಲಕ್ಷ ರೂಪಾಯಿ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಕೊಟ್ಟಿದ್ದರೆ, ಒಂದು ವರ್ಷದ ಮೂರು ತಿಂಗಳಲ್ಲಿ 3 ಕೋಟಿ 12 ಲಕ್ಷ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಅದೇ ಪ್ರಕಾರ ಬ್ಯಾಂಕ್ ಮನಿ ಆರು ಕೋಟಿ 14 ಲಕ್ಷ ರೂಪಾಯಿ ಆರೂವರೆ ವರ್ಷದಲ್ಲಿ ಕೊಟ್ಟಿದ್ದರೆ, ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಒಂದು ವರ್ಷದ ಮೂರು ತಿಂಗಳಲ್ಲಿ 10 ಕೋಟಿ 96 ಲಕ್ಷ ರೂಪಾಯಿಗಳನ್ನು ನಾವು ಒಂದು ವರ್ಷದಲ್ಲಿ ಕೊಟ್ಟಿದ್ದೇವೆ. ಒಟ್ಟು ಆರು ವರ್ಷ ಆರು ತಿಂಗಳಲ್ಲಿ 8 ಕೋಟಿ 19 ಲಕ್ಷ

ಇದೆಲ್ಲ ಒಟ್ಟು ಸೇರಿಸಿ ಹಣವನ್ನು ಕೊಟಿದ್ದರೆ, ನಾವು ಒಂದೇ ವರ್ಷದಲ್ಲಿ 14 ಕೋಟಿ 8 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ. It is around double that figure. ಬಹಳ ಫಿಗರ್ಸ್ ನನ್ನಲ್ಲಿದೆ. First time in the history. ಏಕೆಂದರೆ the bonafides have been questioned. ಇಲ್ಲದಿದ್ದರೆ ನಾನು ಹೇಳುತ್ತಿರಲಿಲ್ಲ. ನಮ್ಮ ರಾಮಯ್ಯನವರು ಹೇಳುತ್ತಿದ್ದಾರೆ, ಇದನ್ನು ಏತಕ್ಕೆ ಹೇಳುತ್ತಿದ್ದೀರಿ ಎಂದು. ಇದನ್ನು ನಾನು ಹೇಳುತ್ತಿರಲಿಲ್ಲ. Since the bonafides have been questioned, I am bound to answer it ಯಾವ ರೀತಿಯಲ್ಲಿ ಸಪ್ಲೈ ಮಾಡುತ್ತೇವೆ, ಯಾವ ರೀತಿಯಲ್ಲಿ ಸ್ಪೆಷಲ್ ಕಾಂಪೊನೆಂಟ್ ಪ್ರೋಗ್ರಾಮ್ ಮಾಡುತ್ತೇವೆ. ಅದೇ ರೀತಿಯಲ್ಲಿ ಬ್ಯಾಕ್‌ವಾರ್ಡ್ ಕ್ಲಾಸ್‌ಗೂ ಮೈನಾರಿಟೀಸ್‌ಗೂ ಕೂಡ ಸಬ್‌ಪ್ಲಾನ್ ರೀತಿಯಲ್ಲಿ ಸ್ಪೆಷಲ್ ಕಾಂಪೊನೆಂಟ್ ರೀತಿಯಲ್ಲಿ ಇವತ್ತು ಕೇಂದ್ರೀಕೃತವಾಗಿ ಈ ಕಾರ್ಯಕ್ರಮವನ್ನು ಪ್ರಾಮಾಣಿಕವಾಗಿ ನಡೆಸಿದಂಥ ಸರ್ಕಾರ ಅದು ನಮ್ಮ ಸರ್ಕಾರ. ಅದು ಈಗಾಗಲೇ ತಮಗೆ ಇವತ್ತು 200 ದಿವಸಗಳ ಕಾರ್ಯಕ್ರಮ, Action plan for development of Backward Classes and minorities ಎಲ್ಲಾ ಪ್ರಿಂಟ್ ಆಗಿದೆ. ಇವತ್ತು ಇದನ್ನು ಮುಚ್ಚಿಡಬೇಕಾದಂಥ ಅಥವಾ ನಿಮ್ಮನ್ನು ವಂಚಿಸಬೇಕಾದಂಥ ಅವಶ್ಯಕತೆ ನಮಗೆ ಇಲ್ಲ. ಇಂಥ ಪ್ರಕ್ರಿಯೆ ಕರ್ನಾಟಕದ ಇತಿಹಾಸದಲ್ಲಿ ಹಿಂದುಳಿದ ವರ್ಗದವರು ಮತ್ತು ಮೈನಾರಿಟೀಸ್ ಬಗ್ಗೆ ಇಲ್ಲಿಯವರೆಗೆ ಆಗಲಿಲ್ಲ. ಮುಂದೆ ಅವರ ಯುಗ ನಡೆಯುತ್ತದೆ. ಅದನ್ನು ನಿಲ್ಲಿಸುವುದಕ್ಕೆ ಯಾರಿಗೂ ಕೂಡ ಅಸಾಧ್ಯ ಎಂಬ ಒಂದು ಮಾತನ್ನು ಇಲ್ಲಿ ನಾನು ವಿಶೇಷವಾಗಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಇನ್ನು ಅನೇಕ ರೀತಿಯ ಕಾರ್ಯಕ್ರಮಗಳ ವಿಚಾರವನ್ನು ನಾನು ಬಿಡಿಸಿ ಬಿಡಿಸಿ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಇವತ್ತು ಏನು ನಾವು ಹೊಸದಾದಂಥ ಪ್ರಕ್ರಿಯೆಯನ್ನು ಏನು ತಂದಿದ್ದೇವೆ, ಕಂಪ್ಯಾರಿಷನ್ ಅನ್ನು ತಾವು ಮಾಡಿದರೂ ಕೂಡ ನೋಡಬಹುದು. ಏಕೆಂದರೆ ಬ್ಯಾಕ್‌ವಾರ್ಡ್ ಹಾವನೂರು ಕಮೀಷನ್‌ನಲ್ಲಿ ತಾವು ನೋಡಬಹುದು. ಕುರುಬಾಸ್ 0.58ಪರ್ಸೆಂಟ್ ಹಾವನೂರು ಕಮೀಷನ್‌ನಲ್ಲಿ ಲಾಭ ಸಿಕ್ಕಿದೆ ಅವರಿಗೆ. 1986ರ ಪ್ರಕಾರ 0.72 ಪರ್ಸೆಂಟ್. ಆದರೆ ನಾವು ಈಗ ಮಾಡಿದ್ದೇವೆ ಎಂದರೆ one full unit – Kurubas are getting 1:1. ಅದೇ ಪ್ರಕಾರ ಹಿಂದುಳಿದ ವರ್ಗದವರಿಗೆ ಏನು ಚಿನ್ನಪ್ಪರೆಡ್ಡಿ ಕಮಿಷನ್ ವರದಿಯನ್ನು ತಿರುವಿ ಹಾಕಿದ್ದಾರೆ ಎಂದು ಅವರು ಹೇಳುತ್ತಾರೆ, ಇದು ತತ್ಕ್ಷಣ 38 ಪರ್ಸೆಂಟ್, 38 ಪರ್ಸೆಂಟನ್ನು fully we have protected 33 ಪರ್ಸೆಂಟ್ ಏಕೆಂದರೆ ಅನೇಕ ಲಿಂಗಾಯಿತರು ಮಕ್ಕಳನ್ನು ಸಬ್ ಕ್ಯಾಸ್ಟ್ ಇದ್ದದ್ದನ್ನು ಕೆಳಗಿನ ಗ್ರೂಫ್‌ಗೆ ಸೇರಿಸಿದ್ದುದರಿಂದ ಇವತ್ತು 5 ಪರ್ಸೆಂಟ್ ಅಲ್ಲಿಗೆ ಷಿಫ್ಟ್ ಆಗಿರಬಹುದು.

ಆದರೆ, ಶೇಕಡ 38ರಷ್ಟು ಮೀಸಲಾತಿಯನ್ನು ಹಿಂದುಳಿದ ವರ್ಗಗಳಿಗೆ ಚಿನ್ನಪ್ಪರೆಡ್ಡಿಯವರು ಏನು ಕೊಟ್ಟಿದ್ದಾರೆ, ಅದನ್ನು ಚಾಚೂ ತಪ್ಪದೆ ಕ್ರೀಮಿ ಲೇಯರ್ ಅನ್ನು ಅನ್ವಯಿಸಿ ಅನುಷ್ಠಾನಗೊಳಿಸುವಂಥ ಪ್ರಾಮಾಣಿಕ ಕೆಲಸವನ್ನು ಇಷ್ಟೊತ್ತು ನಾವು ಮಾಡಿದ್ದೇವೆ ಮತ್ತು ಶೇಕಡ 80ರಷ್ಟಿದ್ದನ್ನು ಶೇಕಡ 73ಕ್ಕೆ ಏತಕ್ಕೋಸ್ಕರ ಇಳಿಸಿದ್ದೀರೆಂದು ತಾವು ಕೇಳಬಹುದು. ಇತರೆ ಹಿಂದುಳಿದ ವರ್ಗ (ಓ.ಬಿ.ಸಿ)ಗಳಿಗೆ ಶೇಕಡ 50ರಷ್ಟು ಮೀಸಲಾತಿ ಯಾವಾಗಲೂ ಕರ್ನಾಟಕದಲ್ಲಿದೆ. ತಮಿಳುನಾಡಿನಲ್ಲಿ ಶೇಕಡ 50ರಷ್ಟಿಲ್ಲ. ಅದನ್ನು ನಾವು ಉಳಿಸಿದ್ದೇವೆ. ಇತರೆ ಹಿಂದುಳಿದ ವರ್ಗದವರಿಗೆ ಶೇಕಡ 50ರಷ್ಟಕ್ಕೆ ನಿಲ್ಲಿಸಿದ್ದೇವೆ. ತಮಿಳುನಾಡಿನಲ್ಲಿ ಪರಿಶಿಷ್ಟ ಜಾತಿ: ಪಂಗಡದವರಿಗೆ ಶೇಕಡ 19ರಷ್ಟಿತ್ತು, ನಮ್ಮ ರಾಜ್ಯದಲ್ಲಿ ಶೇಕಡ 23ರಷ್ಟಿದ್ದರಿಂದ ಅವರಂತೆ ಒಟ್ಟಾರೆ ಶೇಕಡ 69 ಆಗಲಿಲ್ಲ ಶೇಕಡ 73ರಷ್ಟಾಯಿತು. This is the Logic. ಇದು ತಾರ್ಕಿಕವಾಗಿದೆ. ಇದು ನಾವು ಕೈಗೊಂಡಂಥ ವಿಚಾರವಾಗಿದೆ. ಇದು ಅತರ್ಕಿಕವಾದುದು, ಎಂದು ಅಥವಾ illogical ಎಂದು ಹೇಳುವಂಥ ಪರಿಸ್ಥಿತಿ ಖಂಡಿತಾ ಇಲ್ಲ. ಹಾವನೂರು ಆಯೋಗವು ಅಂಗವಿಕಲರು ಮತ್ತು ಮಾಜಿ ಸೈನಿಕರನ್ನು ಸೇರಿಸಿ ವರ್ಟಿಕಲ್ ಆಗಿ ಬಿಲ್ಡ್ ಅಫ್ ಮಾಡಿದ್ದರೆ ನಾವು ಹಾರಿಜಾಂಟಲ್ ಆಗಿ ಬಿಲ್ಡ್ ಅಫ್ ಮಾಡಿ ಶೇಕಡ 73ರಷ್ಟು ಮಾಡಿದ್ದೇವೆ.

ಆದುದರಿಂದ, ಎಲ್ಲಾ ತರ್ಕಗಳಿಗೆ, ಕಾನೂನಿಗೆ ಮತ್ತು ಸಂವಿಧಾನಕ್ಕೆ ತಕ್ಕದಾದ ಸರಿಯಾದ ರೀತಿಯಲ್ಲಿ ಇದನ್ನು ಅನುಸರಿಸಿದ್ದೇವೆಂಬ ಒಂದು ಮಾತನ್ನು ಇವೊತ್ತು ಹೇಳುವುದಕ್ಕೆ ನಾನು ಅಪೇಕ್ಷೆಪಡುತ್ತೇನೆ. ಯಾವುದು ಕ್ರೀಮೀ ಲೇಯರ್ ಇದೆ, ಅದನ್ನು ಯಾವಾಗಲೂ ಕೂಡ ತಪ್ಪಿಸದ ರೀತಿಯಲ್ಲಿ ಒಂದು ಲಕ್ಷ್ಮಣ ರೇಖೆ ಹಾಕಿದ್ದು, ಹಿಂದೆ ಬೋಗಸ್ ಸರ್ಟಿಫಿಕೇಟ್ ಮತ್ತೊಂದು ಪಡೆಯತಕ್ಕಂಥ ಪರಿಸ್ಥಿತಿ ಇದ್ದರೆ ಈಗ ಅದಕ್ಕೆ ಯಾವುದೇ ರೀತಿಯಲ್ಲೂ ಅವಕಾಶ ಕೊಡದೆ ಸ್ಪಷ್ಟವಾದ, ನಿಚ್ಚಳವಾದ ಮೀಸಲಾತಿ ಕೊಟ್ಟಿದ್ದೇವೆ. ನಾನು ಮೊನ್ನೆ ಹೇಳಿದಂತೆ, ನಮ್ಮ ಶೂದ್ರ ಜನಾಂಗವೇನಿದೆ ಮತ್ತು ಒಕ್ಕಲಿಗರು ಲಿಂಗಾಯಿತ ಜನಾಂಗದವರೇನಿದ್ದಾರೆ. ಇಡೀ ಶೂದ್ರ ಜನಾಂಗಕ್ಕೆ ಇವೊತ್ತು ಮೀಸಲಾತಿಯ ಒಂದು ದಾರದ ನೀತಿಯನ್ನು ಕೊಟ್ಟಂಥ, ನಿಚ್ಚಳವಾಗಿ, ಸ್ಪಷ್ಟವಾಗಿ ಇಲ್ಲಿವರೆವಿಗೂ ಇಂತಹ ಒಂದು ನಿರ್ದಿಷ್ಟವಾದ ಸೂಚನೆಯನ್ನು ಇಟ್ಟುಕೊಂಡು ಸಾಮಾಜಿಕ ನ್ಯಾಯಕ್ಕೆ ಸಂಪೂರ್ಣ ಪೂರಕವಾದ ಪ್ರಕ್ರಿಯೆ ಇರತಕ್ಕಂಥ ಒಂದು ಮೀಸಲಾತಿ ನೀತಿಯನ್ನು ಇವೊತ್ತು ನಾವು ತಂದಿದ್ದೇವೆ. ಹಿಂದೆ ನಮ್ಮ ಸಮಯ ಸಾಧಕತನಕ್ಕಾಗಿ equal, unequals ಅನ್ನು ಒಂದೇ ಗುಂಪಿನಲ್ಲಿ ಸೇರಿಸಿದ್ದುದು ಇದೆ. ಆದರೆ ಅದೂ ಇಲ್ಲದೆ ಸಮಾನವಾಗಿ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಸಮೂಹವನ್ನು ಒಂದೊಂದು ಗುಂಪಿನಲ್ಲಿ ಹಾಕಿ ಆ ಪದರದಲ್ಲಿರುವ ಎಲ್ಲರಿಗೂ ಕೂಡ ಸಾಮಾಜಿಕ ನ್ಯಾಯ ಸಿಂಪಡಿಸಿ, ಸರ್ವರೂ ಸಹ ಸರಿಯಾದ ರೀತಿಯಲ್ಲಿ ಮೀಸಲಾತಿ ಅನುಭವಿಸುವಂತೆ ಯಾವುದೇ ಒಂದು ಗುಂಪಿನಲ್ಲಿರುವ ವರ್ಗದವರೂ ಕೂಡ ಹತಾಶರಾಗದೆ ಅಥವಾ ಅಸಹಾಯಕರಾಗಿ ಉಳಿಯದ ರೀತಿಯಲ್ಲಿ ನಮ್ಮ ನೀತಿಯನ್ನು ನಾವು ಸಮರ್ಪಕವಾಗಿ, ಸಮಂಜಸವಾಗಿ ತಂದಿದ್ದೇವೆ. ಅಲ್ಲದೆ, ಇದನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಲು ಕೂಡ ಪ್ರತ್ಯೇಕವಾದ ನಿರ್ಣಯವನ್ನು ಇಲ್ಲಿ ತಂದಿದ್ದೇವೆ. ಆದುದರಿಂದ, ಇಂತಹ ಒಂದು ಐತಿಹಾಸಿಕ ದಿವಸವಾದ ಇಂದು ಇಲ್ಲಿ ನಮ್ಮ ಅನೇಕ ಹಿರಿಯ ಮಾನ್ಯ ಸ್ನೇಹಿತರು ನಮ್ಮ ಜೊತೆಯಲ್ಲಿ ಇಲ್ಲವಲ್ಲ ಎನ್ನುವ ವಿಶೇಷ ದುಃಖ ವ್ಯಕ್ತಪಡಿಸಿ ಇದನ್ನು ನಾವೆಲ್ಲರೂ ಮಂಜೂರು ಮಾಡಬೇಕಾದಂಥ ಪ್ರಮೇಯ ಬಂದಿದೆ. ಇನ್ನಾದರೂ ಕೂಡ ವಿವೇಚನೆ ಬಂದು, ನಿಜವಾದ ಸಾಮಾಜಿಕ ನ್ಯಾಯವನ್ನು ಇವೊತ್ತು ಅರ್ಹರಾದ ಜನರಿಗೆ ಮುಟ್ಟಿಸುವಲ್ಲಿ ರಾಜಕೀಯ ಬೆರೆಸದೆ ಚುನಾವಣೆ ಇದೆ, ಚುನಾವಣೆ ಇಲ್ಲ ಎಂದು ಮತ್ತೊಂದು ನೆಪಗಳಿಂದ ಸಾಮಾಜಿಕ ನೀತಿಯ ಬಗ್ಗೆ ಸ್ಪಷ್ಟವಾದ, ದಿಟ್ಟವಾದ ನೀತಿಯನ್ನು ತೆಗೆದುಕೊಳ್ಳುವುದಕ್ಕೆ ಅಸಹಾಯಕವಾದ ವ್ಯಕ್ತಿಗಳ ಬಗ್ಗೆ ನಾನು ವಿಶೇಷವಾದ ಅನುಕಂಪವನ್ನು ತೋರಿಸಿ, ಇಂತಹ ಒಂದು ಐತಿಹಾಸಿಕ ಪ್ರಸಿದ್ಧವಾದ, ಅದ್ವಿತೀಯವಾದ ಮತ್ತು ಕರ್ನಾಟಕ ರಾಜ್ಯದ ನಿಜವಾದ ಬಡವರ, ಹಿಂದುಳಿದ ವರ್ಗದವರ, ಅಲ್ಪಸಂಖ್ಯಾತರ, ಪರಿಶಿಷ್ಟ ಜಾತಿ: ವರ್ಗದವರ ಜೀವನದಲ್ಲಿ ಒಂದು ಹೊಸ ಆಯಾಮವನ್ನು ಒಂದು ಹೊಸ ಯುಗವನ್ನು ತರತಕ್ಕಂಥ ಈ ಮಸೂದೆಗೆ ತಾವು ಕೊಟ್ಟಂಥ ಬೆಂಬಲಕ್ಕಾಗಿ ವಿಶೇಷವಾದ ನನ್ನ ಅನಂತ ವಂದನೆ ಹಾಗೂ ಕೃತಜ್ಞತೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ರಾಮಯ್ಯನವರೇ ತಾವು ಒಂದು ಮಾಹಿತಿ ಕೇಳಿದ್ದಿರಿ. ಅದನ್ನು ಈಗ ಕೊಡುತ್ತಿದ್ದೇನೆ. ಚಿನ್ನಪ್ಪರೆಡ್ಡಿ ಆಯೋಗದ ವರದಿ ಪ್ರಕಾರ ವರ್ಗ 1ಕ್ಕೆ ಶೇಕಡ 5ರಷ್ಟು ಮೀಸಲಾತಿ ಇದ್ದು ಅದರ ಜನಸಂಖ್ಯೆ ಶೇಕಡ 7, ವರ್ಗ 2ಕ್ಕೆ ಶೇಕಡ 28ರಷ್ಟು ಮೀಸಲಾತಿ ಇದ್ದು ಅದರ ಜನಸಂಖ್ಯೆ ಶೇಕಡ 29ರಷ್ಟು. ಒಟ್ಟು ಶೇಕಡ 36ರಷ್ಟರ ಜನಸಂಖ್ಯೆಗೆ ಮೀಸಲಾತಿ ಇಟ್ಟಿರುವುದು ಶೇಕಡ 33ರಷ್ಟು.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ, ಮುಖ್ಯಮಂತ್ರಿಯವರು ಮಾತನಾಡಿ ಈ ದಿನ ಚರಿತ್ರಾರ್ಹವಾದುದೆಂದು ಪ್ರಸ್ತಾಪಿಸಿದ್ದಾರೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವರು ಮತ್ತೊಂದು ಉತ್ತಮವಾದಂಥ ಮಾತನ್ನು ಹೇಳಿದ್ದಾರೆ. ಅದೇನೆಂದರೆ ಯಾರಾದರು ಬರಲಿ

ಯಾರಾದರು ಹೋಗಲಿ ಇತಿಹಾಸ ಮಾತ್ರ ನಿಲ್ಲುವುದಿಲ್ಲ ಅದು ಮುಂದುವರೆದುಕೊಂಡು ಹೋಗುತ್ತದೆಂದು. ಇತಿಹಾಸ ನಿಲ್ಲುವುದಿಲ್ಲ ಮಾತ್ರವಲ್ಲ ಇತಿಹಾಸದಲ್ಲಿ ಯಾರ‍್ಯಾರದ್ದು ಏನೇನು ಪಾತ್ರವಿತ್ತು ಎನ್ನತಕ್ಕದನ್ನು ಕೂಡ ನೋಂದಾಯಿಸಲ್ಪಡುತ್ತದೆ. ಈ ಸದನ ಇರತಕ್ಕದ್ದು ಬರುವುದಕ್ಕಾಗಿಯೇ ಹೊರತು ಬಹಿಷ್ಕಾರ ಮಾಡುವುದಕ್ಕಲ್ಲ. ಜನರು ನಮ್ಮನ್ನ ಕಳಿಸಿರತಕ್ಕದ್ದು ಇಲ್ಲಿಂದ ಓಡಿಹೋಗಲು ಅಲ್ಲ, ಪಲಾಯನ ಮಾಡುವುದಕ್ಕಲ್ಲ. ನಾನು ನಿಮ್ಮ ಜೊತೆ ಬೇಕಾದರೆ ಒಬ್ಬನೇ ಹೋರಾಡುತ್ತೇನೆ. ಆದರೆ ಪಲಾಯನ ಮಾಡತಕ್ಕ ಜಾಯಮಾನ ನನ್ನದಲ್ಲ. ಆ ದೃಷ್ಟಿಯಿಂದ ನಾನೊಬ್ಬನೆ ಆದರೂ ಪರವಾಗಿಲ್ಲವೆಂದು ನಿನ್ನೆಯಿಂದ ನಾನು ಇಲ್ಲಿ ಬಿಗಿಯಾಗಿ ಕುಳಿತುಕೊಂಡಿದ್ದೇನೆ. ಈ ವರದಿಯನ್ನು ನಾವ್ಯಾರು ವಿರೋಧ ಮಾಡಿಲಿಲ್ಲ. ನೀವು ಆವತ್ತು ಚಿನ್ನಪ್ಪರೆಡ್ಡಿ ವರದಿಯನ್ನು ಸ್ವಾಗತಿಸಿದ್ದಿರಿ ಇಂದು ವಿರೋಧ ಮಾಡುತ್ತೀರಿ ಎಂದು ವಿರೋಧ ಪಕ್ಷಕ್ಕೆ ಮುಖ್ಯಮಂತ್ರಿಗಳು ಕೇಳುತ್ತಿದ್ದಾರೆ. ಆದರೆ ನಾನು ಅವತ್ತು ಸಹ ಇದನ್ನು ಸ್ವಾಗತಿಸಿದ್ದೆ ಈವತ್ತು ಸಹ ಸ್ವಾಗತಿಸುತ್ತೇನೆ. ಆದರೆ ನನ್ನ ಒಂದೇ ಒಂದು ಬೇಡಿಕೆ ಏನೆಂದರೆ ಆ ವರದಿಯನ್ನು ಬದಲಾವಣೆ ಮಾಡದೆಯೆ ವಿಕೃತಗೊಳಿಸದೇ ಅದು ಹೇಗೆ ಇದೆಯೊ ಹಾಗೆಯೇ ಅನುಷ್ಟಾನಕ್ಕೆ ತರಬೇಕು. ಎರಡನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಸಾಧನೆಯನ್ನು ನಾನು ಹೊರಗಡೆಯು ಅಭಿನಂದಿಸಿದ್ದೇನೆ, ಒಳಗಡೆಯು ಸಹ ಅಭಿನಂದಿಸುತ್ತೇನೆ. ಆಶ್ರಯ ಮನೆಗಳ ವಿಷಯದಲ್ಲಿ ಮಾನ್ಯ ಬಂಗಾರಪ್ಪನವರ ಕಾಲದಲ್ಲಿ ನಡೆದಂಥ ಹಗರಣಗಳ ಬಗ್ಗೆ ಅದನ್ನಾರು ಮೆಚ್ಚತಕ್ಕದಲ್ಲ. ನಾನೇನಾದರೂ ಅವರ ಪಕ್ಷಕ್ಕೆ ಸೇರಿಕೊಂಡಿದ್ದರೆ ನಾನೂ ಸಹ ಅದನ್ನು ಅಲ್ಲೇ ವಿರೋಧ ಮಾಡುತ್ತಿದ್ದೇನೊ ಏನೋ ? ನಾನೂ ಸಹ ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷನಾಗಿ ಎರಡು ವರ್ಷ ಸೇವೆ ಮಾಡಿದ್ದೇನೆ. ಬಂಗಾರಪ್ಪನವರ ಕಾಲದಲ್ಲಿ ಗೃಹ ಮಂಡಳಿಯವರಿಂದ ಪ್ರಾರಂಭ ಮಾಡಿದಂಥ ಲಕ್ಷಾಂತರ ಮನೆಗಳು ಇವತ್ತಿನವರೆಗೂ ಸಹ ಅರ್ಧಬರ್ಧವಾಗಿದೆ. ಆದರೆ ಈ ಸರ್ಕಾರದವರು ಪ್ರಾರಂಭ ಮಾಡಿದಂಥ ಎಲ್ಲಾ ಮನೆಗಳು ಸಹ ಇವತ್ತು ಪೂರ್ಣವಾಗುವ ಸ್ಥಿತಿಯಲ್ಲಿದೆ. ಅದಕ್ಕಾಗಿ ನಾನು ಈ ಸರ್ಕಾರವನ್ನು ಅಭಿನಂದಿಸುತ್ತೇನೆ. ಅನಂತರ ಹೇಮಾವತಿಗೂ ಸಹ ಹಣವನ್ನು ಕೊಟ್ಟಿದ್ದೀರಿ. ನಾನು ತುಮಕೂರಿನಲ್ಲಿ ನನ್ನ ಪಕ್ಷದವರ ಎದುರಿನಲ್ಲಿಯೇ ನಾನು ನಿಮ್ಮ ಜೊತೆ ಸೇರಿಕೊಂಡಿದ್ದಾರೆಂದು ಹೇಳಿದರು ಪರವಾಗಿಲ್ಲವೆಂದು ತಮಗೆ ಅಭಿನಂದನೆಯನ್ನು ಸಲ್ಲಿಸಿದ್ದೇನೆ. ಈ ಸದನದಲ್ಲಿ ಸಹ ತಮಗೆ ಅಭಿನಂದಿಸುತ್ತೇನೆ. ತಾವು 25ನೇ ತಾರೀಖು ಅಲ್ಲಿಗೆ ಬಂದು ಪೂಜೆಯನ್ನು ಮಾಡುತ್ತೀರಿ ಎನ್ನತಕ್ಕ ವದಂತಿ ಬಂದಿದೆ, ತಾವು ನನ್ನನ್ನು ಕರೆದರೆ ನಾನು ಅಂದು ಸಹ ಬಂದು ತಮಗೆ ಅಭಿನಂದಿಸುತ್ತೇನೆ. ನನಗೆ ಯಾರ ಭಯವು ಸಹ ಇಲ್ಲ. ನನ್ನ ಇನ್ನೊಂದು ಪ್ರಾರ್ಥನೆ ಏನೆಂದರೆ ನೀವು ಮಾಡಿದಂಥ ಒಳ್ಳೆಯ ಕೆಲಸಗಳನ್ನು ಅಭಿನಂದಿಸುವಾಗ ಎಷ್ಟು ಸಂತೋಷವಾಗುತ್ತದೊ ಹಾಗೆಯೆ ನಿಮ್ಮ ವಿಫಲತೆಯ ಬಗ್ಗೆ ನಾವು ಕಟುವಾಗಿ ನಡೆದುಕೊಂಡರೆ ಅದನ್ನು ಕೂಡ ಸ್ವೀಕರಿಸತಕ್ಕ ವಿಶಾಲತೆ ನಿಮಗೆ ಇರಬೇಕಾಗುತ್ತದೆ ಮತ್ತು ನಮಗೂ ಇರಬೇಕಾಗುತ್ತದೆ. ತಾವು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೀರಿ. Editorial ಓದಿರಿ. Hege surrendered – Hegde succumbed to Vokaliga group. ನೀವು ಸಹ ಅದರಿಂದ ಹೊರತಾಗಿಲ್ಲವೆಂದು ನಾನು ನೋವಿನಿಂದ ಹೇಳುತ್ತಿದ್ದೇನೆ. ಅದನ್ನು ನೀವು ಒಪ್ಪಿಕೊಳ್ಳಿ ಅಥವಾ ಬಿಡಿ ನನಗೆ ಅದು ಗೊತ್ತಿಲ್ಲ. ಯಾವ ಶಕ್ತಿಗಳಿಗೆ, ಹಿತಾಸಕ್ತಿಗಳಿಗೆ ಹೆಗಡೆಯವರು ಸರಂಡರ್, ಸಕಂಬ್ ಆದರೋ ನೀವೂ ಕೂಡ ಅದನ್ನೇ ಮಾಡಿದ್ದೀರಿ ಎನ್ನತಕ್ಕ ಮಾತನ್ನು ಅದು ತಮಗೆ ಹಿಡಿಸದಿದ್ದರು ಸಹ ವಿದಿಯೇ ಇಲ್ಲದೆ ಹೇಳಬೇಕಾಗುತ್ತದೆ. ನಾನು ಮಂತ್ರಿಗಳಿಗೆ ಚಿನ್ನಪ್ಪರೆಡ್ಡಿ ಆಯೋಗದ ವರದಿಯಲ್ಲಿನ ಅಂಕಿಅಂಶಗಳನ್ನು ಕೇಳಿದ್ದೆ. ಅದಕ್ಕೆ ತಮ್ಮಿಂದ ಉತ್ತರ ಬರಲಿಲ್ಲ. ಅದೇನೆಂದರೆ ಚಿನಪ್ಪರೆಡ್ಡಿ ಆಯೋಗದ ಮೂಲ ವರದಿಯನ್ನು ಮೀಸಲಾತಿಯ ಮಿತಿಗೆ ಬರುತ್ತಿರತಕ್ಕ ಜನಸಂಖ್ಯೆಯ ಸಂಖ್ಯೆ ಎಷ್ಟು ಎಂದು ಕೇಳಿದ್ದೆ.

ಶ್ರೀ ಕಾಗೋಡು ತಿಮ್ಮಪ್ಪ:– ಒಂದು ಕೋಟಿ ಐವತ್ತೇಳು ಲಕ್ಷ ಜನರು ಬರುತ್ತಾರೆ. ಈಗ ಎರಡು

ಕೋಟಿಯಾಗಬಹುದು. ಈಗ ಒಂದು ವರ್ಗವನ್ನು ಅದಕ್ಕೆ ಹೊಸದಾಗಿ ಸೇರಿಸುವುದರಿಂದ, ಜಾಸ್ತಿ ಮಾಡಿರುವುದರಿಂದ ಅದನ್ನು ಲೆಕ್ಕ ಮಾಡಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ:– ಮಾನ್ಯ ನಂಜುಂಡಸ್ವಾಮಿಯವರು ಒಂದು ವಿಚಾರವನ್ನು ಹೇಳಿದ್ದರು. ಅವರು ಈಗ ಸಭೆಯಲ್ಲಿ ಇಲ್ಲ. ಅವರು ಏಕ ಶಿಕ್ಷಕರ ಶಾಲೆಗಳು ಬಹಳ ಇದೆ. ಆ ರೀತಿ ಶಾಲೆಗಳ ಕರ್ನಾಟಕದಲ್ಲಿರುವಷ್ಟು ಬೇರೆ ರಾಜ್ಯಗಳಲ್ಲಿ ಇಲ್ಲವೆಂದು ಹೇಳಿದ್ದಾರೆ. ಅವರು ಹೇಳಿರುವುದು ಬಹಳ ಹಿಂದಿನ ವರದಿ. ಈಗ ಎಲ್ಲೂ ಸಹ ಆ ರೀತಿ ಇಲ್ಲ. ನಾವು ಏಕ ಶಿಕ್ಷಕರಿದ್ದ ಶಾಲೆಗಳಿಗೆ ಎರಡೆರಡು ಶಿಕ್ಷಕರನ್ನು ಕೊಟ್ಟಿದ್ದೇವೆ. 1993–94ರಲ್ಲಿ 31,236 ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೇವೆ. ಈ ವರ್ಷ ಅಂದರೆ 1994–95ಕ್ಕೆ 18,934 ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಆದ್ದರಿಂದ ತಾವು ಹೇಳಿರುವುದು ಬಹಳ ಹಳೆಯ ಲೆಕ್ಕ. ತಾವು ತಪ್ಪು ತಿಳಿದುಕೊಳ್ಳಬಾರದು. ಅದು ನಾಲ್ಕು ವರ್ಷದ ಹಿಂದಿನ ಚರಿತ್ರೆ. ಆದರೆ ಈಗ ಎಲ್ಲೂ ಏಕ ಶಿಕ್ಷಕರು ಇಲ್ಲ, ಬಹಳ ಬದಲಾವಣೆಯಾಗಿದೆ. ಎರಡು ವರ್ಷದಲ್ಲಿ ನಾವು ನಲವತ್ತು ಸಾವಿರರು ಶಿಕ್ಷಕರನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ:

"1994ರ ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2ಕ್ಕೆ ತಿದ್ದುಪಡಿ

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 2ರಲ್ಲಿ (1)ನೇ ಉಪ ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸುವುದು.

"1) ನಾಗರಿಕರ ಹಿಂದುಳಿದ ವರ್ಗಗಳು" ಎಂದರೆ ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ ಕಾಲ ಕಾಲಕ್ಕೆ ಅಧಿಸೂಚಿಸಬಹುದಾದ "ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ವರ್ಗ ಅಥವಾ ವರ್ಗಗಳು"

ಪ್ರಸ್ತಾಪ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ:

ಖಂಡ 2ರ (1)ನೇ ಉಪಖಂಡದಲ್ಲಿ "(1) ನಾಗರಿಕ ಹಿಂದುಳಿದ ವರ್ಗಗಳು" ಎಂದರೆ, ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ ಕಾಲಕಾಲಕ್ಕೆ ಅಧಿಸೂಚಿಸಬಹುದಾದ "ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ನಾಗರಿಕರ ವರ್ಗ ಅಥವಾ ವರ್ಗಗಳು" ಎಂದು ಪ್ರತಿಯೋಜಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ:

''ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾಪ ಅಂಗೀಕರಿಲ್ಪಟ್ಟಿತು ಹಾಗೂ ಖಂಡ 2 ತಿದ್ದುಪಡಿಯಾದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 3

ಅಧ್ಯಕ್ಷರು:– ಖಂಡ 3 ಈ ವಿಧೇಯಕದ ಅಂಗವಾಗಿರುತ್ತದೆ.

ಖಂಡ 4

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 4ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

''4ನೇ ಖಂಡದಲ್ಲಿ 'ಶೇಕಡ ಎಂಬತ್ತರಷ್ಟಿರತಕ್ಕದ್ದು' ಎಂಬ ಪದಗಳಿಗೆ 'ಶೇಕಡ ಎಪ್ಪತ್ತೂ್ಮರರಷ್ಟಿರತಕ್ಕದ್ದು' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು''

ಪ್ರಸ್ತಾಪ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ:

4ನೇ ಖಂಡದಲ್ಲಿ ''ಶೇಕಡ ಎಂಬತ್ತರಷ್ಟಿರತಕ್ಕದ್ದು' ಎಂಬ ಪದಗಳಿಗೆ ''ಶೇಕಡ ಎಪ್ಪತ್ತೂ್ಮರರಷ್ಟಿರತಕ್ಕದ್ದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 4 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ:

''ಖಂಡ 4 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 4 ತಿದ್ದುಪಡಿಯಾದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 5

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 5ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

''5ನೇ ಖಂಡದಲ್ಲಿ ''ಶೇಕಡ ಎಂಬತ್ತರಷ್ಟಿರತಕ್ಕದ್ದು'' ಎಂಬ ಪದಗಳಿಗೆ ''ಶೇಕಡ ಎಪ್ಪತ್ತೂ್ಮರರಷ್ಟಿರತಕ್ಕದ್ದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾಪ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ:

5ನೇ ಖಂಡದಲ್ಲಿ ''ಶೇಕಡ ಎಂಬತ್ತರಷ್ಟಿರತಕ್ಕದ್ದು'' ಎಂಬ ಪದಗಳಿಗೆ ''ಶೇಕಡ ಎಪ್ಪತ್ತೂ್ಮರರಷ್ಟಿರತಕ್ಕದ್ದು'' ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 5 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ:

''ಖಂಡ 5 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ''

(ಪ್ರಸ್ತಾಪ ಅಂಗೀಕರಿಲ್ಪಟ್ಟಿತು ಹಾಗೂ ಖಂಡ 5 ತಿದ್ದುಪಡಿಯಾದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

3.45 ಪಿ.ಎಂ.

ಖಂಡ 6 ತಿದ್ದುಪಡಿ

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಖಂಡ 6ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

''ಪ್ರಸ್ತಾಪ ಏನೆಂದರೆ, ಸದರಿ ವಿಧೇಯಕದ ಖಂಡ 6ರಲ್ಲಿ, (1)ನೇ ಉಪಖಂಡದ ಪರಂತುಕದ (4)ನೇ ಬಾಬಿನ ಬದಲು ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

''(4) ತಂದೆ ಅಥವಾ ತಾಯಿ ಅಥವಾ ಇಬ್ಬರೂ ಸೇರಿದಂತೆ ಮಳೆ ಆಧಾರಿತ ಹತ್ತು ಹೆಕ್ಟೇರಿಗಿಂತ ಹೆಚ್ಚು ತರಿ ಜಮೀನು ಅಥವಾ ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರಲ್ಲಿ (1962ರ ಕರ್ನಾಟಕ ಅಧಿನಿಯಮ 10) ನಿರ್ದಿಷ್ಟಪಡಿಸಲಾದಂತೆ ಅದಕ್ಕೆ ಸರಿಸಮನಾದ ಜಮೀನನ್ನು ಹೊಂದಿದ್ದರೆ,

ಪ್ರಸ್ತಾಪ ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ ಸದರಿ ವಿಧೇಯಕದ ಖಂಡ 6ರಲ್ಲಿ, (1)ನೇ ಉಪಖಂಡದ ಪರಂತುಕದ (4)ನೇ ಬಾಬಿನ ಬದಲು ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:

''(4) ತಂದೆ ಅಥವಾ ತಾಯಿ ಅಥವಾ ಇಬ್ಬರೂ ಸೇರಿದಂತೆ ಮಲೆ ಆಧಾರಿತ ಹತ್ತು ಹೆಕ್ಟೇರಿಗಿಂತ ಹೆಚ್ಚು ತರಿ ಜಮೀನು ಅಥವಾ ಕರ್ನಾಟಕ ಭೂ ಸುಧಾರಣಾ ಅಧಿನಿಯಮ, 1961ರಲ್ಲಿ (1962ರಲ್ಲಿ ಕರ್ನಾಟಕ ಅಧಿನೀಯಮ 10) ನಿರ್ದಿಷ್ಟಪಡಿಸಲಾದಂತೆ ಅದಕ್ಕೆ ಸರಿಸಮನಾದ ಜಮೀನನ್ನು ಹೊಂದಿದ್ದರೆ,''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ 6 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ ''ಖಂಡ 4 ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ 6 ತಿದ್ದುಪಡಿಯಾದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 7ರಿಂದ 9ರವರೆಗೆ

ಅಧ್ಯಕ್ಷರು:– ''ಖಂಡ 7ರಿಂದ 9ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

(ಖಂಡ 7ರಿಂದ 9ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅನುಸೂಚಿ

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):– ಮಾನ್ಯ ಅಧ್ಯಕ್ಷರೆ, ಈ ವಿಧೇಯಕಕ್ಕೆ ಲಗತ್ತಿಸಿರುವ ಅನುಸೂಚಿಗೆ ಬದಲಾಗಿ ಈ ಮುಂದಿನ ಅನುಸೂಚಿಯನ್ನು ಪ್ರತಿಯೊಜಿಸತಕ್ಕದ್ದು; ಎಂದರೆ:

ಅನುಸೂಚಿ

(6ನೇ ಪ್ರಕರಣ ನೋಡಿ)

ಕ್ರಮ ಸಂಖ್ಯೆ	ವ್ಯಕ್ತಿಗಳ ವರ್ಗ	ಮೀಸಲಾತಿಯ ಶೇಕಡವಾರು
1.	ಅನುಸೂಚಿತ ಜಾತಿಗಳು	ಶೇಕಡ 18
2.	ಅನುಸೂಚಿತ ಪಂಗಡಗಳು	ಶೇಕಡ 5
3.	ಪ್ರವರ್ಗ – 1 (ಅತಿ ಹಿಂದುಳಿದವರಲ್ಲಿ)	ಶೇಕಡ 7
4.	ಪ್ರವರ್ಗ – 2 (ಎ) (ತುಲನಾತ್ಮಕವಾಗಿ ಹೆಚ್ಚು ಹಿಂದುಳಿದವರು)	ಶೇಕಡ 20
5.	ಪ್ರವರ್ಗ – 2 (ಬಿ) (ಹೆಚ್ಚು ಹಿಂದುಳಿದವರು)	ಶೇಕಡ 6
6.	ಪ್ರವರ್ಗ – 3 (ಎ) (ಹಿಂದುಳಿದವರು)	ಶೇಕಡ 7
7.	ಪ್ರವರ್ಗ – 3 (ಬಿ) (ತುಲನಾತ್ಮಕವಾಗಿ ಹಿಂದುಳಿದವರು)	ಶೇಕಡ 10
	ಒಟ್ಟು	ಶೇಕಡ 73

ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು:– ಪ್ರಸ್ತಾಪ ಏನೆಂದರೆ, ಈ ವಿಧೇಯಕಕ್ಕೆ ಲಗತ್ತಿಸಿರುವ ಅನುಸೂಚಿಗೆ ಬದಲಾಗಿ ಈ ಕೆಳಕಂಡ ಅನುಸೂಚಿಯನ್ನು ಪ್ರತಿಯೋಜಿಸತಕ್ಕದ್ದು.

ಅನುಸೂಚಿ

(6ನೇ ಪ್ರಕರಣ ನೋಡಿ)

ಕ್ರಮ ಸಂಖ್ಯೆ	ವ್ಯಕ್ತಿಗಳ ವರ್ಗ	ಮೀಸಲಾತಿಯ ಶೇಕಡವಾರು
1.	ಅನುಸೂಚಿತ ಜಾತಿಗಳು	ಶೇಕಡ 18
2.	ಅನುಸೂಚಿತ ಪಂಗಡಗಳು	ಶೇಕಡ 5
3.	ಪ್ರವರ್ಗ – 1 (ಅತಿ ಹಿಂದುಳಿದವರಲ್ಲಿ)	ಶೇಕಡ 7
4.	ಪ್ರವರ್ಗ – 2 (ಎ) (ತುಲನಾತ್ಮಕವಾಗಿ ಹೆಚ್ಚು ಹಿಂದುಳಿದವರು)	ಶೇಕಡ 20
5.	ಪ್ರವರ್ಗ – 3 (ಎ) (ಹೆಚ್ಚು ಹಿಂದುಳಿದವರು)	ಶೇಕಡ 6
6.	ಪ್ರವರ್ಗ – 3 (ಎ) (ಹಿಂದುಳಿದವರು)	ಶೇಕಡ 7
7.	ಪ್ರವರ್ಗ – 3 (ಬಿ) (ತುಲನಾತ್ಮಕವಾಗಿ ಹಿಂದುಳಿದವರು)	ಶೇಕಡ 10

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಅನುಸೂಚಿ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ "ಅನುಸೂಚಿ ತಿದ್ದುಪಡಿಯಾದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಹಾಗೂ ಅನುಸೂಚಿ ತಿದ್ದುಪಡಿಯಾದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಮಂತ್ರಿಗಳು:- 1994ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತಿ ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ಪ್ರಸ್ತಾಪ ಏನೆಂದರೆ, "1994ನೇ ಸಾಲಿನ ಕರ್ನಾಟಕ ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ಶೈಕ್ಷಣಿಕ ಸಂಸ್ಥೆಗಳು ಮತ್ತು ರಾಜ್ಯಾಧೀನ ಸೇವೆಗಳಲ್ಲಿ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಶಾಸನಾತ್ಮಕ ನಿರ್ಣಯ

ಅಧ್ಯಕ್ಷರು:- "ಐಟಂ ನಂ. 2 ನಂತರ ಈ ಕೆಳಕಂಡ ಐಟಂ 3ನ್ನು ಸೇರಿಸತಕ್ಕದ್ದು.

(3) ರಾಜ್ಯದ ಮೀಸಲಾತಿ ನೀತಿಯನ್ನು ಭಾರತ ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರು ನಿರ್ಣಯವನ್ನು ಮಂಡಿಸುವುದು.

ಶ್ರೀ ಕಾಗೋಡು ತಿಮ್ಮಪ್ಪ:- ಮಾನ್ಯ ಅಧ್ಯಕ್ಷರೆ, ಈ ಕೆಳಕಂಡ ನಿರ್ಣಯವನ್ನು ಸಭೆಯ ಅನುಮತಿಗಾಗಿ ಮಂಡಿಸುತ್ತಿದ್ದೇನೆ.

ಸಾಮಾಜಿಕ, ಆರ್ಥಿಕ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ ಜನರ ಅಭಿವೃದ್ಧಿಗಾಗಿ ಸರ್ಕಾರದ ಸೇವೆಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಮೀಸಲಾತಿ ನೀತಿಯು ಕರ್ನಾಟಕ ರಾಜ್ಯದಲ್ಲಿ ದೀರ್ಘ ಕಾಲದಿಂದಲೂ ಅನುಷ್ಠಾನವಾಗುತ್ತಿದೆ. ಪ್ರಸಕ್ತ ಈ ಮೀಸಲಾತಿ ನೀತಿಯು,

ಅನುಸೂಚಿತ ಜಾತಿಯವರಿಗೆ ಶೇಕಡ 18, ಅನುಸೂಚಿತ ಪಂಗಡಗಳಿಗೆ ಶೇಕಡ 5ರಷ್ಟು ಮತ್ತು ಹಿಂದುಳಿದ ವರ್ಗಗಳಿಗಾಗಿ ಶೇಕಡ 57ರಷ್ಟು ಮೀಸಲಾತಿಯನ್ನು ಕಲ್ಪಿಸಿದೆ. ಕರ್ನಾಟಕದಲ್ಲಿ ಶತಮಾನಗಳಿಂದಲೂ ತುಳಿತಕ್ಕೊಳಗಾಗಿದ್ದ ಜನರು ಮೀಸಲಾತಿ ನೀತಿಯ ಫಲವನ್ನು ಅನುಭವಿಸುತ್ತಿದ್ದಾರೆ ಹಾಗೂ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಂಡು ಆ ಮೂಲಕ ಉತ್ತಮ ಜೀವನ ಮಟ್ಟವನ್ನು ತಲುಪುವುದು ಅವರಿಗೆ ಸಾಧ್ಯವಾಗಿದೆ. ಕರ್ನಾಟಕದಲ್ಲಿ ಮೀಸಲಾತಿ ನೀತಿಯ ಮೌಲ್ಯಮಾಪನದ ಜಾಗರೂಕ ಪರಿಶೀಲನೆಯು, ಬಹುಜನರ ಅಗತ್ಯತೆಗಳಿಗೆ ಅನುಗುಣವಾಗಿ ಮೀಸಲಾತಿಯ ಪ್ರಮಾಣವು ನಿರಂತರವಾಗಿ ಹೆಚ್ಚುತ್ತಿರುವ ಹಾಗೂ ಎಂದೂ ಅದರ ಪ್ರಮಾಣವು ಕಡಿಮೆಯಾಗದಿರುವ ಚಾರಿತ್ರಿಕ ವಾಸ್ತವಾಂಶವನ್ನು ತಿಳಿಸುತ್ತದೆ.

ಹಿಂದುಳಿದ ಸಮುದಾಯಗಳು, ಜಾತಿಗಳು ಮತ್ತು ಪಂಗಡಗಳು, ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದಿರುವುದರ ಸಂಬಂಧದಲ್ಲಿ ಲಭ್ಯವಿರುವ ಎಲ್ಲ ಮಾಹಿತಿಯನ್ನು ಪರಿಗಣಿಸಿ ಮತ್ತು ಪ್ರತಿಯೊಂದು ಸಮುದಾಯದ ದಾರಿದ್ರ್ಯಮಟ್ಟ, ಅವರ ಜೀವನದ ರೀತಿ, ಜೀವನ ಮಟ್ಟ, ಅಭ್ಯಾಸ ಮತ್ತು ಪದ್ಧತಿಗಳು, ಸಾಮಾಜಿಕ ಸ್ತರಗಳಲ್ಲಿ ಅವರ ಸ್ಥಾನ ಇವುಗಳನ್ನು ಪರಿಗಣಿಸಿ ಕರ್ನಾಟಕ ಹಿಂದುಳಿದ ವರ್ಗಗಳ ಮೂರನೇ ಆಯೋಗವು ವರದಿಯನ್ನು ಸಲ್ಲಿಸಿದೆ. ರಾಜ್ಯ ಸರ್ಕಾರವು ಅಂಥ ವರದಿಯನ್ನು ಪರಿಗಣಿಸಿದೆ ಹಾಗೂ ಶ್ರೀ ವಸಂತ ಕುಮಾರ್ ಮತ್ತು ಇತರರು ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ ಮೊಕದ್ದಮೆಯಲ್ಲಿ ಭಾರದ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನಲ್ಲಿನ ಮಾರ್ಗಸೂಚಿಗಳು ಮತ್ತು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಅದರಲ್ಲೂ ವಿಶೇಷವಾಗಿ ಮಂಡಲ ಆಯೋಗದ ವರದಿಯ ಅನುಷ್ಠಾನದ ಸಂಬಂಧವಾಗಿ ಇಂದಿರಾ ಸಹಾನಿ ವಿರುದ್ಧ ಕೇಂದ್ರ ಸರ್ಕಾರ (ಎಐಆರ್ 1993 ಎಸ್‌ಸಿ 477) ಮೊಕದ್ದಮೆಯಲ್ಲಿ 16–11–1992ರಂದು ನೀಡಿದ ತೀರ್ಪು ಮತ್ತು ಮೀಸಲಾತಿಯನ್ನು ಶೇಕಡ 50ಕ್ಕೆ ಪರಿಮಿತಗೊಳಿಸಲು ರಿಟ್ ಅರ್ಜಿ ಸಂಖ್ಯೆ 488 ಮತ್ತು 471:94ರಲ್ಲಿ 9-9–94ರಂದು ಸರ್ವೋಚ್ಚ ನ್ಯಾಯಾಲಯವು ನೀಡಿದ ಮಧ್ಯಕಾಲೀನ ಆಜ್ಞೆಯನ್ನು ಸಹ ಪರಿಗಣಿಸಿದೆ.

ಕರ್ನಾಟಕ ಸರ್ಕಾರವು ಅನುಷ್ಠಾನಕ್ಕೆ ತಂದಿರುವ ಮೀಸಲಾತಿ ನೀತಿಯು ಹಿಂದುಳಿದ ವರ್ಗಗಳಿಗೆ ಸೇರಿದವರ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಹಾಗೂ ಅವರು ಇನ್ನಷ್ಟು ಉತ್ತಮ ಜೀವನ ಮಟ್ಟವನ್ನು ತಲುಪಲು ನೆರವಾಗುವ ದಿಸೆಯಲ್ಲಿ ಮುಖ್ಯ ಸಾಧನವಾಗಿದೆಯೆಂಬುದು ಕರ್ನಾಟಕ ಇತಿಹಾಸದ ಸಂಗತಿಯಾಗಿದೆ. ಆದ್ದರಿಂದ, ಈಗ ಇರುವ ಮೀಸಲಾತಿ ಮಟ್ಟವನ್ನು ಕಡೇ ಪಕ್ಷ ಶೇ. 73ರಷ್ಟರವರೆಗಾದರೂ ಮುಂದುವರಿಸಿದಲ್ಲಿ ಮಾತ್ರ, ಕರ್ನಾಟಕದಲ್ಲಿನ ಬಹುಸಂಖ್ಯಾತ ಜನರ ಅಭಿವೃದ್ಧಿಯನ್ನು ಖಚಿತ ಪಡಿಸಬಹುದೆಂಬುದಾಗಿ ಈ ವಿಧಾನಸಭೆಯು ಅಭಿಪ್ರಾಯ ಪಡುತ್ತದೆ. ಆದ್ದರಿಂದ, ಕರ್ನಾಟಕ ಸರ್ಕಾರವು ಅದರ ಮೀಸಲಾತಿ ನೀತಿಯನ್ನು ಕನಿಷ್ಟ ಪಕ್ಷ ಶೇ. 73ರ ವರೆಗೆ ಮುಂದುವರಿಸಲು ಸಾಧ್ಯವಾಗುವಂತೆ ಭಾರತದ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಗಳನ್ನು ತರುವ ಹೊರತು ಬೇರಾವುದೇ ಬದಲೀ ಕ್ರಮಗಳು ಸಾಧ್ಯವಿಲ್ಲವೆಂಬುದಾಗಿ ಕರ್ನಾಟಕ ವಿಧಾನಸಭೆಯು ಪರಿಗಣಿಸಿದೆ.

ಸಾಮಾನ್ಯ ಘಟನಾವಳಿಯಲ್ಲಿ ಸಾಮಾಜಿಕ ಬದಲಾವಣೆಗಳುಂಟಾಗುವುದು ಅನಿವಾರ್ಯ. ಬಹುಸಂಖ್ಯಾತ ಜನರ ಹಿತಾಸಕ್ತಿಯಿಂದ ಹೊಸ ಶಾಸನವನ್ನು ಅಧಿನಿಯಮಿತಿಗೊಳಿಸಲು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೀತಿಗಳಲ್ಲಿ ಬದಲಾವಣೆಗಳನ್ನು ತರಲು ಭಾರತ ಸಂವಿಧಾನದಲ್ಲಿ ಬದಲಾವಣೆಗಳನ್ನು ಮಾಡುವುದು ಉಚಿತವಷ್ಟೇ ಅಲ್ಲ, ಅವಶ್ಯಕವೂ ಆಗಿದೆ. ಭಾರತದ ಇತಿಹಾಸದಲ್ಲಿ ಈ ಹಿಂದೆಯೂ ಸಹ ಅನೇಕ ಸಂದರ್ಭಗಳಲ್ಲಿ ಇಂಥ ಬದಲಾವಣೆಗಳು ಉಂಟಾಗಿವೆ.

ಮೇಲೆ ಹೇಳಲಾದ ಸಂದರ್ಭಗಳ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯವು ಸರ್ಕಾರಿ ಸೇವೆಗಳಲ್ಲಿ ಮತ್ತು ಶೈಕ್ಷಣಿಕ ಸಂಸ್ಥೆಗಳ ಪ್ರವೇಶಾವಕಾಶದಲ್ಲಿ ಶೇಕಡ 73ರಷ್ಟು ಮೀಸಲಾತಿ ನೀತಿಯನ್ನು ಮುಂದುವರಿಸುವುದರಿಂದ ಮಾತ್ರ ಕರ್ನಾಟಕ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಜನರ ನಿರಂತರ ಪ್ರಗತಿಯನ್ನು ಖಚಿತ ಪಡಿಸಿಕೊಳ್ಳುವುದು ಮತ್ತು ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಗಳಿಗೆ ಅವಕಾಶ ಕಲ್ಪಿಸುವುದು ಸಾಧ್ಯವಾಗುವುದರಿಂದ ಕರ್ನಾಟಕ ರಾಜ್ಯವು ಶೇಕಡ 73ರಷ್ಟು ಮೀಸಲಾತಿಯನ್ನು ಮುಂದುವರಿಸುವುದು ಸಾಧ್ಯವಾಗುವಂತೆ ಭಾರತ ಸಂವಿಧಾನಕ್ಕೆ ತುರ್ತಾಗಿ ಸೂಕ್ತ ತಿದ್ದುಪಡಿಗಳನ್ನು ತರಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ವಿಧಾನಸಭೆಯು ಕೇಂದ್ರ ಸರ್ಕಾರವನ್ನು ಕೋರುತ್ತದೆ.

ಆದ್ದರಿಂದ, ಕರ್ನಾಟಕ ವಿಧಾನ ಸಭೆಯು ಮೇಲಿನ ನಿರ್ಣಯವನ್ನು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಲು ನಿರ್ಣಯಿಸಿದೆ.

ಸಭಾಧ್ಯಕ್ಷರು:– ರಾಜ್ಯದ ಮೀಸಲಾತಿ ನೀತಿಯನ್ನು ಭಾರತ ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸುವ ಬಗ್ಗೆ ಮಂಡಿಸಿದ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ. ನಿರ್ಣಯವು ಸರ್ವಾನುಮತದಿಂದ ಅಂಗೀಕಾರವಾಯಿತು.

ಅಧ್ಯಕ್ಷರು:– ಇಂದು ಬೆಳಿಗ್ಗೆ ಮಾನ್ಯ ಸದಸ್ಯರಾದ ದಯಾನಂದ ರಾವ್ ಅವರು ಪತ್ರಿಕೆಯಲ್ಲಿ ಬಂದಿದ್ದರ ಬಗ್ಗೆ ಹೇಳಿದರು. ನಾನು ಕಡತ ತರಿಸಿ ನೋಡಿದಾಗ ಆ ರೀತಿ ಏನೂ ಇಲ್ಲ. ತಮ್ಮ ಬಗ್ಗೆ ಪ್ರಸ್ತಾವನೆ ಇಲ್ಲ. ಅದನ್ನು ಹೇಳಿ ಪತ್ರಿಕೆಯವರು ತಪ್ಪು ಪ್ರತಿಬಿಂಬಿಸಿದ್ದಾರೆ? ಅದನ್ನು ಅವರು ಸುಧಾರಿಸಿ ಬರೆಬೇಕೆಂದು ನಾನು ಪತ್ರಿಕೆಯವರನ್ನು ಕೇಳಿಕೊಳ್ಳುತ್ತೇನೆ.

ಪ್ರಕಟಣೆ

ಅಧ್ಯಕ್ಷರು:– ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ:

''ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ದಿನಾಂಕ 19ನೇ ಸೆಪ್ಟೆಂಬರ್ 1994ರಂದು 'ಕೂಡಲ ಸಂಗಮ ಅಭಿವೃದ್ಧಿ ಮಂಡಲಿ ವಿಧೇಯಕ, 1994' ಯಾವುದೇ ತಿದ್ದುಪಡಿಯಿಲ್ಲದೆ ಅನುಮೋದಿಸಿತೆಂದು ತಿಳಿಸಿರುತ್ತಾರೆ.''

ಈಗ ಸಭೆಯ ಕಾರ್ಯಕಲಾಪವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿದೆ.

ಸಭೆಯು ಮಧ್ಯಾಹ್ನ 3 ಗಂಟೆ 57 ನಿಮಿಷಕ್ಕೆ ಮುಕ್ತಾಯಗೊಂಡು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲ್ಪಟ್ಟಿತು.

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದೂ ಸೂಚಿಸುತ್ತದೆ.